ಸಂಪಾದಕರು :
ಎಂ.ಎಸ್. ವಿಕಾಸ್

ಗುರುವಾರ, ನವೆಂಬರ್ 16, 2023
ದಾವಣಗೆರೆ, ಪುಟ : 6 ರೂ : 5
ಸಂಪುಟ : 50 ಸಂಚಿಕೆ : 184 RNI : 27369/75

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

50 1974 2023

janathavani@mac.com
www.janathavani.com
☎ 08192 254736 91642 99999


ಚಿತ್ರ: ರಫೀಕ್, ಜನತಾವಾಣಿ

**ಗಾಜಿನ ಮನೆಯಲ್ಲಿ ಸಂಗೀತ ಕಾರಂಜಿ**

ದಾವಣಗೆರೆಯ ಗಾಜಿನ ಮನೆಯಲ್ಲಿ ಫಲ-ಪುಷ್ಪ ಪ್ರದರ್ಶನ ಆಯೋಜಿಸಲಾಗಿದೆ. ಸೋಮವಾರ ಸಂಜೆ ಪ್ರದರ್ಶನ ಉದ್ಘಾಟಿಸಲಾಗಿದ್ದು, ವೀಕ್ಷಣೆಗೆ ಇಂದು ಕೊನೆಯ ದಿನವಾಗಿದೆ. ಚಂದ್ರಯಾನ, ವಿಶ್ವಕಪ್, ನಂದಿ ಕಲಾಕೃತಿಯ ಜೊತೆ ಜೊತೆಗೆ ಸಂಜೆ ಹಿನ್ನೆಲೆ ಸಂಗೀತದೊಂದಿಗೆ ಕಾರಂಜಿಯ ಲೇಸರ್ ಶೋ ಕಣ್ಮನ ಸೆಳೆಯುತ್ತಿದೆ.

## ಸೆಮಿ ಗೆಲ್ಲಿಸಿದ ಶಮಿ

### ಸೆಮಿ ಫೈನಲ್‌ನಲ್ಲಿ ಭಾರತಕ್ಕೆ ಜಯ

ಮುಂಬೈ, ನ. 15 – ಸ್ಫೋಟಕ ಬ್ಯಾಟಿಂಗ್ ಹಾಗೂ ಬಿಗುವಿನ ಬೌಲಿಂಗ್ ನೆರವಿನಿಂದಾಗಿ, ವಿಶ್ವಕಪ್ ಕ್ರಿಕೆಟ್‌ನ ಸೆಮಿಫೈನಲ್‌ನಲ್ಲಿ ನ್ಯೂಜಿಲ್ಯಾಂಡ್ ವಿರುದ್ಧ ಭಾರತ 70 ರನ್‌ಗಳ ಗೆಲುವು ಸಾಧಿಸುವುದರೊಂದಿಗೆ ಫೈನಲ್ ಹಂತಕ್ಕೆ ಪ್ರವೇಶ ಪಡೆದಿದೆ.

ಸೆಮಿ ಫೈನಲ್ ಪಂದ್ಯದಲ್ಲಿ ವಿರಾಟ್ ಕೊಹ್ಲಿ ಐತಿಹಾಸಿಕ 50ನೇ ಏಕದಿನ ಶತಕ ಗಳಿಸುವ ಮೂಲಕ ಭಾರತ ನಾಲ್ಕು ವಿಕೆಟ್ ನಷ್ಟಕ್ಕೆ 397 ರನ್ ಗಳಿಸಲು ನೆರವಾದರು. ಮತ್ತೊಂದೆಡೆ ಮೊಹಮ್ಮದ್ ಶಮಿ ಅತ್ಯುತ್ತಮ ಬೌಲಿಂಗ್ ಮೂಲಕ 57 ರನ್ ನೀಡಿ, ಏಳು ವಿಕೆಟ್ ಉರುಳಿಸಿದರು. ಗೆಲ್ಲಲು 398 ರನ್ ಗಳಿಸಬೇಕಿದ್ದ ನ್ಯೂಜಿಲ್ಯಾಂಡ್, 327 ರನ್‌ಗಳಿಗೆ ಎಲ್ಲಾ ವಿಕೆಟ್ ಕಳೆದುಕೊಂಡಿತು.

**70 ರನ್‌ಗಳ ಗೆಲುವಿನೊಂದಿಗೆ ಫೈನಲ್‌ಗೆ ಪಾದಾರ್ಪಣೆ**

ನಾಯಕ ರೋಹಿತ್ ಶರ್ಮ 29 ಎಸೆತಗಳಲ್ಲಿ 47 ರನ್ ಸಿಡಿಸುವ ಮೂಲಕ ಭಾರತಕ್ಕೆ ಬಿರುಸಿನ ಆರಂಭ ನೀಡಿದರು. ಶುಭಮಾನ್ ಗಿಲ್ 66 ಎಸೆತಗಳಲ್ಲಿ 80, ವಿರಾಟ್ ಕೊಹ್ಲಿ 113 ಎಸೆತಗಳಲ್ಲಿ 117, ಶ್ರೇಯಸ್ ಅಯ್ಯರ್ 70 ಎಸೆತಗಳಲ್ಲಿ 105 ಹಾಗೂ ಕೆ.ಎಲ್. ರಾಹುಲ್ 20 ಎಸೆತಗಳಲ್ಲಿ 39 ರನ್ ಗಳಿಸಿದರು.

397 ರನ್ ಗಳಿಸಿದರೂ, ಭಾರತ ಆತಂಕದ ಕ್ಷಣಗಳನ್ನು ಎದುರಿಸಬೇಕಾಯಿತು. ನ್ಯೂಜಿಲ್ಯಾಂಡ್‌ನ ಡೇರಿಲ್ ಮಿಶೆಲ್ (119 ಎಸೆತಗಳಲ್ಲಿ 134) ಹಾಗೂ ನಾಯಕ ಕೇನ್ ವಿಲಿಯಮ್ಸ್ (73 ಎಸೆತಗಳಲ್ಲಿ 69) ಮೂರನೇ ವಿಕೆಟ್‌ಗೆ 181 ರನ್ ಸೇರಿಸಿದರು. ಈ ಹಂತದಲ್ಲಿ ಕ್ಯಾಚ್ ಕೈ ಚೆಲ್ಲಲಾಯಿತು. ವಿಕೆಟ್ ಕೀಪರ್ ರಾಹುಲ್ ರನ್‌ಔಟ್ ಅವಕಾಶ ವಿಫಲಗೊಳಿಸಿದರು. ಬುಮ್ರಾ ಬೌಲಿಂಗ್‌ನಲ್ಲಿ ಮಿಶೆಲ್ ಭರ್ಜರಿ ಸಿಕ್ಸರ್ ಭಾರಿಸಿದರು. ಸ್ಪಿನ್ನರ್‌ಗಳಾದ ರವೀಂದ್ರ ಜಡೇಜಾ ಹಾಗೂ ಕುಲದೀಪ್ ಯಾದವ್ ಸಹ ರನ್ ನಿಯಂತ್ರಣದಲ್ಲಿ ವಿಫಲವಾದರು. ಮೊಹಮ್ಮದ್ ಸಿರಾಜ್ ದುಬಾರಿಯಾದರು.

ಈ ಹಂತದಲ್ಲಿ ವಿಲಿಯಮ್ಸನ್ ಹಾಗೂ ಟಾಮ್ ಲ್ಯಾಥಮ್ ಅವರ ವಿಕೆಟ್‌ಗಳನ್ನು ಶಮಿ ಒಂದರ ಹಿಂದೊಂದರಂತೆ ಉರುಳಿಸಿದ್ದು ಭಾರತಕ್ಕೆ ಸಮಾಧಾನ ತಂದಿತು. ಗ್ಲೆನ್ ಫಿಲಿಪ್ಸ್ ವಿರುದ್ಧ ಭಾರತ ಸ್ಪಿನ್ನರ್‌ಗಳನ್ನು ಬಳಸಿ ಪಂದ್ಯವನ್ನು ನಿಯಂತ್ರಣಕ್ಕೆ ತೆಗೆದುಕೊಳ್ಳುವ ಪ್ರಯತ್ನ ನಡೆಸಿತು. 37ನೇ ಓವರ್ ವೇಳೆಗೆ, ನ್ಯೂಜಿಲ್ಯಾಂಡ್ ಗೆಲ್ಲಲು ಓವರ್‌ಗೆ 12 ರನ್ ಗಳಿಸುವ ಒತ್ತಡ ಎದುರಾಯಿತು.

42ನೇ ಓವರ್‌ನಲ್ಲಿ ಕುಲ್‌ದೀಪ್ ಅವರು (3ನೇ ಪುಟಕ್ಕೆ)



## ಭದ್ರತಾ ನೋಂದಣಿ ಫಲಕ ಅಳವಡಿಕೆ ಗಡುವು ವಿಸ್ತರಣೆ



ದಾವಣಗೆರೆ, ನ. 15 - ಹೆಚ್.ಎಸ್.ಆರ್.ಪಿ. (ಹೆಚ್ಚಿನ ಭದ್ರತೆಯ ನೋಂದಣಿ ಫಲಕ) ಅಳವಡಿಕೆಯ ಗಡುವನ್ನು ಮುಂದಿನ ವರ್ಷ ಫೆಬ್ರವರಿ 17ರವರೆಗೆ ಮುಂದೂಡಲಾಗಿದೆ. ಈ ಅವಧಿಯೊಳಗೆ ಎಲ್ಲಾ ವಾಹನಗಳಿಗೆ ಹೆಚ್.ಎಸ್.ಆರ್.ಪಿ. ಫಲಕ ಅಳವಡಿಸಿಕೊಳ್ಳದೇ ಇದ್ದರೆ ದಂಡ ವಿಧಿಸಲಾಗುವುದು ಎಂದು ಪೊಲೀಸ್ ವರಿಷ್ಠಾಧಿಕಾರಿ ಉಮಾ ಪ್ರಶಾಂತ್ ತಿಳಿಸಿದರು.

ಹೆಚ್.ಎಸ್.ಆರ್.ಪಿ. ನೋಂದಣಿ ಫಲಕಗಳ ಅಳವಡಿಕೆ ಕುರಿತು ಆಯೋಜಿಸಲಾಗಿದ್ದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

**ಫೆ.17ರ ಒಳಗೆ ವಾಹನಗಳಿಗೆ ಹೆಚ್ಚಿನ ಭದ್ರತೆಯ ನೋಂದಣಿ ಫಲಕ ಅಳವಡಿಕೆಗೆ ಎಸ್ಪಿ ಸೂಚನೆ**

2019ರ ಏಪ್ರಿಲ್ ನಂತರ ನೋಂದಣಿಯಾದ ವಾಹನಗಳಿಗೆ ಹೆಚ್.ಎಸ್.ಆರ್.ಪಿ. ಅಳವಡಿಕೆಯಾಗಿದೆ. ಅದಕ್ಕೂ ಮೊದಲು ನೋಂದಣಿಯಾದ ಜಿಲ್ಲೆಯ 6.16 ಲಕ್ಷ ವಾಹನಗಳಿಗೆ ಹೆಚ್.ಎಸ್.ಆರ್.ಪಿ. ಅಳವಡಿಕೆಯಾಗಬೇಕಿದೆ ಎಂದು ತಿಳಿಸಿದರು.

ಹೆಚ್.ಎಸ್.ಆರ್.ಪಿ.ಗಾಗಿ ಗ್ರಾಹಕರು www.siam.in ಹಾಗೂ https://bookmyhsrp.com ವೆಬ್ ತಾಣಗಳಲ್ಲಿ ನೋಂದಣಿ ಮಾಡಿಸಿಕೊಳ್ಳಬೇಕು ನಂತರ ಆಯ್ದ ಕೇಂದ್ರಗಳಲ್ಲಿ ಫಲಕ ಅಳವಡಿಸಿಕೊಳ್ಳಬೇಕು ಎಂದವರು ಹೇಳಿದರು.

ಈ ಹಿಂದೆ ನ.17ರವರೆಗೆ ಫಲಕಗಳ ಅಳವಡಿಕೆ ಗಡುವಿತ್ತು. ಅದನ್ನು ಈಗ ಮೂರು ತಿಂಗಳು ವಿಸ್ತರಿಸಲಾಗಿದೆ. ಈ (3ನೇ ಪುಟಕ್ಕೆ)

### ರೈತರಿಗೂ ನಿಯಮ ಅನ್ವಯ ಹೊಸ ವಾಹನಕ್ಕೂ ವಿನಾಯಿತಿ ಇಲ್ಲ

**ಹೊಸ ವಾಹನಗಳ ಖರೀದಿಸಿದ ಸಂದರ್ಭದಲ್ಲಿ ಹೆಚ್.ಎಸ್.ಆರ್.ಪಿ. ಫಲಕಗಳು ಬರುವುದು ವಾರ ಕಾಲ ವಿಳಂಬವಾಗುತ್ತಿದೆ. ಅಲ್ಲಿಯವರೆಗೆ ನೋಂದಣಿ ಫಲಕವಿಲ್ಲದೇ ವಾಹನ ಚಲಾಯಿಸಲು ಅನುಮತಿ ಕೊಡಬೇಕು ಎಂದು ಶೋರೂಂಗಳ ಪ್ರತಿನಿಧಿಗಳು ಮನವಿ ಮಾಡಿಕೊಂಡರು. ಅಲ್ಲದೇ, ರೈತರು ತಮ್ಮ ಟ್ರ್ಯಾಕ್ಟರ್‌ಗಳಿಗೆ ಹೆಚ್.ಎಸ್.ಆರ್.ಪಿ. ಫಲಕ ಅಳವಡಿಸಿಕೊಳ್ಳಲು ಆಸಕ್ತಿ ತೋರುತ್ತಿಲ್ಲ. ಈ ಬಗ್ಗೆ ಅರಿವು ಮೂಡಿಸಬೇಕೆಂದೂ ಪ್ರತಿನಿಧಿಗಳು ಕೋರಿದರು. ಈ ಬಗ್ಗೆ ಪ್ರತಿಕ್ರಿಯಿಸಿದ ಎಸ್ಪಿ ಉಮಾ ಪ್ರಶಾಂತ್, ಶೋ ರೂಂನಿಂದ ವಾಹನ ತರುವಾಗಲೇ ನೋಂದಣಿ ಫಲಕ ಕಡ್ಡಾಯ. ಇದರಲ್ಲಿ ಯಾವುದೇ ವಿನಾಯಿತಿ ಇಲ್ಲ. ರೈತರ ವಾಹನಗಳಿಗೂ ಹೆಚ್.ಎಸ್.ಆರ್.ಪಿ. ನಿಯಮ ಅನ್ವಯವಾಗುತ್ತದೆ ಎಂದು ತಿಳಿಸಿದರು.**

### ಖಾಸಗಿ ಶೋ ರೂಂನಲ್ಲಿ ಹೆಚ್ಚುವರಿ ಹಣ ವಸೂಲಿ

**ನಗರದ ಖಾಸಗಿ ಶೋ ರೂಂ ಒಂದರಲ್ಲಿ ಹೆಚ್.ಎಸ್.ಆರ್.ಪಿ. ಅಳವಡಿಕೆಗೆ ಹೆಚ್ಚುವರಿಯಾಗಿ 100 ರೂ. ಪಡೆಯಲಾಗುತ್ತಿದೆ. ಹಣ ಕೊಡದೇ ಇದ್ದರೆ ಫಲಕ ಅಳವಡಿಸುವುದಿಲ್ಲ ಎಂದು ತಿಳಿಸಲಾಗುತ್ತಿದೆ ಎಂದು ಸಭೆಯಲ್ಲಿ ದೂರಲಾಯಿತು. ಹೆಚ್.ಎಸ್.ಆರ್.ಪಿ.ಗಾಗಿ ಆನ್‌ಲೈನ್‌ನಲ್ಲಿ ಹಣ ಪಾವತಿಸುವಾಗಲೇ ಅಳವಡಿಕೆ ಶುಲ್ಕ ಪಡೆಯಲಾಗಿರುತ್ತದೆ. ಹೆಚ್ಚುವರಿ ಶುಲ್ಕ ಪಡೆಯುವುದರ ಬಗ್ಗೆ ಕ್ರಮ ತೆಗೆದುಕೊಳ್ಳುವುದಾಗಿ ಎಸ್ಪಿ ಉಮಾ ಪ್ರಶಾಂತ್ ತಿಳಿಸಿದರು.**

## ಆಪರೇಷನ್ ಅಗತ್ಯವೇ ಇಲ್ಲ

### ದುಷ್ಟ ಸರ್ಕಾರಕ್ಕೆ ಶಾಸಕರಿಂದಲೇ ಪಾಠ: ವಿಜಯೇಂದ್ರ



ಬೆಂಗಳೂರು, ನ. 15 - ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರದ ಪತನಕ್ಕೆ ಆಪರೇಷನ್ ಕಮಲದ ಅಗತ್ಯವಿಲ್ಲ, ಈ ದುಷ್ಟ ಸರ್ಕಾರಕ್ಕೆ ಆ ಪಕ್ಷದ ಶಾಸಕರೇ ಪಾಠ ಕಲಿಸುವ ಸಮಯ ದೂರ ಉಳಿದಿಲ್ಲ ಎಂದು ಬಿಜೆಪಿ ನೂತನ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ತಿಳಿಸಿದ್ದಾರೆ.

ಪಕ್ಷದ ಕಚೇರಿಯಲ್ಲಿ ನಿರ್ಗಮಿತ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಅವರಿಂದ ಪಕ್ಷದ ಬಾವುಟ ಸ್ವೀಕರಿಸುವ ಮೂಲಕ ರಾಜ್ಯಾಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡ ನಂತರ ನಡೆದ ಸುದ್ದಿಗೋಷ್ಠಿಯಲ್ಲಿ ಕಾಂಗ್ರೆಸ್ ಸರ್ಕಾರವನ್ನು ತರಾಟೆಗೆ ತೆಗೆದುಕೊಂಡರು.

ಆಡಳಿತ ಪಕ್ಷದ ಶಾಸಕರೇ ಅವರ ಕ್ಷೇತ್ರಗಳಲ್ಲಿ ಓಡಾಡದಂತಾಗಿದೆ. ಸರ್ಕಾರದಿಂದ ಒಂದು ರೂಪಾಯಿ ಅನುದಾನ ಸಿಗುತ್ತಿಲ್ಲ. ಈ ದುಷ್ಟ ಸರ್ಕಾರಕ್ಕೆ ಕಾಂಗ್ರೆಸ್ ಶಾಸಕರೇ ತಕ್ಕ ಪಾಠ ಕಲಿಸುತ್ತಾರೆ ಎಂಬ ವಿಶ್ವಾಸ ವ್ಯಕ್ತಪಡಿಸಿದರು. ಹಿಂದಿನ ನಮ್ಮ ಸರ್ಕಾರವನ್ನು ಶೇ.40ರಷ್ಟು ಸರ್ಕಾರವೆಂದು ಟೀಕಿಸಿದ್ದರು. ಮತದಾರರು ಅದನ್ನು ನಂಬಿದರು. ಕಾಂಗ್ರೆಸ್ ಸರ್ಕಾರ ಬಂದು 6 ತಿಂಗಳಾಗಿದೆ. ಹಗಲು ದರೋಡೆ, ಭ್ರಷ್ಟಾಚಾರ ಮೇರೆ ಮೀರಿದೆ. ಶೇ.40ರಷ್ಟು ಕಮೀಷನ್, ಭ್ರಷ್ಟಾಚಾರದ ಅನುಷ್ಠಾನ ಈ ಸರ್ಕಾರದಿಂದ ಅವ್ಯಾಹತವಾಗಿ ನಡೆಯುತ್ತಿದೆ ಎಂದು ಆರೋಪಿಸಿದರು.

ಇವರ ದುರಾಡಳಿತವನ್ನೇ ಜನರ ಮುಂದಿಟ್ಟು ಲೋಕಸಭಾ ಚುನಾವಣೆಯಲ್ಲಿ ಎಲ್ಲಾ 28 ಸ್ಥಾನಗಳನ್ನು ಗೆದ್ದು, ಕಾಂಗ್ರೆಸ್ ಸರ್ಕಾರಕ್ಕೆ (3ನೇ ಪುಟಕ್ಕೆ)

### ಕುಮಾರಸ್ವಾಮಿ ವಿರುದ್ಧ 'ವಿದ್ಯುತ್ ಕದ್ದ' ಆರೋಪ

ಬೆಂಗಳೂರು, ನ. 14 – ಜೆಡಿಎಸ್ ರಾಜ್ಯಾಧ್ಯಕ್ಷ ಹಾಗೂ ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ವಿದ್ಯುತ್ ಕದ್ದಿದ್ದಾರೆ ಎಂದು ಬೆಸ್ಕಾಂ ಪ್ರಕರಣ ದಾಖಲಿಸಿದೆ.

ದೀಪಾವಳಿಯ ಸಂದರ್ಭದಲ್ಲಿ ಜೆ.ಪಿ. ನಗರದಲ್ಲಿರುವ ಅವರ ನಿವಾಸಕ್ಕೆ ದೀಪಾಲಂಕಾರ ಮಾಡಲು ಅಕ್ರಮವಾಗಿ ವಿದ್ಯುತ್ ಪಡೆಯಲಾಗಿತ್ತು ಎಂದು ಆರೋಪಿಸಲಾಗಿದೆ.

**ಪ್ರಕರಣ ದಾಖಲಿಸಿದ ಬೆಸ್ಕಾಂ**

ಈ ಹಿನ್ನೆಲೆಯಲ್ಲಿ ಬೆಸ್ಕಾಂನ ವಿಚಕ್ಷಣ ವಿಭಾಗವು ಭಾರತೀಯ ವಿದ್ಯುತ್ ಕಾಯ್ದೆ (ವಿದ್ಯುತ್ ಕಳ್ಳತನ) ಸೆಕ್ಷನ್ 135ರ ಅಡಿಯಲ್ಲಿ ಪ್ರಕರಣ ದಾಖಲಿಸಿದೆ.

ಕುಮಾರಸ್ವಾಮಿ ಅವರ ಮನೆಗೆ ಅಕ್ರಮವಾಗಿ ವಿದ್ಯುತ್ ಪಡೆಯಲಾಗಿದೆ ಎಂದು ಸಾಮಾಜಿಕ (4ನೇ ಪುಟಕ್ಕೆ)

### ಪಿಎಂ - ಕಿಸಾನ್ ಯೋಜನೆಯ 15ನೇ ಕಂತಿನ ಹಣ ಬಿಡುಗಡೆ

ನವದೆಹಲಿ, ನ. 15 – ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಪಿಎಂ - ಕಿಸಾನ್ ಯೋಜನೆಯ 15ನೇ ಕಂತಿನ 18 ಸಾವಿರ ಕೋಟಿ ರೂ.ಗಳನ್ನು ರೈತರ ಖಾತೆಗಳಿಗೆ ಜಮಾ ಮಾಡಿದ್ದಾರೆ.

ಜಾರ್ಖಂಡ್‌ನ ಖುಂಟಿ ಜಿಲ್ಲೆಯಲ್ಲಿ ಆಯೋಜಿಸಲಾದ ಜನಜಾತಿಯ ಗೌರವ್ ದಿವಸ್ ಕಾರ್ಯಕ್ರಮದ ವೇಳೆ ಪ್ರಧಾನಿ ದೇಶದ 8 ಕೋಟಿ ರೈತರ ಖಾತೆಗಳಿಗೆ ಈ ಹಣ ಜಮಾ ಮಾಡಿದ್ದಾರೆ. ಈ ಯೋಜನೆಯ ಅನ್ವಯ ಪ್ರತಿ ವರ್ಷ ರೈತರ ಖಾತೆಗಳಿಗೆ 6 ಸಾವಿರ ರೂ.ಗಳನ್ನು ಜಮಾ ಮಾಡಲಾಗುತ್ತದೆ. ಹಣವನ್ನು ಮೂರು ಕಂತುಗಳಲ್ಲಿ ನೀಡಲಾಗುತ್ತದೆ. ಇದುವರೆಗೂ 2.62 ಲಕ್ಷ ಕೋಟಿ ರೂ.ಗಳನ್ನು ರೈತರ ಖಾತೆಗಳಿಗೆ ಜಮಾ ಮಾಡಲಾಗಿದೆ. ಛತ್ತೀಸ್‌ಘಡ ಹಾಗೂ ಮಧ್ಯ ಪ್ರದೇಶಗಳ ವಿಧಾನಸಭೆಗಳಿಗೆ ಚುನಾವಣೆ ನಡೆಯುವ 2 ದಿನಗಳ ಮುಂಚೆ ಹಣ ಬಿಡುಗಡೆ ಮಾಡಿರುವುದನ್ನು ಕಾಂಗ್ರೆಸ್ ಪ್ರಶ್ನಿಸಿದ್ದು, ಇದು ಉದ್ದೇಶಪೂರ್ವಕವೇ ಎಂದು ಕೇಳಿದೆ. ನವೆಂಬರ್ 17ರಂದು ಮಧ್ಯಪ್ರದೇಶ ವಿಧಾನಸಭೆಗೆ ಚುನಾವಣೆ ನಡೆಯಲಿದೆ. ಛತ್ತೀಸ್‌ಘಡದಲ್ಲಿ 2ನೇ ಹಂತದ ಚುನಾವಣೆ ನಡೆಯಲಿದೆ.

### ಬರ:ಕೇಂದ್ರ ಸಚಿವರಿಗೆ ಸಿಎಂ ಪತ್ರ

ಬೆಂಗಳೂರು, ನ. 15 – ರಾಜ್ಯಕ್ಕೆ ಬರ ಪರಿಹಾರ ಬಿಡುಗಡೆ ಮಾಡುವ ಪ್ರಕ್ರಿಯೆ ತ್ವರಿತಗೊಳಿಸುವಂತೆ ಕೇಂದ್ರ ಗೃಹ ಸಚಿವ ಅಮಿತ್ ಷಾ, ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಹಾಗೂ ಕೃಷಿ ಸಚಿವ ನರೇಂದ್ರ ಸಿಂಗ್ ತೋಮರ್ ಅವರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರತ್ಯೇಕ ಪತ್ರಗಳನ್ನು ಬರೆದಿದ್ದಾರೆ. ರಾಜ್ಯದಲ್ಲಿ ಈ ವರ್ಷ ಸುರಿದ ಮಳೆಯ ಪ್ರಮಾಣ 122 ವರ್ಷಗಳಲ್ಲೇ ಕಡಿಮೆ ಇದೆ. ರಾಜ್ಯದ 236 ತಾಲ್ಲೂಕುಗಳ ಪೈಕಿ 223 ತಾಲ್ಲೂಕುಗಳ ಬರ ಪೀಡಿತವಾಗಿವೆ ಎಂದು ಸಿದ್ದರಾಮಯ್ಯ (3ನೇ ಪುಟಕ್ಕೆ)

### 17ರಂದು ವಿಪಕ್ಷ ನಾಯಕನ ಆಯ್ಕೆ ಸಾಧ್ಯತೆ

ಬೆಂಗಳೂರು, ಅ. 15 – ಬಿಜೆಪಿ ಶಾಸಕಾಂಗ ಪಕ್ಷದ ಸಭೆ ನವೆಂಬರ್ 17ರಂದು ನಡೆಯಲಿದೆ. ಅಂದು ಪ್ರತಿಪಕ್ಷದ ನಾಯಕನ ಘೋಷಣೆ ಸಾಧ್ಯತೆ ಇದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಹೇಳಿದ್ದಾರೆ. ಶುಕ್ರವಾರ ಸಂಜೆ 6 ಗಂಟೆಗೆ ಶಾಸಕಾಂಗ ಪಕ್ಷದ ಸಭೆ (3ನೇ ಪುಟಕ್ಕೆ)

## ಮೀಟರ್ ಕಡ್ಡಾಯ ಜಾರಿಯಾಗಲೇ ಇಲ್ಲ

## ಆಟೋ ಬಾಡಿಗೆ ಕೇಳಿ ದಂಗಾಗುವುದು ತಪ್ಪಲೇ ಇಲ್ಲ

ದಾವಣಗೆರೆ, ಅ. 8- ಬಸ್ ನಿಲ್ದಾಣಗಳ ಬಳಿ ಅಥವಾ ರೈಲ್ವೇ ನಿಲ್ದಾಣಗಳ ಬಳಿಯಿಂದ ಒಂದೆರಡು ಕಿಲೋ ಮೀಟರ್ ದೂರದ ಸ್ಥಳಕ್ಕೆ ತಲುಪಲು ಆಟೋ ವಿಚಾರಿಸಿ ನೋಡಿ, ಚಾಲಕರು ಹೇಳುವ ದರಕ್ಕೆ ದಂಗಾಗಲೇ ಬೇಕು.

ಅಲ್ಲಿ ಬಾಡಿಗೆ ದರ ಶುರುವಾಗುವುದೇ 100 ರೂ. ಮೇಲ್ಪಟ್ಟು. ಇನ್ನು ನಗರದ ಒಳಗೆ ಒಂದು ಕಡೆಯಿಂದ ಮತ್ತೊಂದು ಕಡೆ ಸಾಗಬೇಕಾದರೆ 60, 70, 80 ಹೀಗೆ ಆಟೋ ಚಾಲಕರು ಕೇಳುವ ದರಕ್ಕೆ ಜನ ಸಾಮಾನ್ಯರು ಕೆಲ ಕ್ಷಣ ದಂಗಾಗಿ ಬಿಡುತ್ತಾರೆ. ಅಷ್ಟೊಂದಾ? ಎಂದು ಹೌಹಾರುತ್ತಾರೆ. ಕೆಲವರು ಚೌಕಾಶಿ ಮಾಡಿದರೆ ಮತ್ತೆ ಕೆಲವರು ಬೇಡ ಎಂದು ಮುಂದೆ ಸಾಗುತ್ತಾರೆ.

ಪೊಲೀಸ್ ಇಲಾಖೆ ಆಟೋಗಳಿಗೆ ಮೀಟರ್ ಕಡ್ಡಾಯ ಎಂದು ಕಳೆದ ಇಪ್ಪತ್ತೈದು ವರ್ಷಗಳಿಂದ ಹೇಳುತ್ತಲೇ ಬಂದಿದೆ. ಆದರೆ ಇದುವರೆಗೂ ಮೀಟರ್ ಕಡ್ಡಾಯವಾಗಲೇ ಇಲ್ಲ. ಸಾರ್ವಜನಿಕರ ಸುಲಿಗೆ ತಪ್ಪಲೇ ಇಲ್ಲ.

ಈ ಹಿಂದೆ ಎಸ್ಪಿ ಸಿ.ಬಿ. ರಿಷ್ಯಂತ್ ಆಟೋಗಳಿಗೆ ಮೀಟರ್ ಕಡ್ಡಾಯಗೊಳಿಸಿ ಆದೇಶಿಸಿದ್ದರು. ಮೀಟರ್ ಇಲ್ಲದ ಆಟೋ ಡ್ರೈವರ್‌ಗಳ ಲೈಸನ್ಸ್ ರದ್ದು ಮಾಡುವ ಖಡಕ್ ಎಚ್ಚರಿಕೆಯನ್ನೂ ನೀಡಿದ್ದರು. ಆದರೆ ಮತ್ತದೇ ಮೀಟರ್ ರಹಿತ ಆಟೋಗಳು ಸಂಚರಿಸಿದವು.

ದಾವಣಗೆರೆಯಲ್ಲಿ ರಸ್ತೆಗಳಲ್ಲಿ ಗುಂಡಿಗಳು ಬಿದ್ದಿವೆ. ಸಂಚಾರಕ್ಕೆ ತೊಂದರೆ ಆಗುತ್ತೆ. ಪೆಟ್ರೋಲ್, ಗ್ಯಾಸ್ ಬೆಲೆ ಗಗನಕ್ಕೇರಿದೆ. ಮನೆ ಬಾಡಿಗೆ, ಮಕ್ಕಳ ವಿದ್ಯಾಭ್ಯಾಸ, ಖರ್ಚು-ವೆಚ್ಚ ನಿರ್ವಹಣೆ ಮಾಡುವುದೇ ಕಷ್ಟ. ಇಂಥ ಪರಿಸ್ಥಿತಿಯಲ್ಲಿ ಪೊಲೀಸ್ ಇಲಾಖೆ ಇಂಥ ಕಠಿಣ ನಿರ್ಧಾರಕ್ಕೆ ಬಂದರೆ ಹೇಗೆ? ಎಂದು ಆಟೋ ಚಾಲಕರು ಮೀಟರ್ ಕಡ್ಡಾಯ ನಿರ್ಧಾರಕ್ಕೆ ವಿರೋಧ ವ್ಯಕ್ತಪಡಿಸಿದ್ದರು.

ಕಾನೂನು ಪ್ರಕಾರ ಆಟೋ ರಿಕ್ಷಾಗಳಲ್ಲಿ ಮೀಟರ್ ಅಳವಡಿಸಬೇಕು, ಅದನ್ನು ಸ್ವಾಗತಿಸುತ್ತೇವೆ. ಆದರೆ, ಈಗಾಗಲೇ ಸಾರ್ವಜನಿಕರು ಮತ್ತು ಆಟೋದವರು ಬಾಡಿಗೆಗೆ ಫಿಕ್ಸ್ ಆಗಿದ್ದಾರೆ. ಬೆಂಗಳೂರಿನಂತಹ ಬೆಳೆದಿರುವ ಸಿಟಿಗಳಲ್ಲಿ ಜನರು ಮೀಟರ್ ಬಾಡಿಗೆ ಆಧಾರದಲ್ಲಿ ಓಡಾಡುವುದನ್ನು ರೂಢಿಸಿಕೊಂಡಿದ್ದಾರೆ. ಆದರೆ ದಾವಣಗೆರೆಯಂತಹ ನಗರಗಳಲ್ಲಿ ಮೀಟರ್ ಬಾಡಿಗೆ ಬಗ್ಗೆ ಹೆಚ್ಚು ಮಾಹಿತಿ ಇಲ್ಲ. ಇಂತಿಷ್ಟು ಬಾಡಿಗೆ ಎಂದು ಓಡಾಡುವುದು ಮಾಮೂಲು ಆಗಿರುವುದರಿಂದ ಮೀಟರ್ (3ನೇ ಪುಟಕ್ಕೆ)



**ಕಳೆದ ವಾರ ಮಧ್ಯಾಹ್ನ 3.30ರ ಸುಮಾರಿಗೆ ರೈಲ್ವೇ ನಿಲ್ದಾಣದಿಂದ ಕೆಟಿಜೆ ನಗರಕ್ಕೆ ಆಟೋ ಕೇಳಿದೆವು. ಚಾಲಕ 120 ರೂ. ಕೇಳಿದ. ಮೀಟರ್ ಅಳವಡಿಸಿದ್ದರೆ ಬಾಡಿಗೆ ಎಷ್ಟಿದೆಯೋ ಅಷ್ಟು ಕೊಡಬಹುದು. ಈ ರೀತಿ ಸುಲಿಗೆ ನ್ಯಾಯವೇ?**

**- ಎ.ಬಿ. ಚೈತ್ರಾ, ಗೃಹಿಣಿ**


ಜನತಾವಾಣಿ
ಆಟೋಗಳಿಗೆ ಮೀಟರ್ ಕಡ್ಡಾಯ

**ಕಳೆದ ಇಪ್ಪತ್ತೈದು ವರ್ಷಗಳ ಹಿಂದೆ ಅಂದಿನ ಜಿಲ್ಲಾಧಿಕಾರಿ ಅನಿಲ್ ಕುಮಾರ್ ಅವರು ಆಟೋಗಳಿಗೆ ಮೀಟರ್ ಕಡ್ಡಾಯ ಮಾಡುವುದಾಗಿ ನೀಡಿದ್ದ ಹೇಳಿಕೆ ಪತ್ರಿಕೆಯಲ್ಲಿ ಪ್ರಕಟಗೊಂಡಿದ್ದನ್ನು ಕಳುಹಿಸಿರುವ 'ಜನತಾವಾಣಿ' ಓದುಗರಲ್ಲೊಬ್ಬರಾದ ಹಿರಿಯ ಜ್ಯೋತಿಷಿ ಸಿ.ಕೆ. ಆನಂದತೀರ್ಥಾಚಾರ್, 'ವರದಿ ಪ್ರಕಟವಾಗಿ 25 ವರ್ಷಗಳು ಕಳೆದರೂ ದಾವಣಗೆರೆ ಆಟೋಗಳಿಗೆ ಮೀಟರ್ ಭಾಗ್ಯ ಇನ್ನೂ ಬಂದಿಲ್ಲ' ಎಂದು ಬೇಸರ ವ್ಯಕ್ತಪಡಿಸಿದ್ದಾರೆ.**


## ಗ್ರಾಮಸ್ಥರ ಸಮಸ್ಯೆ ಆಲಿಸಿದ ಶಾಸಕ ಬಸವಂತಪ್ಪ

ದಾವಣಗೆರೆ, ನ. 15 - ಮಾಯಕೊಂಡ ಕ್ಷೇತ್ರ ವ್ಯಾಪ್ತಿಯ ವಿವಿಧ ಗ್ರಾಮಗಳಿಗೆ ಭೇಟಿ ನೀಡಿದ್ದ ಶಾಸಕ ಕೆ.ಎಸ್.ಬಸವಂತಪ್ಪ, ಗ್ರಾಮಸ್ಥರ ಸಮಸ್ಯೆಗಳನ್ನು ಆಲಿಸಿದರು. ಇದೇ ಸಂದರ್ಭದಲ್ಲಿ ಗ್ರಾಮಸ್ಥರಿಗೆ ದೀಪಾವಳಿ ಹಬ್ಬದ ಶುಭಾಶಯ ಕೋರಿದರು.

ಮಂಗಳವಾರ ಬೆಳಿಗ್ಗೆ ಮಾಯಕೊಂಡ ಕ್ಷೇತ್ರ ವ್ಯಾಪ್ತಿಯ ಕಂಸಾಗರ, ಯಲೋದಹಳ್ಳಿ, ದಾಗಿನ ಕಟ್ಟೆ, ಬಸವಾಪಟ್ಟಣ, ಮರಬನಹಳ್ಳಿ ಗ್ರಾಮಗಳಿಗೆ ಭೇಟಿ ನೀಡಿದ ಶಾಸಕ ಕೆ.ಎಸ್. ಬಸವಂತಪ್ಪ ಗ್ರಾಮಸ್ಥರ ಸಮಸ್ಯೆಗಳನ್ನು ಆಲಿಸಿ, ವಿವಿಧ ಅಭಿವೃದ್ಧಿ ಕಾಮಗಾರಿಗಳ ಪರಿಶೀಲನೆ ನಡೆಸಿದರು.

ಇತ್ತೀಚೆಗೆ ಮೈಮೇಲೆ ಬಿಸಿ ಸಾಂಬಾರು ಬಿದ್ದು ಬಾಲಕ ಸಮರ್ಥ್ ಮೃತಪಟ್ಟಿದ್ದ. ಯಲೋದಹಳ್ಳಿ ಗ್ರಾಮದ ಶೃತಿ ಹನುಮಂತಪ್ಪ ಅವರ ನಿವಾಸಕ್ಕೆ ಭೇಟಿ ನೀಡಿ, ಕುಟುಂಬ ಸದಸ್ಯರಿಗೆ ಸಾಂತ್ವನ ಹೇಳಿದರು.

ಬಳಿಕ ಕಂಸಾಗರಕ್ಕೆ ಭೇಟಿ ನೀಡಿದ ಶಾಸಕರು, ಗ್ರಾಮದಲ್ಲಿ ನಡೆಯುತ್ತಿರುವ ಚರಂಡಿ ಅಭಿವೃದ್ಧಿ ಕಾಮಗಾರಿ ವೀಕ್ಷಿಸಿದರು. ಇದೇ ಸಂದರ್ಭದಲ್ಲಿ ಗ್ರಾಮಸ್ಥರು ದೇವಸ್ಥಾನ ಅಭಿವೃದ್ಧಿ, ರಸ್ತೆಯ ಅಭಿವೃದ್ಧಿ ಮಾಡುವಂತೆ ಮನವಿ ಸಲ್ಲಿಸಿದರು. ಇದೇ ವೇಳೆ ಧಾರಾಕಾರವಾಗಿ ಸುರಿದ ಮಳೆಗೆ ಮನೆಗಳು ಬಿದ್ದ ನಿರಾಶ್ರಿತರಾದವರಿಗೆ, ಗ್ರಾಮ ಪಂಚಾಯಿತಿಯಿಂದ ಮನೆ ನಿರ್ಮಾಣ ಮಾಡಿಕೊಡುವಂತೆ ಮನವಿ ಮಾಡಿದರು. ನಂತರ ಗ್ರಾಮದಲ್ಲಿ ಮಳೆಗೆ ಬಿದ್ದ ಮನೆಗಳನ್ನು ವೀಕ್ಷಿಸಿದರು. ಜಿಲ್ಲಾ (3ನೇ ಪುಟಕ್ಕೆ)




# ಡಾ. ಪಿ.ಎಂ. ಅನುರಾಧ ಅವರ ಕವನ ಸಂಕಲನ 'ಒಲೆಯೊಳಗಣ ಕಿಚ್ಚು' ಇಂದು ಲೋಕಾರ್ಪಣೆ

ಭಾರತೀಯ ಪರಂಪರೆಯಲ್ಲಿ ಅಕ್ಷರ ಕಲಿಸಿ, ಬದುಕಿನ ಬೆಳಕಿಗೆ ಜ್ಞಾನಧಾರೆ ಎರೆಯುವ ಗುರುವಿಗೆ ಅತ್ಯುತ್ಕೃಷ್ಟವಾದ ಸ್ಥಾನವಿದೆ. ಆ ಸ್ಥಾನ-ಗೌರವವನ್ನು ಶಿಷ್ಯರು ಪ್ರದಾನ ಮಾಡುತ್ತಾರೆ. ಹೀಗೆ ಗೌರವದ ಸ್ಥಾನವನ್ನು ದಾವಣಗೆರೆ ನಗರದ ಎ.ವಿ. ಕಮಲಮ್ಮ ಮಹಿಳಾ ಪದವಿ ಕಾಲೇಜಿನ ವಿಶ್ರಾಂತ ಪ್ರಾಧ್ಯಾಪಕರಾದ ಡಾ. ಪಿ.ಎಂ. ಅನುರಾಧ ಅವರು ತಮ್ಮದಾಗಿಸಿಕೊಳ್ಳುವಲ್ಲಿ ಸಫಲರಾಗಿದ್ದಾರೆ ಎನ್ನುವುದು ಪ್ರಶಂಸನೀಯ. ಸತತ 35 ವರ್ಷಗಳಿಂದ ವಿದ್ಯಾರ್ಥಿನಿಯರಲ್ಲಿ ಆಂಗ್ಲ ಭಾಷೆ ಮತ್ತು ಸಾಹಿತ್ಯದ ಒಲವು-ಒಳ ನೋಟಗಳನ್ನು, ಗಟ್ಟಿಗೊಳಿಸುತ್ತಾ ಶಿಷ್ಯ ಕೋಟಿಗೆ 'ಅಚ್ಚುಮೆಚ್ಚಿನ ಅನು ಮ್ಯಾಮ್' ಎನಿಸಿಕೊಂಡಿದ್ದಾರೆ. ಅವರ ತರಗತಿಗಳೆಂದರೆ ನವರಸ ಬೆರೆತ ಜ್ಞಾನ ಖನಿಜ, ಆಂಗ್ಲಭಾಷೆ ಅಧ್ಯಾಪಕಿಯಾಗಿದ್ದರೂ ಅವರಿಗಿದ್ದ ಕನ್ನಡ ಸಾಹಿತ್ಯದ ತಲಸ್ಪರ್ಶಿ ಓದು ಮತ್ತು ವಿಮರ್ಶಾ ನೆಲೆ ಎಂತಹವರನ್ನೂ ಬೆರಗುಗೊಳಿಸುವಂತಹದ್ದು. ಮಾತು ತುಸು ಕಡಿಮೆ ಎನಿಸಿದರೂ ಅವರ ಕೆಲವೇ ಕೆಲವು ನುಡಿಗಳು ಗಂಭೀರವೂ, ವಿಚಾರ ಯೋಗ್ಯವೂ, ಅರ್ಥಪೂರ್ಣವೂ ಆಗಿದ್ದು, ಕೇಳುಗರನ್ನು ಮಂತ್ರಮುಗ್ಧರನ್ನಾಗಿಸುತ್ತವೆ.

ಕನ್ನಡ ಮತ್ತು ಆಂಗ್ಲ ಭಾಷೆಗಳ ಮೇಲೆ ಸಶಕ್ತ ಹಿಡಿತವಿಟ್ಟುಕೊಂಡಿರುವ ಇವರು 2014ರಲ್ಲಿ 'The Mythical world of Dr. Chandrashekhar Kambar: A study of his major plays' ಎಂಬ ವಿಷಯದ ಅಡಿಯಲ್ಲಿ ಮಹಾಪ್ರಬಂಧ ಸಲ್ಲಿಸಿ ಪಿ.ಹೆಚ್‌ಡಿ. ಪದವಿಯನ್ನು ಪಡೆದರು. ಈ ಮಹಾಪ್ರಬಂಧದ ರಚನೆ ಇವರ ರಂಗ ಚಟುವಟಿಕೆಗಳಿಗೆ ಮತ್ತಷ್ಟು ಅರ್ಥ, ಶಕ್ತಿ ಮತ್ತು ವ್ಯಾಪ್ತಿಯನ್ನು ನೀಡುವಲ್ಲಿ ಸಹಕಾರಿಯಾಯಿತು.

ಗ್ರಾಮೀಣ ಭಾಗದ ವಿದ್ಯಾರ್ಥಿನಿಯರಿಗೆ ಕಬ್ಬಿಣದ ಕಡಲೆಯಾದ ಇಂಗ್ಲಿಷ್ ಭಾಷೆಯನ್ನು ಕಲಿಸಲು ವಿಶೇಷ ಸಂವಹನ ಕೌಶಲ್ಯ ತರಬೇತಿ ಶಿಬಿರಗಳನ್ನು, ಕಾರ್ಯಾಗಾರಗಳನ್ನು, ವಿಚಾರ ಸಂಕಿರಣಗಳನ್ನು, ವಿಶೇಷ ಉಪನ್ಯಾಸಗಳನ್ನು ಮತ್ತು ಸಮ್ಮೇಳನಗಳನ್ನು ಆಯೋಜಿಸುತ್ತಾ ವಿದ್ಯಾರ್ಥಿನಿಯರ ಮೆಚ್ಚುಗೆ ಗಳಿಸುವಲ್ಲಿ ಯಶಸ್ವಿಯಾಗಿದ್ದಾರೆ. ಇಂತಹ ವಿನೂತನ ಕ್ರಿಯಾಶೀಲ ಯೋಜನೆಗಳಿಂದ ಅನೇಕ ವಿದ್ಯಾರ್ಥಿನಿಯರು ತಮ್ಮ ಬದುಕು ಮತ್ತು ವೃತ್ತಿ ಜೀವನವನ್ನು ಸುಂದರವಾಗಿ ರೂಪಿಸಿಕೊಂಡಿರುವುದು ಹೆಮ್ಮೆಯ ಸಂಗತಿ. ರಾಜ್ಯ, ರಾಷ್ಟ್ರಮಟ್ಟದ ವಿಚಾರ ಸಂಕಿರಣಗಳಲ್ಲಿ ಭಾಗವಹಿಸುವುದಷ್ಟೇ ಅಲ್ಲದೆ, ಹಲವಾರು ವಿಚಾರ ಸಂಕಿರಣಗಳಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ವಿಷಯ ಮಂಡಿಸಿದ್ದಾರೆ.

ದಾವಣಗೆರೆ ವಿಶ್ವವಿದ್ಯಾನಿಲಯದ ಸ್ನಾತಕ ಪರೀಕ್ಷಾ ಮಂಡಳಿ ಮತ್ತು ಸ್ನಾತಕ ಅಧ್ಯಯನ ಮಂಡಳಿಯ ಸದಸ್ಯರಾಗಿ, ಕಾಲೇಜಿನ ಆಂಗ್ಲ ವಿಭಾಗದ ಮುಖ್ಯಸ್ಥರಾಗಿ ಐದು(5) ವರ್ಷಗಳ ಎರಡು(2) ಅವಧಿಗೆ 'NAAC Coordinator'




ಆಗಿ ಅಪೂರ್ವ ಸೇವೆ ಸಲ್ಲಿಸಿದ್ದಾರೆ.

ಒಬ್ಬ ಶಿಕ್ಷಕನ ಜವಾಬ್ದಾರಿ ತರಗತಿಯ ಪಾಠಕ್ಕಷ್ಟೇ ಸೀಮಿತವಾಗಿರಬಾರದು; ಅದು ಸಮಾಜದ ಮುಖ್ಯವಾಹಿನಿಗೂ ಅನ್ವಯಗೊಂಡಿರಬೇಕು ಎಂಬುದನ್ನು ಡಾ. ಅನುರಾಧ. ಪಿ.ಎಂ. ರವರಿಂದ ನಾವೆಲ್ಲಾ ಕಲಿಯಬೇಕಾಗಿದೆ. ದಾವಣಗೆರೆಯ ಸಾಂಸ್ಕೃತಿಕ ವಲಯದಲ್ಲಿ, ಅದರಲ್ಲೂ ಬಹುಮುಖ್ಯವಾಗಿ ಸ್ತ್ರೀವಾದಿ ಚಳವಳಿಗಳಲ್ಲಿ ಸಕ್ರಿಯವಾಗಿ ತಮ್ಮನ್ನು ತಾವು ತೊಡಗಿಸಿಕೊಂಡು ಮಹಿಳಾ ಸಬಲೀಕರಣವನ್ನು ಸಾಕ್ಷಾತ್ಕರಿಸುವಲ್ಲಿ ಮುಖ್ಯಧ್ವನಿಯಾಗಿ ನಿಂತವರಾಗಿದ್ದಾರೆ. ಸಾಹಿತ್ಯ-ಸಂಸ್ಕೃತಿ-ರಂಗಭೂಮಿ-ಸಮಾಜ ಹೀಗೆ ವಿವಿಧ ರಂಗಗಳಲ್ಲಿ ವಿಶೇಷವಾದ, ಅಚ್ಚಳಿಯದ ಛಾಪನ್ನು ಮೂಡಿಸಿದ್ದಾರೆ. ನಗರದ ವನಿತಾ ಸಮಾಜದ ಭೂಮಿಕಾ ವನಿತಾ ರಂಗವೇದಿಕೆಯ ಅಧ್ಯಕ್ಷರಾಗಿ ಅನೇಕ ರಂಗ ಚಟುವಟಿಕೆಗಳನ್ನು ಜನಮುಖಿಯಾಗಿಸುವಲ್ಲಿ ಸತತ ಪ್ರಯತ್ನ ಮಾಡುತ್ತಿದ್ದಾರೆ. ಹಲವಾರು ನಾಟಕ ಪ್ರದರ್ಶನಗಳನ್ನು ಆಯೋಜಿಸುತ್ತಾ ಹತ್ತಾರು ರಂಗ ಶಿಬಿರಗಳನ್ನು ಏರ್ಪಡಿಸುತ್ತಾ ಹಲವು ನಾಟಕಗಳಲ್ಲಿ ತಾವೇ ಮುಖ್ಯ ಭೂಮಿಕೆಯಲ್ಲಿ ನಟಿಸುತ್ತಾ ನಗರದ ರಂಗ ಸಹೃದಯರ ಮನ ಗೆದ್ದಿದ್ದಾರೆ. ಇವರ ಮುಖ್ಯ ಭೂಮಿಕೆಯ 'ರೆಕ್ಕೆ ಕಟ್ಟುವಿರಾ?' ನಾಟಕ ರಾಜ್ಯಾದ್ಯಂತ ಯಶಸ್ವೀ ಪ್ರದರ್ಶನಗಳನ್ನು ಪಡೆದಿರುವುದು ಒಂದು ನಿದರ್ಶನ.

ಪ್ರಸ್ತುತ ಇವರ ತುಂಬು ಬದುಕಿನ ಅನೇಕ ದಿವ್ಯಾನುಭವಗಳ ಕಾವ್ಯಾಭಿವ್ಯಕ್ತಿಯಾಗಿ 'ಒಲೆಯೊಳಗಣ ಕಿಚ್ಚು' ಕವನ ಸಂಕಲನ ಕನ್ನಡ ಸಾಹಿತ್ಯ ಸಾರಸ್ವತ ಲೋಕಕ್ಕೆ ಅರ್ಪಣೆಗೊಳ್ಳಲು ಸಜ್ಜಾಗಿದೆ. 50 ಕವನಗಳನ್ನೊಳಗೊಂಡ ಈ ಕೃತಿಯ ಕೇಂದ್ರ



ಬಿಂದು ಹೆಣ್ಣಾದರೂ, ಬದುಕಿನ ಅನೇಕ ಮನೋವ್ಯಾಪಾರಗಳನ್ನು ಬಿಂಬಿಸುವ ಕವಿತೆಗಳು ಹಲವಿವೆ. ದೇಹ-ಮನಸ್ಸಿನ ಸಂವಾದಕ್ಕೆ ಧ್ವನಿಯಾದ ಪದ್ಯಗಳು ಒಂದೆಡೆಯಾದರೆ, ಸಾಮಾಜಿಕ ಧಾರ್ಮಿಕ ಮೌಢ್ಯಗಳನ್ನು, ಕಟ್ಟುಪಾಡು ಗಳನ್ನು ಟೀಕಿಸುವ ಕವಿತೆಗಳು ಇನ್ನೊಂದೆಡೆ ಓದುಗರಿಗೆ ಪ್ರಾಪ್ತವಾಗುತ್ತವೆ. ಇದರೊಟ್ಟಿಗೆ ಪರಿಸರ ಪ್ರಜ್ಞೆ, ನಿಸರ್ಗದ ಅನನ್ಯತೆಯನ್ನು ಬಿಂಬಿಸುವ ಕವನಗಳು ಓದುಗರ ಕಣ್ತೆರೆಸುತ್ತವೆ. ರಾಜಕೀಯ ಮತ್ತು ಸಾಮಾಜಿಕ ತಲ್ಲಣಗಳಿಗೆ ಕನ್ನಡಿಯಾಗುವ ಹಲವು ಕವನಗಳು ಓದುಗರ ವಿಚಾರ ಲಹರಿಗೆ ರಹದಾರಿಯಾಗುತ್ತವೆ.

ಈ ಸಂಕಲನದ ಕವನಗಳು ಲೋಕಾನುಭವದ ಮೂಸೆಯಲ್ಲಿ ಹಸನಾಗಿ ಪಕ್ವವಾಗಿ ಹೊರಬಂದಿರುವುದು ಓದುಗರ ಅನುಭವಕ್ಕೆ ದಕ್ಕುತ್ತವೆ. ವಿಘಟನೆಗಳ ಮಧ್ಯದಲ್ಲಿ ಛಿದ್ರವಾಗಿರುವ ಮನಸ್ಸುಗಳ ನಡುವೆ ಸೇತುವೆ ಕಟ್ಟುವ ಕೆಲಸವನ್ನು ಇಲ್ಲಿನ ಕೆಲವು ಕವನಗಳು ಮಾಡುತ್ತವೆ. ಎಂದೆನಿಸುತ್ತದೆ. ಕಾವ್ಯದ ಗುರಿ ಪರಿವರ್ತನೆಯಡೆಗೆ ಇರಬೇಕು ಎಂಬ ನಮ್ಮ ಹಿರಿಯ ಕವಿಗಳ ಆಶಯ ಇಲ್ಲಿ ಸಾಕಾರಗೊಂಡಂತೆ ಭಾಸವಾಗುತ್ತದೆ. ಹಾಡಿಸಿಕೊಳ್ಳುವ ಗುಣದಿಂದ ತುಸು ದೂರವೇ ಉಳಿದ ಇವರ ವಿಭಿನ್ನವಾದ ಕಾವ್ಯ ಶೈಲಿ, ವಿಚಾರವಂತಿಕೆಯ ಮತ್ತು ವಿಡಂಬನೆಯ ಸೂತ್ರ ಅಳವಡಿಸಿಕೊಂಡಂತಿವೆ. ಅಷ್ಟೊಂದು ಕ್ಲಿಷ್ಟಕರವಲ್ಲದ ಭಾಷಾ ಬಳಕೆ, ಪದಕಟ್ಟು, ಓದುಗರನ್ನು ಸೆಳೆಯುವ ಸರಳ-ಸಹಜ ಸುಂದರ ಭಾಷಾ ಲಾಲಿತ್ಯ ಇಲ್ಲಿದೆ. ಹಾಗಾಗಿ ಇಲ್ಲಿನ ಕವನಗಳು ಸಹೃದಯರ ಮನಸ್ಸಿಗೆ ಬೇಗನೆ ನಾಟುತ್ತವೆ. ಕವನ ಸಂಕಲನದ ಶೀರ್ಷಿಕೆಯು ಹೆಣ್ಣಿನ ಹಾಗೂ ಹಲವು ವಿಷಯಗಳ ಅನಂತ ಒಳನೋಟಗಳನ್ನು ನೀಡುತ್ತದೆ. ಕವಿ ಮನಸ್ಸಿನ ಓದುಗರಲ್ಲಿ ಕಿಂಚಿತ್ತಾದರೂ ಕಿಚ್ಚನ್ನು ಹೊತ್ತಿಸುವಲ್ಲಿ ಈ ಕವನಗಳು ಗೆಲ್ಲುತ್ತವೆ ಎಂದು ಹೇಳುತ್ತಾ ಡಾ.ಅನುರಾಧ ಪಿ.ಎಂ. ರವರಿಂದ ಇನ್ನಷ್ಟು ಸಾಹಿತ್ಯ ಕೃತಿಗಳು ಹೊರಬರಲಿ ಎಂದು ಆಶಿಸುತ್ತೇನೆ.

**- ಡಾ. ರಣಧೀರ, ಸಹಾಯಕ ಪ್ರಾಧ್ಯಾಪಕರು,**
ಕನ್ನಡ ವಿಭಾಗ, ಎ.ವಿ.ಕೆ. ಕಾಲೇಜು, ದಾವಣಗೆರೆ.

# ಸಮುದಾಯವನ್ನು ಒಂದೇ ವೇದಿಕೆಗೆ ತರುವುದೇ 'ಜಾತ್ರೆ'ಯ ಉದ್ದೇಶ



## ಹರಪನಹಳ್ಳಿ ಸಭೆಯಲ್ಲಿ ವಾಲ್ಮೀಕಿ ಗುರುಪೀಠದ ಶ್ರೀ ಪ್ರಸನ್ನಾನಂದ ಸ್ವಾಮೀಜಿ

ಹರಪನಹಳ್ಳಿ, ನ.15- ರಾಜ್ಯದಲ್ಲಿ 50 ರಿಂದ 60 ಲಕ್ಷ ಜನಸಂಖ್ಯೆಯನ್ನು ಹೊಂದಿರುವ ಬೇಡ, ವಾಲ್ಮೀಕಿ ನಾಯಕ ಸಮುದಾಯವನ್ನು ಒಂದೇ ವೇದಿಕೆಗೆ ಕರೆತಂದು, ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿಯವರು ತಿಳಿಸಿರುವ ಮಾನವೀಯ ಮೌಲ್ಯಗಳನ್ನು ಮನುಕುಲಕ್ಕೆ ಸಾರುವುದೇ 'ವಾಲ್ಮೀಕಿ ಜಾತ್ರೆ' ಉದ್ದೇಶವಾಗಿದೆ ಎಂದು ರಾಜನಹಳ್ಳಿಯ ವಾಲ್ಮೀಕಿ ಗುರುಪೀಠದ ಜಗದ್ಗುರು ಶ್ರೀ ಪ್ರಸನ್ನಾನಂದ ಸ್ವಾಮೀಜಿ ಹೇಳಿದರು.

ಪಟ್ಟಣದ ವಾಲ್ಮೀಕಿ ಸಮುದಾಯ ಭವನದಲ್ಲಿ 6ನೇ ವರ್ಷದ ವಾಲ್ಮೀಕಿ ಜಾತ್ರೆಯ ಪೂರ್ವ ಭಾವಿ ಸಭೆಯ ಸಾನ್ನಿಧ್ಯ ವಹಿಸಿ ಶ್ರೀಗಳು ಮಾತನಾಡಿದರು.

ಸಮುದಾಯವನ್ನು ಇನ್ನಷ್ಟು ಸಂಘಟಿಸುವ ಉದ್ದೇಶದಿಂದ ರಾಜ್ಯದ ಪ್ರತೀ ತಾಲ್ಲೂಕುವಾರು ಪ್ರವಾಸ ಕೈಗೊಂಡು ರಾಜ್ಯ ಮತ್ತು ರಾಷ್ಟ್ರಮಟ್ಟಕ್ಕೆ ಬೇಡ, ವಾಲ್ಮೀಕಿ, ನಾಯಕ ಸಮುದಾಯ ಸಂಘಟಿತರಾಗಿದ್ದೇವೆ ಎಂಬ ಸ್ಪಷ್ಟ ಸಂದೇಶ ನೀಡುವ ಹಿನ್ನೆಲೆಯಲ್ಲಿ ಐತಿಹಾಸಿಕ ಶ್ರೀ ಮಹರ್ಷಿ ವಾಲ್ಮೀಕಿ ಜಾತ್ರಾ ಮಹೋತ್ಸವವನ್ನು ಪ್ರತೀ ವರ್ಷ ಆಚರಿಸಲಾಗುತ್ತಿದೆ. ಜಾತ್ರೆಯ ಉದ್ದೇಶ ಸಮುದಾಯದ ಸಾಮಾಜಿಕ ನ್ಯಾಯದ ಪರಿಕಲ್ಪನೆಯ ಸಂಕೇತ. ಇದು ಸಾಕಾರವಾಗಿದ್ದು ಸಮುದಾಯದ ಎಲ್ಲರೂ ಸಹಕಾರ ನೀಡಬೇಕು ಎಂದು ಶ್ರೀಗಳು ಕೇಳಿಕೊಂಡರು.

2019 ರಲ್ಲಿ ಮೊದಲನೇ ಜಾತ್ರಾ ಮಹೋತ್ಸವ ಆರಂಭವಾಗಿ, ಜಾತ್ರಾ ಸಮಿತಿ ಅಧ್ಯಕ್ಷರಾಗಿ ಸತೀಶ್ ಜಾರಕಿಹೊಳಿ, ಬಿ.ಶ್ರೀರಾಮುಲು, ರಮೇಶ್ ಜಾರಕಿಹೊಳಿ, ಟಿ. ರಘುಮೂರ್ತಿ ಹಾಗೂ ಎಸ್. ವಿ. ರಾಮಚಂದ್ರಪ್ಪ ಅವರ ನೇತೃತ್ವದಲ್ಲಿ ಯಶಸ್ವಿಯಾಗಿ ಜರುಗಿದೆ. ಜಾತ್ರಾ ಮಹೋತ್ಸವವು ನಾಡಿನ ಐತಿಹಾಸಿಕ ಜಾತ್ರಾ ಮಹೋತ್ಸವವಾಗಿ ಮುಂದುವರೆದಿದೆ. ಇದೀಗ 2024ರ ಜಾತ್ರಾ ಮಹೋತ್ಸವವು ಅಧ್ಯಕ್ಷರಾಗಿರುವ ಸಹಕಾರ ಸಚಿವ ಕೆ. ಎನ್. ರಾಜಣ್ಣ ಅವರ ನೇತೃತ್ವದಲ್ಲಿ ನಡೆಯಲಿದೆ ಎಂದರು.

ನೂತನವಾಗಿ ಜಾತ್ರೆ ಸಮಿತಿ ಅಧ್ಯಕ್ಷರಾಗಿ ಹಲವಾಗಲು ಗ್ರಾಮದ ಹೆಚ್.ಟಿ.ವನಜಾಕ್ಷಮ್ಮನವರನ್ನು ಅವಿರೋಧವಾಗಿ ಆಯ್ಕೆ ಮಾಡಲಾಯಿತು.

ಈ ವೇಳೆ ವಾಲ್ಮೀಕಿ ನಾಯಕ ಸಮಾಜದ ಅಧ್ಯಕ್ಷ ವೈ.ಡಿ.ಅಣ್ಣಪ್ಪ. ವಾಲ್ಮೀಕಿ ನಾಯಕ ಸಮಾಜದ ಮಾಜಿ ಅಧ್ಯಕ್ಷರಾದ ಕೆ. ಉಚ್ಚೆಂಗೆಪ್ಪ, ಹೆಚ್.ಟಿ.ಗಿರೀಶಪ್ಪ, ಪ್ರಧಾನ ಕಾರ್ಯದರ್ಶಿ ಜಿಟ್ಟಿನಕಟ್ಟಿ ಹೆಚ್.ಕೆ.ಮಂಜುನಾಥ, ಮುಖಂಡರುಗಳಾದ ಎಚ್.ಕೆ.ಹಾಲೇಶ್, ಬಾಗಳಿ ಆನಂದಪ್ಪ, ತೆಲಗಿ ಅಂಜಿನಪ್ಪ, ಬಾಲೇನಹಳ್ಳಿಯ ರೇವಣಸಿದ್ದಪ್ಪ, ಫಣಿಯಾಪುರ ಲಿಂಗರಾಜ, ಕೆಂಚನಗೌಡ, ಬಿ.ವಾಗೀಶ, ತೆಲಗಿ ಕೆ.ಯೋಗೇಶ, ಬಸವರಾಜ ಸಂಗಪ್ಪನವರ್, ಲಕ್ಕಳ್ಳಿ ಹನುಮಂತಪ್ಪ, ಅಲಮರಸಿಕೇರಿ ಟಿ.ಬಿ.ರಾಜಪ್ಪ, ಮಂಡಕ್ಕಿ ಸುರೇಶ ಸೇರಿದಂತೆ ಇತರರು ಇದ್ದರು.

# ನಗರದಲ್ಲಿ ಇಂದು ಚಿಂತನೆ - ಸಂವಾದ ಕಾರ್ಯಕ್ರಮ

ಕರುಣಾ ಜೀವ ಕಲ್ಯಾಣ ಟ್ರಸ್ಟ್ ವತಿಯಿಂದ ಇಂದು ಸಂಜೆ 6 ಗಂಟೆಗೆ 'ಚಿಂತನೆ ಮತ್ತು ಸಂವಾದ' ಕಾರ್ಯಕ್ರಮವನ್ನು ಕರುಣಾ ಜೀವ ಕಲ್ಯಾಣ ಟ್ರಸ್ಟ್‌ನಲ್ಲಿ ಹಮ್ಮಿಕೊಂಡಿದೆ. ಕಾರ್ಯಕ್ರಮದಲ್ಲಿ ಚಿಂತಕರಾದ ಡಾ. ಬಿ.ಎಂ. ವಿಶ್ವನಾಥ್ ಅವರು 'ಬುದ್ಧನ ವಿಪಷ್ಯ ಧ್ಯಾನ' ಕುರಿತು ಚಿಂತನೆ ನಡೆಸುವರು. ಶಿವನಕೆರೆ ಬಸವಲಿಂಗಪ್ಪ, ಭಿಕ್ಷಾವರ್ತಿ ಮಠ್, ಜಿ.ಬಿ. ನಾಗನಗೌಡ್ರು, ಪ್ರೊ. ಎಂ. ಬಸವರಾಜ್, ಎಸ್. ಗುರುಮೂರ್ತಿ, ಆರ್.ಆರ್. ಕುಸಗೂರು, ಮಲ್ಲಾಬಾದಿ ಬಸವರಾಜ್, ಆವರಗೆರೆ ರುದ್ರಮುನಿ, ಕಲೀಂ ಭಾಷಾ ಅವರುಗಳು ಭಾಗವಹಿಸಲಿದ್ದಾರೆ.

# ನಗರದಲ್ಲಿ ಭರ್ಜರಿ ಪಟಾಕಿ ವ್ಯಾಪಾರ



ದಾವಣಗೆರೆ, ನ.15- ಕೊರೊನಾ ಮುಂತಾದ ಕಾರಣಗಳಿಂದಾಗಿ ಕಳೆದ ಎರಡ್ಮೂರು ವರ್ಷಗಳಿಂದ ಪಟಾಕಿ ವ್ಯಾಪಾರ ಕುಸಿತ ಕಂಡಿತ್ತು. ಆದರೆ ಈ ವರ್ಷ ತೀವ್ರ ಬೆಲೆ ಏರಿಕೆ ನಡುವೆಯೂ ಭರ್ಜರಿ ಪಟಾಕಿ ವ್ಯಾಪಾರ ನಡೆದಿದೆ.

ಮಂಗಳವಾರ ಸಂಜೆ ಹೈಸ್ಕೂಲ್ ಮೈದಾನದಲ್ಲಿನ ಬಹುತೇಕ ಮಳಿಗೆಗಳಲ್ಲಿ ಪಟಾಕಿ ಖಾಲಿ ಯಾಗಿದ್ದುದೇ ಪಟಾಕಿ ವಹಿವಾಟು ಉತ್ತಮವಾಗಿದೆ ಎಂಬುದಕ್ಕೆ ಸಾಕ್ಷಿಯಾಗಿತ್ತು.

ನಾಲ್ಕು ದಿನಗಳಲ್ಲಿ ಪಟಾಕಿ ವಹಿವಾಟು ಕೋಟ್ಯಾಂತರ ರೂಪಾಯಿಗಳಾಗುತ್ತದೆ. ಆದರೆ ತೆರಿಗೆ ಅಧಿಕಾರಿಗಳ ಭಯದಿಂದ ವ್ಯಾಪಾರಿಗಳು ನಿಖರವಾದ ವಹಿವಾಟು ಮೊತ್ತ ಹೇಳಲು ನಿರಾಕರಿಸುತ್ತಾರೆ. ಅವರ ಪ್ರಕಾರ ನಾಲ್ಕು ದಿನಗಳ ವಹಿವಾಟು ಕೇವಲ 1.50 ರಿಂದ 2 ಕೋಟಿ ರೂಗಳಷ್ಟು ಮಾತ್ರ.

ಶನಿವಾರ ಪಟಾಕಿ ಮಳಿಗೆಗಳಲ್ಲಿ ವಹಿವಾಟು ಆರಂಭವಾಯಿತು. ಭಾನು ವಾರವೇ ಜನರು ಪಟಾಕಿ ಮಳಿಗೆಗಳತ್ತ ಹೆಜ್ಜೆ ಹಾಕಿದರು. ಲೈಸನ್ಸ್ ಕೊಡುವುದು ತಡ ವಾಗಿದ್ದ ಕಾರಣ ಉತ್ತಮ ವ್ಯಾಪಾರದ ನಿರೀಕ್ಷೆ ಅಸಾಧ್ಯ ಎಂದು ಸ್ವತಃ ವ್ಯಾಪಾರಿಗಳು ಹೇಳಿದ್ದರು.

ಆದರೆ ಜನತೆ ಆ ನಿರೀಕ್ಷೆ ಹುಸಿ ಮಾಡಿದ್ದಾರೆ ಎನಿಸಿತು. ಸೋಮವಾರ ಹಾಗೂ ಮಂಗಳವಾರ ಹೆಚ್ಚಿನ ಸಂಖ್ಯೆಯಲ್ಲಿಯೇ ಜನರು ಮಳಿಗೆಗಳಿಗೆ ಆಗಮಿಸಿ ಪಟಾಕಿ ಖರೀದಿಸುತ್ತಿದ್ದರು. ಮಂಗಳವಾರ ಸಂಜೆ ವೇಳೆಗಾಗಲೇ ಕೆಲ ಮಳಿಗೆಗಳಲ್ಲಿ ಪಟಾಕಿಗಳೇ ಖಾಲಿಯಾಗಿದ್ದವು. ಉಳಿದಿದ್ದ ಪಟಾಕಿಗಳನ್ನು ಹೆಚ್ಚು ಹಣ ನೀಡಿಯೇ ಜನ ಖರೀದಿಸಿದರು.

ಹಸಿರು ಪಟಾಕಿ ಮಾತ್ರ ಬಳಕೆಗೆ ಅವಕಾಶ ನೀಡಿದ್ದರಿಂದ ಪಟಾಕಿ ಬೆಲೆ ದುಪ್ಪಟ್ಟಾಗಿತ್ತು. ಆದಾಗ್ಯೂ ಜನರು ಪಟಾಕಿ ಖರೀದಿಸಿದ್ದಾರೆ. ಭಾನುವಾರದಿಂದ ಮಂಗಳವಾರದವರೆಗೆ ನಗರದಲ್ಲಿ ಪಟಾಕಿ ಸದ್ದು ಮೊಳಗಿದೆ. ಬಲಿಪಾಡ್ಯಮಿಯ ದಿನವಾದ ಮಂಗಳವಾರವಂತೂ ಪಟಾಕಿ ಸದ್ದು ಭರ್ಜರಿಯಾಗಿಯೇ ಇತ್ತು.

ಒಟ್ಟಿನಲ್ಲಿ ಈ ವರ್ಷ ಮಳೆ ಇಲ್ಲದೆ ಬರ ಬಂದಿದೆ. ಹಬ್ಬಗಳ ಸಂಭ್ರಮಕ್ಕೆ ಬರದ ಮಂಕು ಕವಿಯುತ್ತದೆ ಎಂಬೆಲ್ಲಾ ಮಾತುಗಳು ಹುಸಿಯಾಗಿವೆ. ದೀಪಾವಳಿಯನ್ನು ಜನತೆ ಸಂಭ್ರಮದಿಂದಲೇ ಆಚರಿಸಿದ್ದಾರೆ.

ಅಂದ ಹಾಗೆ ಈ ವರ್ಷ ಅರ್ಜಿ ಸಲ್ಲಿಸಿದ್ದ 109 ಮಂದಿ ವರ್ತಕರ ಪೈಕಿ 57 ಜನರಿಗೆ ಮಾತ್ರ ಪಟಾಕಿ ಮಾರಾಟದ ಪರವಾನಿಗೆ ದೊರೆತಿದ್ದು, ವರ್ತಕರು ಪಟಾಕಿ ಮಳಿಗೆಗಳಲ್ಲಿ ಸರ್ಕಾರದ ನಿಬಂಧನೆಯಂತೆ ಅಗ್ನಿನಂದಕ, ನೀರು, ಮರಳಿನ ವ್ಯವಸ್ಥೆ ಮಾಡಿಕೊಂಡಿದ್ದರು.

# ಶೋಷಿತ ಸಮಾಜಗಳ ಸಂವಿಧಾನಿಕ ಹಕ್ಕುಗಳಿಗಾಗಿ ಹೋರಾಟ ಮಾಡುವ ಅನಿವಾರ್ಯತೆ ನಿರ್ಮಾಣ

**ಹರಿಹರ : ಬಿರ್ಸಾ ಮುಂಡಾ ಜನ್ಮ ದಿನಾಚರಣೆ, ವಾಲ್ಮೀಕಿ ಜಾತ್ರೆಯ ಸಭೆಯಲ್ಲಿ ರಾಜನಹಳ್ಳಿ ಶ್ರೀಗಳ ಹೇಳಿಕೆ**



ಹರಿಹರ, ನ. 15 - ಸಂವಿಧಾನಿಕ ಹಕ್ಕುಗಳಿಗಾಗಿ ಎಲ್ಲಾ ಶೋಷಿತ ಸಮಾಜಗಳು ಜಾಗೃತರಾಗಿ ಹೋರಾಟ ಮಾ ಡುವ ಅನಿವಾರ್ಯತೆ ಎದು ರಾಗಿದೆ ಎಂದು ಶ್ರೀ ವಾಲ್ಮೀಕಿ ಪ್ರಸನ್ನಾನಂದ ಸ್ವಾಮೀಜಿ ಹೇಳಿದರು.

ನಗರದ ಕಾಳಿದಾಸ ಬಡಾವಣೆಯಲ್ಲಿರುವ ಸಾರ್ವಜನಿಕ ನಾಯಕ ವಿದ್ಯಾರ್ಥಿ ನಿಲಯ ದಲ್ಲಿ ಇಂದು ಕರೆದಿದ್ದ 6ನೇ ವರ್ಷದ ವಾಲ್ಮೀಕಿ ಜಾತ್ರೆಯ ಪೂರ್ವಭಾವಿ ಸಭೆಯ ದಿವ್ಯ ಸಾನ್ನಿಧ್ಯ ವಹಿಸಿ ಶ್ರೀಗಳು ಮಾತನಾಡಿದರು.

ವಾಲ್ಮೀಕಿ ಜಾತ್ರೆ ಸಮಾಜಕ್ಕೆ ಹೊಸ ದಿಕ್ಸೂಚಿಯಾದರೆ, ಸರ್ಕಾರಕ್ಕೆ ಸಂದೇಶ ರವಾನಿಸುತ್ತದೆ ಎಂದ ಸ್ವಾಮೀಜಿ, ಬರುವ ಡಿಸೆಂಬರ್ 21ರಂದು ಬೆಂಗಳೂರಿನಲ್ಲಿ ವಾಲ್ಮೀಕಿ ಜಾತ್ರಾ ಸಮಿತಿ ಅಧ್ಯಕ್ಷರಾಗಿರುವ ಸಹಕಾರ ಸಚಿವ ಕೆ. ಎನ್. ರಾಜಣ್ಣ ಅವರ ಅಧ್ಯಕ್ಷತೆಯಲ್ಲಿ ವಾಲ್ಮೀಕಿ ಜಾತ್ರೆಯ ರಾಜ್ಯಮಟ್ಟದ 2ನೇ ಪೂರ್ವಭಾವಿ ಸಭೆಯನ್ನು ಕರೆಯಲಾಗಿದೆ ಎಂದರು.

ಈ ದಿನ ಬುಡಕಟ್ಟು ಜನಾಂಗದ ಅಪ್ರತಿಮ ಹೋರಾ ಟಗಾರ ಬಿರ್ಸಾ ಮುಂಡ ಅವರ ಜನ್ಮ ದಿನಾಚರಣೆಯನ್ನು ದೇ ಶದಲ್ಲೆಡೆ ಆಚರಿಸಲಾಗುತ್ತಿದ್ದು, ನಾಮಾ ಕೂಡಾ ಇಂದಿಲ್ಲಿ ಆಚರಣೆ ಮಾಡಿದ್ದೇವೆ.

ಬಿರ್ಸಾ ಮುಂಡಾ ಅವರು ಬ್ರಿಟಿಷರ ವಿರುದ್ಧ ಹೋರಾಟ ಮಾಡಿ, ಬುಡಕಟ್ಟು ಜನರಿಗೆ ಅಂದೇ ಸಾಮಾಜಿಕ ನ್ಯಾಯ ಕಲ್ಪಿಸಿ ಕೊಟ್ಟ ಮಹಾನ್ ನಾಯ ಕನಾಗಿ ಹೊರ ಹೊಮ್ಮಿದ್ದರು. ಅವರ ಹೋರಾಟ ಹಾಗೂ ಆದರ್ಶದ ಬದುಕು ನಮಗೆ ಮಾದರಿಯಾಗಿದೆ ಎಂದು ಸ್ವಾಮೀಜಿ ಹೇಳಿದರು.

ಈ ವೇಳೆ ವಾಲ್ಮೀಕಿ ಜಾತ್ರಾ ಸಮಿತಿಗೆ ಹರಿಹರ ತಾ. ಗ್ರಾಮಾಂತರ ಅಧ್ಯಕ್ಷರನ್ನಾಗಿ ಕೊಕ್ಕನೂರಿನ ದಾಸರ ಸೋಮಶೇಖರ್ ಮತ್ತು ಹರಿಹರ ಅಧ್ಯಕ್ಷರನ್ನಾಗಿ ರಮೇಶ್ ಅವರನ್ನು ಆಯ್ಕೆ ಮಾಡಲಾಯಿತು.

ಜೊತೆಗೆ ವಾಲ್ಮೀಕಿ ಜಾತ್ರೆಯ ಪೋಸ್ಟರ್‌ಗಳನ್ನು ಬಿಡುಗಡೆ ಮಾಡಲಾಯಿತು.

ಡಿಸಿಸಿ ಬ್ಯಾಂಕಿನ ಮಾಜಿ ಉಪಾಧ್ಯಕ್ಷ ಜಿಗಳಿ ಆನಂದಪ್ಪ, ನಿವೃತ್ತ ಶಿಕ್ಷಕ ಭಾನುವಳ್ಳಿ ಪುಟ್ಟಪ್ಪ, ಹರಿಹರ ತಾ. ಗ್ರಾಮಾಂತರ ನಾಯಕ ಸಮಾಜದ ಅಧ್ಯಕ್ಷ ಜಿಗಳಿ ರಂಗಪ್ಪ, ಹರಿಹರ ನಗರ ನಾಯಕ ಸಮಾಜದ ಅಧ್ಯಕ್ಷ ಮೆಣಿಸಿನಹಾಳ್ ಬಸವರಾಜ್ ಅವರುಗಳು ಮಾತನಾಡಿದರು.

ಮಠದ ಧರ್ಮದರ್ಶಿ ಕೆ.ಬಿ. ಮಂಜುನಾಥ್, ಮಠದ ವ್ಯವಸ್ಥಾಪಕ ರಾಜನಹಳ್ಳಿ ಭೀಮಣ್ಣ, ಶಿಕ್ಷಕ ವಾಸನ ಮಹಾಂತೇಶ್, ನಗರಸಭೆ ಸದಸ್ಯ ದಿನೇಶ್ ಬಾಬು, ಮುಖಂಡರಾದ ಕೆ. ಬೇವಿನಹಳ್ಳಿ ನಾಗೇಂ ದ್ರಪ್ಪ, ದೇವರಬೆಳಕರೆ ಮಹೇಶ್ವರಪ್ಪ, ಹಂಚಿನಮನಿ ದೇವೇಂದ್ರಪ್ಪ, ಮಕರಿ ಪಾಲಾ ಕ್ಷಪ್ಪ, ಗಂಗಾಧರ್ ಹನುಮಂತ ಹನಗವಾಡಿ ಹನುಮಂತಪ್ಪ ನಿವೃತ್ತ ಸೈನಿಕ ಪರಶುರಾಮ್, ಮಲೇಬೆನ್ನೂರಿನ ಪಾಳೇಗಾರ್ ನಾಗರಾಜ್, ವೇರ್‌ಹೌಸ್ ಬಸವರಾಜ್, ದೊಡೇನಿ ಬಸವರಾಜ್, ಜಿಗಳಿ ಕೆ.ಜಿ. ಬಸವರಾಜ್, ಬೆಣ್ಣೇರ್ ನಂದ್ಯಪ್ಪ ಸೇರಿದಂತೆ ಇನ್ನೂ ಅನೇಕರು ಭಾಗವಹಿಸಿದ್ದರು.

ಪತ್ರಕರ್ತ ಜಿಗಳಿ ಪ್ರಕಾಶ್ ಸ್ವಾಗತಿಸಿದರು. ಸಮಾಜದ ಹರಿಹರ ನಗರ ಅಧ್ಯಕ್ಷ ಬಸವರಾಜ್ ವಂದಿಸಿದರು.

# ಬಜಾಜ್ ಫೈನಾನ್ಸ್ ಉತ್ಪನ್ನಗಳಿಗೆ ರಿಸರ್ವ್ ಬ್ಯಾಂಕ್ ತಡೆ

ಮುಂಬೈ, ನ. 15 – ಬಜಾಜ್ ಫೈನಾನ್ಸ್ ತನ್ನ ಉತ್ಪನ್ನಗಳಾದ ಇಕಾಮ್ ಹಾಗೂ ಇನ್‌ಸ್ಟಾ ಇಎಂಐ ಕಾರ್ಡ್ ಮೂಲಕ ಸಾಲ ವಿತರಿಸುವುದನ್ನು ನಿಲ್ಲಿಸುವಂತೆ ರಿಸರ್ವ್ ಬ್ಯಾಂಕ್ ತಿಳಿಸಿದೆ. ಡಿಜಿಟಲ್ ಪಾವತಿಗೆ ಸಂಬಂಧಿಸಿದಂತೆ ಕೆಲ ನಿಯಮಗಳನ್ನು ಕಂಪನಿ ಪಾಲಿಸಿಲ್ಲ ಎಂದು ರಿಸರ್ವ್ ಬ್ಯಾಂಕ್ ಹೇಳಿದೆ. ಕೀ ಫ್ಯಾಕ್ಟ್ ಸ್ಟೇಟ್‌ಮೆಂಟ್‌ಗಳಿಗೆ ಸಂಬಂಧಿಸಿದಂತೆ ಬಜಾಜ್ ಫೈನಾನ್ಸ್ ಕ್ರಮ ತೆಗೆದುಕೊಳ್ಳಬೇಕಿದೆ. ಕ್ರಮ ತೆಗೆದುಕೊಂಡ ನಂತರವೇ ನಿರ್ಬಂಧ ಸಡಿಲಿಸುವ ಬಗ್ಗೆ ಪರಿಶೀಲಿಸಲಾಗುವುದು ಎಂದು ರಿಸರ್ವ್ ಬ್ಯಾಂಕ್ ಹೇಳಿದೆ.


|| ಶ್ರೀ ಉಜ್ಜಿನಿ ಮರುಳಸಿದ್ದೇಶ್ವರ ಪ್ರಸನ್ನ ||

## ಕೈಲಾಸ ಶಿವಗಣಾರಾಧನೆ ಆಹ್ವಾನ ಪತ್ರಿಕೆ



ವಿಜಯನಗರ ಜಿಲ್ಲೆ, ಹರಪನಹಳ್ಳಿ ತಾಲ್ಲೂಕು **ಗಡಿಗುಡಾಳು** ಗ್ರಾಮದ ವಾಸಿ
**ಶ್ರೀ ಬಕ್ಕೇಶ ಪಾಟೀಲ ಹಾಗೂ ಸಹೋದರರು**
**ಇವರು ಮಾಡುವ ವಿಜ್ಞಾಪನೆಗಳು.**
ದಿನಾಂಕ: 12.11.2023ನೇ ಭಾನುವಾರ ಬೆಳಿಗ್ಗೆ 07.15ಕ್ಕೆ ನಮ್ಮ ಪೂಜ್ಯ ತಾಯಿಯವರಾದ
**ಶ್ರೀಮತಿ ಲಲಿತಮ್ಮ**
**(ದಿ. ಹಾಲಪ್ಪ ಗೌಡ್ರು ಇವರ ಧರ್ಮಪತ್ನಿ)**
ಇವರು ದೈವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ
**'ಕೈಲಾಸ ಶಿವಗಣಾರಾಧನೆಯನ್ನು'**
ದಿನಾಂಕ:16.11.2023 ನೇ ಗುರುವಾರ ಮಧ್ಯಾಹ್ನ 12ಕ್ಕೆ
**ಶ್ರೀ ಸದ್ಯೋಜಾತ ಸ್ವಾಮಿ ಮಠ, ಶಾಮನೂರು ರಸ್ತೆ, ದಾವಣಗೆರೆಯಲ್ಲಿ**
ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿಸುತ್ತೇವೆ.

**ದುಃಖತಪ್ತ ಕುಟುಂಬ ವರ್ಗ : ದಿ. ಹಾಲಪ್ಪ ಗೌಡ್ರ ಮತ್ತು ಮಕ್ಕಳು, ಸೊಸೆಯಂದಿರು, ಮೊಮ್ಮಕ್ಕಳು, ಅಳಿಯಂದಿರು, ಗಡಿಗುಡಾಳು ಗೌಡ್ರ ವಂಶಸ್ಥರು, ಗ್ರಾಮಸ್ಥರು ಹಾಗೂ ಬಂಧು-ಮಿತ್ರರು. ಮೊ : 98456 09730, 97400 15744**

ವಿ.ಸೂ. : ಆಹ್ವಾನ ಪತ್ರಿಕೆ ತಲುಪದೇ ಇರುವವರು ಇದನ್ನೇ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿಸುತ್ತೇವೆ.


# ಸ್ಕೌಟ್ಸ್- ಗೈಡ್ಸ್, ರೇಂಜರ್ಸ್ ತರಬೇತಿ ಶಿಬಿರ ಇಂದಿನಿಂದ

ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಕರ್ನಾಟಕ ಇವರ ವತಿಯಿಂದ ಇಂದಿನಿಂದ ಸ್ಕೌಟ್ಸ್- ಗೈಡ್ಸ್ ಮತ್ತು ರೋವರ್ಸ್, ರೇಂಜರ್ಸ್‌ಗಳ ರಾಜ್ಯಮಟ್ಟದ ಪದಕ ತರಬೇತಿ ಶಿಬಿರ ಹಾಗೂ ನಾಡಿದ್ದು ದಿನಾಂಕ 18 ರಂದು ಕೊಂಡಜ್ಜಿ ಬಸಪ್ಪನವರ 41ನೇ ಸ್ಮರಣೆ ಮತ್ತು ಸರ್ವಧರ್ಮ ಪ್ರಾರ್ಥನೆ ಕಾರ್ಯಕ್ರಮವು ಜಿಲ್ಲೆಯ ಹರಿಹರ ತಾಲ್ಲೂಕಿನ ಕೊಂಡಜ್ಜಿ ಗ್ರಾಮದಲ್ಲಿರುವ ಕೊಂಡಜ್ಜಿ ಬಸಪ್ಪ ಸ್ಕೌಟ್ಸ್, ಗೈಡ್ಸ್ ರಾಜ್ಯ ತರಬೇತಿ ಮತ್ತು ಶಿಬಿರ ಕೇಂದ್ರದಲ್ಲಿ ಜರುಗಲಿದೆ.

## ಆವರಗೊಳ್ಳ ಗ್ರಾಮದ ಶಕುಂತಲಮ್ಮ ನಿಧನ



ದಾವಣಗೆರೆ ತಾಲ್ಲೂಕು ಆವರಗೊಳ್ಳ ಗ್ರಾಮದ ಲೇಟ್ ಎ.ವಿ ಷಣ್ಮುಖಯ್ಯ ಇವರ ಧರ್ಮಪತ್ನಿ
**ಶ್ರೀಮತಿ ಶಕುಂತಲಮ್ಮ** (93 ವರ್ಷ)
ಇವರು ದಿನಾಂಕ 15.11.2023ರ ಬುಧವಾರ ಮಧಾಹ್ನ 3.20ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರು ಇಬ್ಬರು ಪುತ್ರರು, ಮೂವರು ಪುತ್ರಿಯರು, ಅಳಿಯ, ಸೊಸೆಯಂದಿರು, ಮೊಮ್ಮಕ್ಕಳು, ಮರಿಮೊಮ್ಮಕ್ಕಳು, ಸಹೋದರ, ಸಹೋದರಿ ಸೇರಿದಂತೆ ಅಪಾರ-ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 16.11.2023ರ ಗುರುವಾರ ಮಧ್ಯಾಹ್ನ 12ಕ್ಕೆ ದಾವಣಗೆರೆ ತಾಲ್ಲೂಕು ಆವರಗೊಳ್ಳ ಗ್ರಾಮದಲ್ಲಿ ನೆರವೇರಿಸಲಾಗುವುದು.

**ದುಃಖತಪ್ತ ಕಟುಂಬ ವರ್ಗ :**
**ಆವರಗೊಳ್ಳದ ಪುರವರ್ಗ ಮಠ ಕುಟುಂಬದವರು ಹಾಗೂ ಶಿಶು ಮಕ್ಕಳು ಮತ್ತು ಗ್ರಾಮಸ್ಥರು.**

# ಕೊಮಾರನಹಳ್ಳಿಯಲ್ಲಿ ಗೋ ಪೂಜೆ



ಮಲೇಬೆನ್ನೂರು ನ. 15 - ದೀಪಾವಳಿ ಹಬ್ಬದ ಅಂಗವಾಗಿ ಪಟ್ಟಣದ ಶ್ರೀ ಬಸವೇಶ್ವರ ದೇವಸ್ಥಾನ ಮತ್ತು ಕೊಮಾರನಹಳ್ಳಿಯ ಹೆಳವನಕಟ್ಟೆ ಶ್ರೀ ಲಕ್ಷ್ಮಿ ರಂಗನಾಥ ಸ್ವಾಮಿ ದೇವಸ್ಥಾನದಲ್ಲಿ ಮುಜರಾಯಿ ಇಲಾಖೆ ವತಿಯಿಂದ ಗೋ ಪೂಜೆ ಮಾಡಲಾಯಿತು. ಗೋವಿಗೆ ವಿಶೇಷ ಅಲಂಕಾರದೊಂದಿಗೆ ವಿಶೇಷ ಪೂಜೆ ಸಲ್ಲಿಸಿ, ನಂತರ ಅಕ್ಕಿ, ಬೆಲ್ಲ, ಬಾಳೆಹಣ್ಣುಗಳನ್ನು ತಿನ್ನಿಸಲಾಯಿತು. ಮಲೇಬೆನ್ನೂರಿನ ಕೆ.ಜಿ. ಪರಮೇಶ್ವರಪ್ಪ ಕೊಮಾರನಹಳ್ಳಿಯಲ್ಲಿ ಜಿ. ಮಂಜುನಾಥ್ ಪಟೇಲ್, ಐರಣಿ ಅಣ್ಣಪ್ಪ, ಮಡವಾಳರ ಬಸವರಾಜ್, ಸಿಂಗಟಗೇರೆ ರಂಗಪ್ಪ, ಮಡಿವಾಳರ ರಂಗನಾಥ್, ಶಿಕ್ಷಕ ಪಾರೇರ ರಾಜಪ್ಪ, ಹಸು ಮಾಲೀಕ ಎಸ್. ರಾಜಪ್ಪ, ದೇವಸ್ಥಾನ ಶಾನಭೋಗ್ ಧರ್ಮರಾವ್, ಮುಖ್ಯ ಅರ್ಚಕ ಮಂಜುನಾಥಚಾರ್, ಗುರುನಾಥಚಾರ್, ಗ್ರಾಮದ ಲೆಕ್ಕಾಧಿಕಾರಿ ಅಣ್ಣಪ್ಪ ಹಾಗೂ ನಾಡ ಕಛೇರಿ ಸಿಬ್ಬಂದಿ ಈ ವೇಳೆ ಹಾಜರಿದ್ದರು.

KA/SK/CTA-275/2021-2023. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas

# ಸೆಮಿ ಫೈನಲ್ ಗೆಲ್ಲಿಸಿದ ಶಮಿ

**(1ನೇ ಪುಟದಿಂದ)** ಕೇವಲ ಎರಡು ರನ್ ನೀಡುವ ಮೂಲಕ ನ್ಯೂಜಿಲ್ಯಾಂಡ್ ಮೇಲಿನ ಒತ್ತಡ ಹೆಚ್ಚಿಸಿದರು. ಜಸ್‌ಪ್ರಿತ್ ಬುಮ್ರಾ ಬೌಲಿಂಗ್‌ನಲ್ಲಿ ರನ್ ಗಳಿಸುವ ಯತ್ನದಲ್ಲಿ ಫಿಲಿಪ್ಸ್ ವಿಕೆಟ್ ಒಪ್ಪಿಸಿದರು. 44ನೇ ಓವರ್‌ನಲ್ಲಿ ಮಾರ್ಕ್ ಚಾಪ್‌ಮ್ಯಾನ್ ಅವರ ವಿಕೆಟ್ ಅನ್ನು ಕುಲ್‌ದೀಪ್ ಉರುಳಿಸಿದರು.

ಶಮಿ ಕೊನೆ ಹಂತದಲ್ಲಿ ಮೂರು ವಿಕೆಟ್‌ಗಳನ್ನು ಉರುಳಿಸಿದರು. ಆ ಮೂಲಕ ವಿಶ್ವಕಪ್‌ನಲ್ಲಿ ಅತ್ಯಂತ ವೇಗವಾಗಿ 50 ವಿಕೆಟ್ ಉರುಳಿಸಿದ ಖ್ಯಾತಿ ತಮ್ಮದಾಗಿಸಿಕೊಂಡರು. ಇಡೀ ಪಂದ್ಯದಲ್ಲಿ ಭಾರತದ ಪರವಾಗಿ ಅತ್ಯುತ್ತಮ ಬೌಲಿಂಗ್ ಪ್ರದರ್ಶಿಸಿದರಲ್ಲದೇ, ಪಂದ್ಯ ಶ್ರೇಷ್ಠ ಪ್ರಶಸ್ತಿಯನ್ನೂ ತಮ್ಮದಾಗಿಸಿಕೊಂಡರು.

### ಸ್ಫೋಟಕ ಬ್ಯಾಟಿಂಗ್, ಪರಿಣಾಮಕಾರಿ ಬೌಲಿಂಗ್

ವಿಶ್ವಕಪ್ ಪಂದ್ಯಾವಳಿಯ ಉದ್ದಕ್ಕೂ ಭಾರತ ಪರಿಣಾಮಕಾರಿ ಪ್ರದರ್ಶನ ನೀಡುತ್ತಲೇ ಬಂದಿತ್ತು. ಸೆಮಿಫೈನಲ್‌ನಲ್ಲೂ ರೋಹಿತ್ ಶರ್ಮಾ ನೇತೃತ್ವದ ತಂಡ ತನ್ನ ಸಾಮರ್ಥ್ಯ ಪ್ರದರ್ಶನ ಮಾಡಿತು.

ಟಾಸ್ ಗೆದ್ದದ್ದು ಭಾರತಕ್ಕೆ ಅನುಕೂಲಕರವಾಯಿತು. 397 ರನ್ ಗಳಿಸಿದ್ದು, ನ್ಯೂಜಿಲ್ಯಾಂಡ್ ಬ್ಯಾಟ್ಸ್‌ಮನ್‌ಗಳಿಗೆ ಪಂದ್ಯದುದ್ದಕ್ಕೂ ಹೊರೆ ಎನಿಸಿತ್ತು.

ರೋಹಿತ್ ಹಾಗೂ ಶುಭಮಾನ್ ಗಿಲ್ ಅವರು ಮೊದಲ 8.1 ಓವರ್‌ಗಳಲ್ಲೇ 71 ರನ್ ಸಿಡಿಸಿದರು. ಈ ಸ್ಫೋಟಕ ಬ್ಯಾಟಿಂಗ್ ಬೃಹತ್ ಮೊತ್ತಕ್ಕೆ ಅಡಿಪಾಯ ಹಾಕಿತು.

ವಿರಾಟ್ ಕೊಹ್ಲಿ ಹಾಗೂ ಗಿಲ್ ಎರಡನೇ ವಿಕೆಟ್‌ಗೆ 163 ರನ್‌ಗಳ ಜೊತೆಯಾಟ ನಡೆಸಿದರು. ನ್ಯೂಜಿಲ್ಯಾಂಡ್ ಬೌಲರ್‌ಗಳ ಎಲ್ಲ ಒತ್ತಡಗಳನ್ನು ಕೊಹ್ಲಿ ನಿವಾರಿಸಿದರು.

ಮುಖ್ಯ ತರಬೇತುದಾರ ರಾಹುಲ್ ದ್ರಾವಿಡ್ ತಮ್ಮ ಮೇಲೆ ಇರಿಸಿದ್ದ ನಂಬಿಕೆ ಉಳಿಸಿಕೊಂಡ ಶ್ರೇಯಸ್ ಅಯ್ಯರ್, ಸೆಮಿ ಫೈನಲ್ ಹಂತದಲ್ಲಿ 67 ಎಸೆತಗಳಲ್ಲಿ ಶತಕ ಸಿಡಿಸಿದರು.

ನಂತರದಲ್ಲಿ ಬೌಲಿಂಗ್ ವಿಭಾಗದಲ್ಲಿ ಮೊಹಮ್ಮದ್ ಶಮಿ ಅಬ್ಬರ ತೋರಿದರು. ಅಪಾಯಕಾರಿ ಆರಂಭಿಕ ಆಟಗಾರರಾದ ಡೆವೊನ್ ಕಾನ್‌ವೇ ಹಾಗೂ ರಚಿನ್ ರವೀಂದ್ರ ವಿಕೆಟ್ ಆರಂಭದಲ್ಲೇ ಉರುಳಿಸಿದರು. 181 ರನ್ ಜೊತೆಯಾಟದ ಮೂಲಕ ಭಾರತವನ್ನು ಕಾಡಿದ ಕೇನ್ ವಿಲಿಯಮ್ಸ್ ಹಾಗೂ ಡೇರಿಲ್ ಮಿಶೆಲ್ ಅವರ ವಿಕೆಟ್‌ಗಳನ್ನೂ ಅವರೇ ಉರುಳಿಸಿದರು.

ಒತ್ತಡದ ಪಂದ್ಯದಲ್ಲಿ ಕ್ಷೇತ್ರ ರಕ್ಷಕರು ತಪ್ಪು ಮಾಡುವುದು ಸಹಜ. ಆದರೆ, ರವೀಂದ್ರ ಜಡೇಜಾ ಅವರು ಮಿಶೆಲ್, ಫಿಲಿಪ್ಸ್ ಹಾಗೂ ಮಾರ್ಕ್ ಚಾಪ್‌ಮಾನ್ ಅವರ ಕ್ಯಾಚ್ ಹಿಡಿದು ತಂಡದಲ್ಲಿ ಉತ್ಸಾಹ ತಂದರು.

# 17ರಂದು ವಿಪಕ್ಷ ನಾಯಕನ ಆಯ್ಕೆ ಸಾಧ್ಯತೆ

**(1ನೇ ಪುಟದಿಂದ)** ನಡೆಯಲಿದೆ. ಕೇಂದ್ರ ವೀಕ್ಷಕರು ಬರಲಿದ್ದಾರೆ. ಅದೇ ದಿನ ಶಾಸಕರ ಅಭಿಪ್ರಾಯ ಸಂಗ್ರಹಿಸಿ ವಿಪಕ್ಷ ನಾಯಕನ ಘೋಷಣೆಯಾಗುವ ಸಾಧ್ಯತೆ ಇದೆ ಎಂದವರು ತಿಳಿಸಿದ್ದಾರೆ. ಇನ್ನೂ ಬಿಜೆಪಿ ಪ್ರತಿಪಕ್ಷದ ನಾಯಕನ ಆಯ್ಕೆ ಮಾಡಿಲ್ಲ. ಹೀಗಾಗಿ ಕಳೆದ ಅಧಿವೇಶನ ವಿಪಕ್ಷ ನಾಯಕನಿಲ್ಲದೇ ನಡೆದಿತ್ತು.

# ಪ್ರತಿ ವಲಯಕ್ಕೂ ವ್ಯಾಪಿಸಿದೆ ಸಹಕಾರ ಕ್ಷೇತ್ರ

## 70ನೇ ಸಹಕಾರ ಸಪ್ತಾಹವನ್ನು ಉದ್ಘಾಟನೆ ನೆರವೇರಿಸಿದ ಜೆ.ಆರ್. ಷಣ್ಮುಖಪ್ಪ



ದಾವಣಗೆರೆ, ನ.15- ಸ್ವಾತಂತ್ರ್ಯದ ನಂತರದಲ್ಲಿ ಆರ್ಥಿಕ ಚೇತನಕ್ಕಾಗಿ ಕೃಷಿ ಕ್ಷೇತ್ರದ ಉತ್ತೇಜನಕ್ಕಾಗಿ ಆರಂಭಿಸಲಾದ ಸಹಕಾರ ಕ್ಷೇತ್ರ ಪಡಿತರ ವ್ಯವಸ್ಥೆ, ನ್ಯಾಯಬೆಲೆ ಅಂಗಡಿ, ಬೆಂಬಲ ಬೆಲೆ, ಸಕ್ಕರೆ ಕಾರ್ಖಾನೆ, ಜವಳಿ, ರೇಷ್ಮೆ ಉದ್ಯಮ, ಅಡಿಕೆ ಸೇರಿದಂತೆ ಪ್ರತಿ ವಲಯದಲ್ಲೂ ಸಹಕಾರ ರಂಗವು ವ್ಯಾಪಿಸಿದ್ದು, ಆರೋಗ್ಯ ಕ್ಷೇತ್ರಕ್ಕೂ ಇದು ಕಾಲಿಟ್ಟಿರುವುದು ಉತ್ತಮ ಬೆಳವಣಿಗೆ ಎಂದು ಜಿಲ್ಲಾ ಸಹಕಾರ ಒಕ್ಕೂಟದ ನಿರ್ದೇಶಕ ಜೆ.ಆರ್.ಷಣ್ಮುಖಪ್ಪ ತಿಳಿಸಿದರು.

ಮಂಗಳವಾರ ನಗರದ ಶಿವ ಪಾರ್ವತಿ ಕಲ್ಯಾಣ ಮಂಟಪದಲ್ಲಿ ಹಮ್ಮಿಕೊಂಡಿದ್ದ 70ನೇ ಸಹಕಾರ ಸಪ್ತಾಹ ಉದ್ಘಾಟಿಸಿ ಮಾತನಾಡಿದ ಅವರು, ದೇಶದಲ್ಲಿ ಹಸಿರು ಕ್ರಾಂತಿ, ಕ್ಷೀರ ಕ್ರಾಂತಿಯೊಂದಿಗೆ ಸಹಕಾರ ಚಳವಳಿ ಬೆಳವಣಿಗೆ ಕಂಡಿತು. ಆಡು ಮುಟ್ಟದ ಸೊಪ್ಪಿಲ್ಲ ಎಂಬಂತೆ ಪ್ರತಿಯೊಂದು ಕ್ಷೇತ್ರದಲ್ಲೂ ಸಹಕಾರ ರಂಗ ತಲುಪಿದೆ ಎಂದರು.

ಸಹಕಾರ ಸಂಘಗಳ ಲೆಕ್ಕ ಪರಿಶೋಧನಾ ಇಲಾಖೆ ಉಪ ನಿರ್ದೇಶಕ ಕೆ.ಮಹೇಶ್ವರಪ್ಪ ಮಾತನಾಡಿ, ಜಿಲ್ಲೆಯಲ್ಲಿ 1456 ಸಹಕಾರ ಸಂಘಗಳು ನೋಂದಣಿಯಾಗಿದ್ದು, 1108 ಸಹಕಾರ ಸಂಘಗಳು ಕಾರ್ಯ ನಿರ್ವಹಿಸುತ್ತಿವೆ. 379 ಹಾಲು ಉತ್ಪಾದಕರ ಸಹಕಾರ ಸಂಘಗಳು, 180 ಕೃಷಿ ಪತ್ತಿನ ಸಹಕಾರ ಸಂಘ, 78 ಕೃಷಿಯೇತರ ಪತ್ತಿನ ಸಹಕಾರ ಸಂಘಗಳು, 471 ವಿವಿಧ ರೀತಿಯ ಸಹಕಾರ ಸಂಘಗಳಿವೆ. ಚನ್ನಗಿರಿ ತುಮ್ಕೋಸ್ ಸಂಸ್ಥೆ 800 ಕೋಟಿ ವಹಿವಾಟು ನಡೆಸುತ್ತಿದೆ. ಜಿಲ್ಲೆಯ 180ಕ್ಕೂ ಹೆಚ್ಚು ಕೃಷಿ ಪತ್ತಿನ ಸಹಕಾರ ಸಂಘಗಳನ್ನು ಶೀಘ್ರವೇ ಗಣಕೀಕರಣಗೊಳಿಸಲಾಗುವುದು ಎಂದು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಒಕ್ಕೂಟದ ಅಧ್ಯಕ್ಷ ಸಿರಿಗೆರೆ ರಾಜಣ್ಣ ಮಾತನಾಡಿ, ಎಲ್ಲರೂ ಒಬ್ಬನಿಗಾಗಿ, ಒಬ್ಬನು ಎಲ್ಲರಿಗಾಗಿ ಎಂಬ ಸಹಕಾರ ತತ್ವದಡಿ ಸಹಕಾರ ಸಂಘ ಜನ್ಮ ತಾಳಿವೆ. ಸಂಘಗಳು ತತ್ವಮೌಲ್ಯ ಮರೆತರೆ ವಿನಾಶದ ಅಂಚಿಗೆ ಬಂದು ನಿಲ್ಲುತ್ತವೆ. ದೇಶದಲ್ಲಿ ಬಹುತೇಕರು ಕೃಷಿಕರಾಗಿದ್ದು, ಆರ್ಥಿಕವಾಗಿ ಹಿಂದುಳಿದಿದ್ದಾರೆ. ಅಂತಹವರಿಗೆ ಸಹಕಾರ ಕ್ಷೇತ್ರದ ಮೂಲಕ ನೆರವು ನೀಡುವ ಮೂಲಕ ಸಬಲರನ್ನಾಗಿಸುವ ಕೆಲಸವಾಗಬೇಕು ಎಂದು ಕರೆ ನೀಡಿದರು.

ಡಿಸಿಸಿ ಬ್ಯಾಂಕ್ ನಿರ್ದೇಶಕ ಆರ್.ಜಿ.ಶ್ರೀನಿವಾಸಮೂರ್ತಿ, ಜನತಾ ಬಜಾರ್ ಅಧ್ಯಕ್ಷ ಜಿ.ಡಿ.ಗುರುಸ್ವಾಮಿ, ಶಿವ ಕೋ-ಆಪರೇಟಿವ್ ಬ್ಯಾಂಕ್ ಉಪಾಧ್ಯಕ್ಷ ಐಗೂರು ಸಿ.ಚಂದ್ರಶೇಖರ್, ಸಿಟಿ ಕೋ-ಆಪ್ ಬ್ಯಾಂಕ್ ಅಧ್ಯಕ್ಷ ಎನ್.ಎಂ. ನಿರಂಜನಮೂರ್ತಿ, ಒಕ್ಕೂಟದ ಉಪಾಧ್ಯಕ್ಷ ಟಿ.ರಾಜಣ್ಣ, ಸಿಇಓ ಮಂಗಳಗೌಡ ದಾನಪ್ಪಗೌಡ, ಶಿಮುಲ್ ನಿರ್ದೇಶಕರಾದ ಕೆ.ಎನ್.ಸೋಮಶೇಖರಪ್ಪ, ಎಸ್.ಬಿ.ಶಿವಕುಮಾರ, ಒಕ್ಕೂಟದ ನಿರ್ದೇಶಕರಾದ ಡಿ.ಎಂ.ಮುರುಗೇಂದ್ರಯ್ಯ, ಎನ್. ಕುಮಾರ, ಕೆ.ಜಿ.ಸುರೇಶ, ಎಸ್.ಜಿ.ಪರಮೇಶ್ವರಪ್ಪ, ಡಿ. ಶಿವಗಂಗಮ್ಮ, ಅನ್ನಪೂರ್ಣ, ಎಂ.ವಿರಾಜ್, ಎನ್.ಎಂ. ಹಾಲಸ್ವಾಮಿ, ಎ.ಎಂ.ಮಂಜುನಾಥ, ಸಿ.ವೆಂಕಟೇಶ ನಾಯ್ಕ, ವಿ.ಪಿ.ಮಹಮ್ಮದ್ ಷಫೀವುಲ್ಲಾ, ಎಚ್.ತಿಪ್ಪೇಸ್ವಾಮಿ, ಸಹಕಾರ ಸಂಘಗಳ ಉಪ ನಿಬಂಧಕರಾದ ಎಸ್.ಮಂಜುಳಾ ಹಾಗು ಇತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಸಹಕಾರ ಅಭಿವೃದ್ಧಿ ಅಧಿಕಾರಿ ಜಿ.ಎಸ್.ಸುರೇಂದ್ರ ಉಪನ್ಯಾಸ ನೀಡಿದರು. ಸಹಕಾರ ಶಿಕ್ಷಕ ಕೆ.ಎಚ್. ಸಂತೋಷಕುಮಾರ್ ಕಾರ್ಯಕ್ರಮ ನಡೆಸಿಕೊಟ್ಟರು.

# ಟೇಬಲ್ ಟೆನ್ನಿಸ್‌ಗೂ ಬೇಕು ಪ್ರೋತ್ಸಾಹ: ಪ್ರೊ.ಲಿಂಗಣ್ಣ



ದಾವಣಗೆರೆ,ನ.15- ಟೇಬಲ್ ಟೆನಿಸ್ ಕ್ರೀಡೆ ಗ್ರಾಮೀಣ ಪ್ರದೇಶದ ಕ್ರೀಡೆಯಲ್ಲ. ಈ ಕ್ರೀಡೆಯಲ್ಲಿ ಭಾಗವಹಿಸುವ ವಿದ್ಯಾರ್ಥಿಗಳ ಪ್ರಮಾಣ ಕಡಿಮೆ. ಇದು ವಿದ್ಯಾರ್ಥಿಗಳ ತಪ್ಪಲ್ಲ. ಎಲ್ಲಾ ಕಾಲೇಜುಗಳಲ್ಲಿ ಈ ಕ್ರೀಡೆಯ ತರಬೇತಿಯಿಲ್ಲ. ಕ್ರಿಕೆಟ್, ಫುಟ್ಬಾಲ್, ವಾಲಿಬಾಲ್, ಕಬಡ್ಡಿ, ಬ್ಯಾಡ್ಮಿಂಟನ್ ಮುಂತಾದ ಆಟಗಳಿಗೆ ಸಿಕ್ಕಂತಹ ಪ್ರೋತ್ಸಾಹ ಟೇಬಲ್ ಟೆನ್ನಿಸ್ ಕ್ರೀಡೆಗೂ ಸಿಗಬೇಕು ಎಂಬ ಆಶಯವನ್ನು ಮಾಜಿ ಶಾಸಕ ಪ್ರೊ. ಎನ್. ಲಿಂಗಣ್ಣ ವ್ಯಕ್ತಪಡಿಸಿದರು.

ನಗರದ ಎ.ಆರ್.ಎಂ.ಪ್ರಥಮ ದರ್ಜೆ ಕಾಲೇಜಿನಲ್ಲಿ ಐಕ್ಯೂಎಸಿ ಘಟಕ ಹಾಗೂ ದಾವಣಗೆರೆ ವಿಶ್ವವಿದ್ಯಾನಿಲಯ ಹಾಗೂ ದಾ ವಿವಿ ದೈಹಿಕ ಶಿಕ್ಷಣ ನಿರ್ದೇಶಕರ ಸಂಘ ಇವರುಗಳ ಸಹಯೋಗದಲ್ಲಿ ದಾವಿವಿ ಅಂತರ್ ಕಾಲೇಜುಗಳ ಟೇಬಲ್ ಟೆನ್ನಿಸ್ ಪುರುಷ ಮತ್ತು ಮಹಿಳಾ ಪಂದ್ಯಾವಳಿ ಮತ್ತು ಉದ್ಘಾಟನಾ ಸಮಾರಂಭದ ಅಧ್ಯಕ್ಷತೆ ವಹಿಸಿದ ಅವರು ಮಾತನಾಡಿದರು.

ವಿದ್ಯಾರ್ಥಿಗಳು ಹಿರಿಯ ತರಬೇತಿದಾರರನ್ನು ಗುರುತಿಸಿ, ಅವರ ಮಾರ್ಗದರ್ಶನ ಪಡೆದುಕೊಳ್ಳಬೇಕು. ಮುಖ್ಯವಾಗಿ ಕ್ರೀಡಾ ಮನೋಭಾವನೆ ಬೆಳೆಸಿಕೊಳ್ಳಬೇಕು. ಆಟವನ್ನು ದ್ವೇಷದ ಭಾವನೆಯಿಂದ ಆಡಬಾರದು. ಒಳ್ಳೆಯ ಮನಸ್ಸಿನಿಂದ ಆಡಿ ಅತ್ಯಂತ ಉತ್ಸಾಹದಿಂದ, ಖುಷಿಯಿಂದ ಕ್ರೀಡೆಗಳಲ್ಲಿ ಭಾಗವಹಿಸುವಂತೆ ಅವರು ಕರೆ ನೀಡಿದರು.

ಧಾರವಾಡದ ವೃತ್ತಿಪರ ಟೇಬಲ್ ಟೆನ್ನಿಸ್ ತರಬೇತುದಾರ ಎ. ಜೆ. ಸಣ್ಣಕ್ಕಿ ಅವರು ಉದ್ಘಾಟಿಸಿದರು. ನಂತರ ಮಾತನಾಡಿ, ಟೇಬಲ್ ಟೆನ್ನಿಸ್ ಕ್ರೀಡೆ ಅಂತರ ರಾಷ್ಟ್ರೀಯ ಮಟ್ಟದಲ್ಲಿ ಪ್ರಸಿದ್ದಿ ಪಡೆದ ಕ್ರೀಡೆಯಾಗಿದೆ. ಅಲ್ಲದೇ, ವಿದ್ಯಾರ್ಥಿಗಳಲ್ಲಿ ಮಾನಸಿಕ ಕೌಶಲ್ಯ ಅಭಿವೃದ್ದಿಯನ್ನುಂಟು ಮಾಡುತ್ತದೆ. ಮಾನಸಿಕ ಸ್ಥಿರತೆ ಕಾಯ್ದುಕೊಳ್ಳಲು ಸಹಕಾರಿಯಾಗುತ್ತದೆ ಎಂದು ಹೇಳಿದರು.

ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ದಾವಿವಿ ಕ್ರೀಡಾಧಿಕಾರಿ ಡಾ. ಬಿ. ಹೆಚ್. ವೀರಪ್ಪ ಮಾತನಾಡಿ, ಇತ್ತೀಚಿನ ಮಕ್ಕಳಲ್ಲಿ ಕ್ರೀಡೆಗಳಲ್ಲಿ ಭಾಗವಹಿ ಸುವ ಮನೋಭಾವ ಕಡಿಮೆಯಾಗಿದೆ, ಮಕ್ಕಳೆಲ್ಲ ಮೊಬೈಲ್ ಗೇಮ್‌ನಲ್ಲಿ ಕಾಲ ಕಳೆಯುತ್ತಿದ್ದಾರೆ ಎಂದು ವಿಷಾದಿಸಿದರು.

ಮೊಬೈಲ್ ಬಿಟ್ಟು ಮಕ್ಕಳು ಮಣ್ಣಿನಲ್ಲಿ ಆಟ ಆಡುವ ಮನಸ್ಸು ಮಾಡಬೇಕು. ಕ್ರೀಡೆಯಲ್ಲಿ ಟೇಬಲ್ ಟೆನ್ನಿಸ್ ಆಟ, ಎಲ್ಲಾ ಆಟಗಳ ಮೇಲೆ ಪ್ರಭಾವ ಬೀರಿದೆ. ವಿದ್ಯಾರ್ಥಿಗಳು ಆಸಕ್ತಿಯಿಂದ ಭಾಗವಹಿಸಿ ಸ್ಥಾನ ಪಡೆದುಕೊಂಡರೆ ಸರ್ಕಾರಿ ಕೆಲಸ ಸಿಗುತ್ತದೆ. ವಿದ್ಯಾರ್ಥಿಗಳು ಮಣ್ಣಿನಲ್ಲಿ ಮಮತೆಯನ್ನು ಬೆಳೆಸಿಕೊಳ್ಳಬೇಕೆಂದು ಹೇಳಿದರು.

ಪ್ರಾಸ್ತಾವಿಕವಾಗಿ ಕಾಲೇಜಿನ ಪ್ರಾಂಶುಪಾಲ ಎಂ. ಡಿ. ಅಣ್ಣಯ್ಯ ಮಾತನಾಡಿದರು. ವೇದಿಕೆಯ ಮೇಲೆ ಕಾಲೇಜಿನ ಐಕ್ಯೂಎಸಿ ಘಟಕದ ಸಂಚಾಲಕ ಡಿ. ಅಂಜಿನಪ್ಪ, ಟೇಬಲ್ ಟೆನ್ನಿಸ್ ಕ್ರೀಡೆಯ ಸಂಘಟನಾ ಕಾರ್ಯದರ್ಶಿ ಬಸವರಾಜ ವಿ. ದಮ್ಮಳ್ಳಿ, ತ್ರಿವೇಣಿ, ಉಪಸ್ಥಿತರಿದ್ದರು. ಕಾಲೇಜಿನ ಬೋಧಕರಾದ ಡಾ ರಾಕೇಶ್ ಬಿ.ಸಿ. ಮೌನೇಶ್ವರ ಟಿ. ಎನ್, ನಾಗರಾಜ ಎನ್, ಸುಮ, ಮಂಜುಳ ಎಂ ಎಸ್., ಗಣೇಶ, ಗೀತಾ ಪಾಟೀಲ್ ಬೋಧಕೇತರರಾದ ಷಣ್ಮುಖಪ್ಪ, ಶಾರದಮ್ಮ ಫಕ್ಕೀರಪ್ಪ, ಶಂಭು ಮತ್ತು ಇತರರು ಭಾಗವಹಿಸಿದ್ದರು. ಹರೀಶ್ ಪ್ರಾರ್ಥಿಸಿದರು. ಎಸ್.ಬಿ.ಮನೋಹರ ಸ್ವಾಗತಿಸಿದರು. ಮೊಹಮ್ಮದ್ ರಿಯಾಜ್ ವಂದಿಸಿದರು. ಕಾಡಜ್ಜಿ ಶಿವಪ್ಪ ನಿರೂಪಿಸಿದರು.

# ಬಾಡಿಗೆ ಕೇಳಿ ದಂಗಾಗುವುದು ತಪ್ಪಲೇ ಇಲ್ಲ

**(1ನೇ ಪುಟದಿಂದ)** ಅಳವಡಿಸುವುದರಿಂದ ಜನರು ಆಟೋ ಹತ್ತಲು ಹಿಂದೇಟು ಹಾಕಲೂಬಹುದು ಮತ್ತು ಗೊಂದಲಕ್ಕೂ ಕಾರಣವಾಗಬಹುದು ಎಂಬುದು ಆಟೋ ಚಾಲಕರ ವಾದವಾಗಿದೆ. ಆಟೋರಿಕ್ಷಾಗಳಲ್ಲಿ ಮೀಟರ್ ಅಳವಡಿಸಲಾಗುವುದು ಎಂಬ ಆದೇಶ ಇದೇ ಮೊದಲೇನಲ್ಲ. 1998 ರಲ್ಲಿ 5 ರೂಪಾಯಿ ಬಾಡಿಗೆ ಇದ್ದ ಸಂದರ್ಭದಲ್ಲೇ ಆಟೋರಿಕ್ಷಾಗಳಲ್ಲಿ 7 ರೂಪಾಯಿ ಕನಿಷ್ಟ ಬಾಡಿಗೆ ನಿರ್ಧ ರಿಸಿ ಮೀಟರ್ ಅಳವಡಿಕೆ ಮಾಡಲಾಗಿತ್ತು. ಆದರೆ ಹೆಚ್ಚು ದಿನ ಮೀಟರ್ ಬಾಡಿಗೆ ಪ್ರಕ್ರಿಯೆ ಮುಂದುವರೆಯಲೇ ಇಲ್ಲ.

ಒಟ್ಟಿನಲ್ಲಿ ಇಂದು ಬಹುತೇಕ ರಸ್ತೆಗಳು ಉತ್ತಮವಾಗಿಯೇ ಇವೆ. ಇನ್ನಾದರೂ ಮೀಟರ್ ಕಡ್ಡಾಯಗೊಳಿಸಿ ಪ್ರಯಾಣಿಕರು ಸುಲಿಗೆ ಮುಕ್ತರಾಗಲು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು ಕ್ರಮ ಕೈಗೊಳ್ಳುವರೇ ಎಂಬುದು ಸಾರ್ವಜನಿಕರ ಒತ್ತಾಸೆಯಾಗಿದೆ.

### 'ಮೀಟರ್' ಹಳೇ ಪದ್ಧತಿ ಬದಲಾಗಬಾರದೇಕೇ?

**ಮುಂದುವರಿದ ತಂತ್ರಜ್ಞಾನ, ಪ್ರತಿಯೊಬ್ಬರ ಕೈಯಲ್ಲೂ ಮೊಬೈಲ್ ಇರುವ ದಿನಗಳಲ್ಲಿ ಮೀಟರ್ ಎಂಬ ಹಳೆಯ ಪದ್ಧತಿ ಹಿಂದೆಯೇ ಹೆಜ್ಜೆ ಹಾಕುವುದು ಎಷ್ಟು ಸರಿ? ಎಂಬ ಪ್ರಶ್ನೆಯೂ ಸಾರ್ವಜನಿಕ ವಲಯದಲ್ಲಿ ಕೇಳಿ ಬರುತ್ತಿದೆ. ಇಂಧನ ದರ ಹೆಚ್ಚಾದಂತೆಲ್ಲಾ ಆಟೋಗಳ ಮಿನಿಮಮ್ ದರ ಹೆಚ್ಚಿಸಬೇಕಾಗುತ್ತದೆ. ಸಾವಿರಾರು ಆಟೋ ಮೀಟರ್‌ಗಳಲ್ಲಿ ದರ ಮಾರ್ಪಾಡು ಮಾಡಲು ಹೆಚ್ಚಿನ ಸಮಯ ಬೇಕಾಗುತ್ತದೆ. ಇಂತಹ ತೊಂದರೆಗಳಿಂದ ಮುಕ್ತವಾಗಲು ಆಪ್ ಸಹಕಾರಿಯಾಗುತ್ತದೆ.**

**ಸರ್ಕಾರ ಅಥವಾ ಸ್ಮಾರ್ಟ್ ಸಿಟಿ ಅನುದಾನ ಬಳಸಿಕೊಂಡು ಆಪ್ ರಚಿಸಿ, ಇಂತಿಷ್ಟು ದೂರಕ್ಕೆ ಇಷ್ಟು ರೂ. ಎಂದು ಆಪ್ ಮೂಲಕ ದರ ನಿಗದಿಪಡಿಸಿದರೆ, ಚಾಲಕ ಹಾಗೂ ಪ್ರಯಾಣಿಕ ಇಬ್ಬರಿಗೂ ಅನುಕೂಲವಾಗುತ್ತದೆ ಎಂಬ ಸಲಹೆಗಳೂ ಕೇಳಿ ಬಂದಿವೆ.**

# ಆಪರೇಷನ್ ಅಗತ್ಯವೇ ಇಲ್ಲ : ವಿಜಯೇಂದ್ರ

**(1ನೇ ಪುಟದಿಂದ)** ಉತ್ತರ ಕೊಡೋಣ. ಬರಗಾಲದ ಪರಿಸ್ಥಿತಿಯಲ್ಲೂ ಉಸ್ತುವಾರಿ ಸಚಿವರು ಪ್ರವಾಸ ಮಾಡುತ್ತಿಲ್ಲ. ರೈತರ ಸಮಸ್ಯೆಗಳಿಗೆ ಸ್ಪಂದಿಸುವುದನ್ನು ಮರೆತು ಅಧಿಕಾರ ದರ್ಪ ಮತ್ತು ಉದ್ಧಟತನದಿಂದ ವರ್ತಿಸುತ್ತಿದ್ದಾರೆ.

ನಮಗೆ ತಕ್ಷಣಕ್ಕೆ ಜಿಲ್ಲಾ, ತಾಲ್ಲೂಕು ಪಂಚಾಯತ್ ಚುನಾವಣೆ ಎದುರಾಗಬಹುದು. ಅದನ್ನು ಗಂಭೀರವಾಗಿ ಪರಿಗಣಿಸೋಣ. ನಾನು ಯಾವುದೇ ಸಮುದಾಯಕ್ಕೆ ಸೇರಿದವನಲ್ಲ. ಎಲ್ಲರ ವಿಶ್ವಾಸ ಗಳಿಸಿ ಪಕ್ಷವನ್ನು ಸಂಘಟಿಸಿ, ಲೋಕಸಭಾ ಚುನಾವಣೆಯಲ್ಲಿ 28 ಕ್ಷೇತ್ರಗಳಲ್ಲಿ 28ರಲ್ಲೂ ಗೆಲುವು ಸಾಧಿಸಿ ಮತ್ತೆ ಪಕ್ಷವನ್ನು ಅಧಿಕಾರಕ್ಕೆ ತಂದು ಕಮಲದ ಬಾವುಟ ಹಾರಿಸೋಣ ಎಂದರು.

ರಾಜ್ಯದಲ್ಲಿ ಸಾಕಷ್ಟು ಹಿರಿಯರು ಪಕ್ಷದಲ್ಲಿದ್ದಾರೆ. ಅವರನ್ನು ಬಿಟ್ಟು ನನಗೆ ಅವಕಾಶ ಕೊಟ್ಟಿದ್ದಾರೆ ಎಂದರೆ, ಆ ಸ್ಥಾನದ ಮಹತ್ವದ ಅರಿವು ನನಗಿದೆ. ಈ ವೇದಿಕೆಯ ಮೂಲಕ ಭರವಸೆ ನೀಡುತ್ತೇನೆ. ಹಿರಿಯ ನಾಯಕರು ಮತ್ತು ಕಾರ್ಯಕರ್ತರು ತಲೆ ತಗ್ಗಿಸುವ ರೀತಿ ನಡೆದುಕೊಳ್ಳುವುದಿಲ್ಲ. ಅವರಿಗೆ ಎಲ್ಲಾ ಪರಿಸ್ಥಿತಿಯಲ್ಲೂ ಬೆಂಬಲವಾಗಿ ನಿಂತು ಪ್ರಾಮಾಣಿಕವಾಗಿ ಕೆಲಸ ಮಾಡುತ್ತೇನೆ ಎಂದು ಹೇಳಿದರು.

ರಾಜ್ಯಾಧ್ಯಕ್ಷರಾಗಿ ಅಧಿಕಾರ ವಹಿಸಿಕೊಳ್ಳುವುದಕ್ಕೂ ಮುನ್ನ ಪಕ್ಷದ ಕಚೇರಿಯಲ್ಲಿ ಹೋಮ, ಹವನ ನಡೆಯಿತು. ಬಹುದಿನಗಳ ನಂತರ ಕಚೇರಿಯನ್ನು ಮೈಸೂರಿನ ಅರಮನೆ ರೀತಿ ದೀಪಾಲಂಕಾರಗಳಿಂದ ಶೃಂಗರಿಸಲಾಗಿತ್ತು.

ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು ಕಾರ್ಯಕ್ರಮದ ಆರಂಭದಿಂದ ಕೊನೆಯವರೆಗೂ ಸ್ಥಳದಲ್ಲಿದ್ದು, ಪುತ್ರನಿಗೆ ಮಾರ್ಗದರ್ಶನ ಮಾಡಿದರು.

ಅಧಿಕಾರ ಪದಗ್ರಹಣ ಅದ್ದೂರಿಯಾಗಿ ನಡೆಯಿತಾದರೂ ಪಕ್ಷದ ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿ ಬಿ.ಎಲ್.ಸಂತೋಷ್ ಬಣದ ಯಾವೊಬ್ಬ ನಾಯಕ, ಮುಖಂಡರು ಸುಳಿಯಲಿಲ್ಲ.

ಅಧಿಕಾರ ವಹಿಸಿಕೊಂಡು ಕಾರ್ಯಕರ್ತರನ್ನು ಉದ್ದೇಶಿಸಿ ಮಾತಾಡಿದ ಸಂದರ್ಭದಲ್ಲಿ ವಿಜಯೇಂದ್ರ ಅವರು, ಪದೇ ಪದೇ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಅವರ ಗುಣಗಾನ ಮಾಡಿದರು.

# ಭದ್ರತಾ ನೋಂದಣಿ ಫಲಕ ಅಳವಡಿಕೆ ಗಡುವು ವಿಸ್ತರಣೆ

**(1ನೇ ಪುಟದಿಂದ)** ಅವಧಿಯಲ್ಲೂ ಫಲಕಗಳನ್ನು ಅಳವಡಿಸಿಕೊಳ್ಳದೇ ಇದ್ದರೆ 500 ರೂ.ಗಳ ದಂಡ ವಿಧಿಸಲಾಗುವುದು ಎಂದು ಎಸ್ಪಿ ಎಚ್ಚರಿಸಿದರು.

ಹೆಚ್ಚಿನ ಭದ್ರತೆಯ ಫಲಕಗಳನ್ನು ನಕಲು ಮಾಡುವುದು ಕಷ್ಟಸಾಧ್ಯ. ಅಲ್ಲದೇ, ಫಲಕಗಳಲ್ಲಿ ವಾಹನದ ವಿವರಗಳು ಪೊಲೀಸರಿಗೆ ಲಭ್ಯವಾಗುತ್ತವೆ. ಇದು ಅಪರಾಧಿಕ ಚಟುವಟಿಕೆ ತಡೆಯಲು ನೆರವಾಗುತ್ತದೆ ಎಂದವರು ಹೇಳಿದರು.

ಈ ಸಂದರ್ಭದಲ್ಲಿ ಮಾತನಾಡಿದ ಪ್ರಾದೇಶಿಕ ಸಾರಿಗೆ ಅಧಿಕಾರಿ ಪ್ರಮಥೇಶ್, ಹೆಚ್.ಎಸ್.ಆರ್.ಪಿ. ಫಲಕಗಳನ್ನು ಅಳವಡಿಸುವಾಗ ದಾಖಲೆಗಳು ಸರಿ ಇರಬೇಕು. ವಾಹನದ ಮಾಹಿತಿಯಲ್ಲಿ ಲೋಪವಿದ್ದಲ್ಲಿ ಆರ್.ಟಿ.ಒ. ಕಚೇರಿಯಲ್ಲಿ ಸರಿಪಡಿಸಿಕೊಳ್ಳಬೇಕು ಎಂದು ತಿಳಿಸಿದರು.

ಕೆಎಸ್‌ಆರ್‌ಟಿಸಿ ವಿಭಾಗೀಯ ನಿಯಂತ್ರಕ ಶ್ರೀನಿವಾಸ ಮೂರ್ತಿ ಮಾತನಾಡಿ, 53 ಸರ್ಕಾರಿ ಬಸ್‌ಗಳಿಗೆ ಹೆಚ್.ಎಸ್.ಆರ್.ಪಿ. ಅಳವಡಿಕೆಯಾಗಿದೆ. ಉಳಿದ 323 ಬಸ್‌ಗಳಿಗೆ ಅಳವಡಿಕೆ ಮಾಡಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ ಎಂದರು.

ಹೆಚ್.ಎಸ್.ಆರ್.ಪಿ. ಅಳವಡಿಸಿಕೊಳ್ಳಲು ಸಿದ್ಧರಾಗಿದ್ದೇವೆ. ಆದರೆ, ಕೆಲ ಕಂಪನಿಗಳ ವಾಣಿಜ್ಯ ವಾಹನಗಳಿಗೆ ಫಲಕ ಅಳವಡಿಸುವ ಘಟಕಗಳು ದಾವಣಗೆರೆಯಲ್ಲಿ ಇಲ್ಲ ಎಂದು ಖಾಸಗಿ ವಾಹನಗಳ ಸಂಘದವರು ತಿಳಿಸಿ, ಈ ಬಗ್ಗೆ ಕ್ರಮ ತೆಗೆದುಕೊಳ್ಳಬೇಕೆಂದು ಒತ್ತಾಯಿಸಿದರು.

ಸಭೆಯಲ್ಲಿ ಬಸ್, ಆಟೋ, ಖಾಸಗಿ ವಾಣಿಜ್ಯ ವಾಹನಗಳ ಸಂಘಗಳ ಪ್ರತಿನಿಧಿಗಳು, ವಾಹನಗಳ ಶೋರೂಂ ಪ್ರತಿನಿಧಿಗಳು ಮತ್ತಿತರರು ಉಪಸ್ಥಿತರಿದ್ದರು.

ವೇದಿಕೆಯ ಮೇಲೆ ಎಎಸ್‌ಪಿ ವಿಜಯಕುಮಾರ್ ಎಂ. ಸಂತೋಷ್, ದಾವಣಗೆರೆ ಸಂಚಾರ ವೃತ್ತದ ಸಿಪಿಐ ಮಂಜುನಾಥ್ ನೆಲವಾಗಲು ಮತ್ತಿತರರು ಉಪಸ್ಥಿತರಿದ್ದರು.

### ನಿಯಮ ಉಲ್ಲಂಘಿಸಿದ್ದೇವೆ ಹೆಚ್.ಎಸ್.ಆರ್.ಪಿ. ಕೊಡಿ!

ಹಳೆಯ ಸರಕು ಸಾಗಣೆ ವಾಹನಗಳಿಗೆ ನಿಯಮ ಮೀರಿ ಇಂಜಿನ್ ಬದಲಿಸಲಾಗಿದೆ. ಈ ರೀತಿಯ ವಾಹನಗಳಿಗೆ ಹೆಚ್.ಎಸ್.ಆರ್.ಪಿ. ಬುಕ್ಕಿಂಗ್ ಸಾಧ್ಯವಾಗುತ್ತಿಲ್ಲ ಎಂದು ವಾಣಿಜ್ಯ ವಾಹನಗಳ ಮಾಲೀಕರ ಸಂಘದ ಪ್ರತಿನಿಧಿಯೊಬ್ಬರು ದೂರಿದರು. ಆರ್.ಟಿ.ಒ. ಅನುಮತಿ ಪಡೆಯದೇ ಇಂಜಿನ್ ಬದಲಿಸಿದ್ದೇ ತಪ್ಪು. ನಿಯಮಗಳನ್ನು ಮೀರಿ ಮನಸಿಗೆ ಬಂದಂತೆ ವಾಹನಗಳನ್ನು ಬದಲಿಸಲು ಕಾನೂನಿನಲ್ಲಿ ಅವಕಾಶ ಇಲ್ಲ ಎಂದು ಅಧಿಕಾರಿಗಳು ತಿಳಿಸಿದರು.

### ನಕಲಿ ವೆಬ್‌ಸೈಟ್‌ಗಳಿಂದ ವಂಚನೆ

ಹೆಚ್.ಎಸ್.ಆರ್.ಪಿ. ಹೆಸರಿನಲ್ಲಿ ಹಣ ಪಡೆಯುವ ನಕಲಿ ವೆಬ್‌ಸೈಟ್‌ಗಳಿವೆ. ಇಂತಹ ವೆಬ್‌ಸೈಟ್ ಒಂದಕ್ಕೆ ಹಣ ಪಾವತಿಸಿ ವಂಚನೆಯಾಗಿದೆ ಎಂದು ಸಭೆಯಲ್ಲಿದ್ದ ಸಾರ್ವಜನಿಕರೊಬ್ಬರು ದೂರಿದರು. ಈ ಬಗ್ಗೆ ಪರಿಶೀಲಿಸಿ ಸೈಬರ್ ಅಪರಾಧ ದಳ ಕ್ರಮ ತೆಗೆದುಕೊಳ್ಳಬೇಕು ಎಂದು ಎಸ್ಪಿ ಉಮಾ ಪ್ರಶಾಂತ್ ಸೂಚಿಸಿದರು.

### ಖಾಸಗಿ ಬಸ್‌ಗಳು ಖಾಲಿಯಾಗಿ ನಿಶ್ಯಕ್ತಿ!

ಬಸ್‌ಗಳ ಫುಟ್‌ಬೋರ್ಡ್ ಮೇಲೆ ಮಕ್ಕಳು ನಿಲ್ಲುವ ದೃಶ್ಯಗಳು ಕಂಡು ಬರುತ್ತಿವೆ. ಈ ರೀತಿ ಮಾಡಿದರೆ ಬಸ್‌ಗಳ ಅನುಮತಿಯನ್ನೇ ರದ್ದುಗೊಳಿಸಲಾಗುವುದು ಎಂದು ಎಸ್ಪಿ ಉಮಾ ಪ್ರಶಾಂತ್ ಎಚ್ಚರಿಸಿದರು. ಆಗ ಮಾತನಾಡಿದ ಖಾಸಗಿ ಬಸ್ ಪ್ರತಿನಿಧಿಯೊಬ್ಬರು, ಶಕ್ತಿ ಯೋಜನೆ ಬಂದ ಮೇಲೆ ಖಾಸಗಿ ಬಸ್‌ಗಳ ಸೀಟುಗಳೇ ತುಂಬುತ್ತಿಲ್ಲ. ಶಕ್ತಿ ಯೋಜನೆ ನಮಗೆ ನಿಶ್ಯಕ್ತಿ ತಂದಿದೆ. ಹೀಗಾಗಿ ಫುಟ್‌ಬೋರ್ಡ್ ಮೇಲೆ ನಿಲ್ಲಿಸುತ್ತಿರುವುದು ಸರ್ಕಾರಿ ಬಸ್‌ಗಳಷ್ಟೇ ಎಂದು ಹೇಳಿದರು.

# ಸಚಿವರಿಗೆ ಪತ್ರ

**(1ನೇ ಪುಟದಿಂದ)** ಪತ್ರದಲ್ಲಿ ಹೇಳಿದ್ದಾರೆ. ರಾಜ್ಯಕ್ಕೆ 35,162.05 ಕೋಟಿ ರೂ.ಗಳ ನಷ್ಟವಾಗಿದೆ. ರಾಷ್ಟ್ರೀಯ ವಿಕೋಪ ಪರಿಹಾರ ನಿಧಿಯಿಂದ 18,171.44 ಕೋಟಿ ರೂ. ಬಿಡುಗಡೆ ಮಾಡುವಂತೆ ಅವರು ಒತ್ತಾಯಿಸಿದ್ದಾರೆ.

# ಸಮಸ್ಯೆ ಆಲಿಸಿದ ಶಾಸಕ ಬಸವಂತಪ್ಪ

**(1ನೇ ಪುಟದಿಂದ)** ಉಸ್ತುವಾರಿ ಸಚಿವರು ಹಾಗೂ ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಚರ್ಚಿಸಿ ಮನೆಗಳನ್ನು ನಿರ್ಮಾಣ ಮಾಡಿಕೊಡಲು ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ ಎಂದು ಭರವಸೆ ನೀಡಿದರು.

ಅಲ್ಲಿಂದ ಸಾಗರಪೇಟೆಗೆ ಭೇಟಿ ನೀಡಿ, ಅಭಿವೃದ್ಧಿ ಕಾಮಗಾರಿಗಳನ್ನು ವೀಕ್ಷಿಸಿದರು. ಈ ವೇಳೆ ಜಮೀಯಾ ಮಸೀದಿ, ಖಬರಸ್ತಾನ್ ಅಭಿವೃದ್ಧಿಗೆ ಸರ್ಕಾರ 40 ಲಕ್ಷ ರೂ. ಬಿಡುಗಡೆಯಾದ ಆದೇಶ ಪತ್ರವನ್ನು ಮುಸ್ಲಿಂ ಮುಖಂಡರಾದ ಆಸೀಫ್, ಅಯೂಬ್ ಖಾನ್ ಅವರಿಗೆ ವಿತರಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಶಾಸಕರು, ರಾಜ್ಯ ಸರ್ಕಾರ ಅಲ್ಪ ಸಂಖ್ಯಾತ ಅಭಿವೃದ್ಧಿ ಇಲಾಖೆ ಮತ್ತು ವಕ್ಫ್ ಬೋರ್ಡ್ ಮೂಲಕ ಮಸೀದಿ, ಖಬರಾಸ್ತಾನ್ ಅಭಿವೃದ್ಧಿಗೆ ಸಾಕಷ್ಟು ಅನುದಾನ ಬಿಡುಗಡೆ ಮಾಡಿದೆ. ಅದರಂತೆ ಸಾಗರಪೇಟೆಯ ಜಾಮೀಯಾ ಮಸೀದಿ, ಖಬರಸ್ತಾನ್ ಅಭಿವೃದ್ಧಿಗೆ 40 ಲಕ್ಷ ರೂ. ಬಿಡುಗಡೆ ಮಾಡಿದೆ. ಅದೇ ರೀತಿ ಶಾಲೆಗಳ ಅಭಿವೃದ್ಧಿಗೆ ಹೆಚ್ಚಿನ ಗಮನ ಹರಿಸಲಾಗುವುದು ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಎಪಿಎಂಸಿ ಮಾಜಿ ಸದಸ್ಯ ಕಂಸಾಗರ ಜಯಣ್ಣ, ಮಾಯಕೊಂಡ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಬಿ.ಜೊ.ಗೌಡರು, ಬಿ.ಜಿ.ನಾಗರಾಜ್, ಕಾಂತರಾಜ್ ಸೇರಿದಂತೆ ಗ್ರಾಮಸ್ಥರಿದ್ದರು.


## ಮಾನ್ಯ ಗೌರವಾನ್ವಿತ ಹಿರಿಯ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ ದಾವಣಗೆರೆ

**ಪಿ. ಅಂಡ್.ಎಸ್.ಸಿ.12/2023**

**ಅರ್ಜಿದಾರರು :** 1) **ಶ್ರೀಮತಿ ಅಂಜಿನಮ್ಮ ಗಂಡ ಲೇಟ್ ದಂಡಿಗಪ್ಪ,** ವಯಸ್ಸು 49 ವರ್ಷ. 2) **ಪ್ರಿಯಾಂಕ ಎ.ಡಿ. ಕೋಂ ಲೇಟ್ ದಂಡಿಗಪ್ಪ,** ವಯಸ್ಸು 31 ವರ್ಷ. 3) **ಪ್ರತಿಭಾ ಡಿ. ಕೋಂ ಲೇಟ್ ದಂಡಿಗಪ್ಪ,** ವಯಸ್ಸು 23 ವರ್ಷ. 4) **ಪೂಜಾ ಡಿ. ಕೋಂ ಲೇಟ್ ದಂಡಿಗಪ್ಪ** ವಯಸ್ಸು 21 ವರ್ಷ. ಇವರೆಲ್ಲರ ವಿಳಾಸವು ಮನೆ ನಂ, 3/1160, 5ನೇ ತಿರುವು, ಗಾಂಧಿನಗರ ದಾವಣಗೆರೆ.

**ವಿರುದ್ಧ - ಎದುರುದಾರರು :** ಇಲ್ಲ,

**ಹಿಂದೂ ಉತ್ತರಾಧಿಕಾರಿ ಅಧಿನಿಯಮ ಕಲಂ 372 ಮತ್ತು ಸಿವಿಲ್ ಪ್ರಕ್ರಿಯಾ ಸಂಹಿತೆ ಕಲಂ 151ರ ಅಡಿಯಲ್ಲಿ ನೀಡಲಾದ ಪ್ರಕಟಣಾ ನೋಟೀಸು**

ಅರ್ಜಿದಾರರ ಮಗ ಶ್ರೀ ಬಿ. ಪ್ರವೀಣ ಬಿನ್ ದಂಡಿಗಪ್ಪ ಇವರು ಮೊದಲ ಅರ್ಜಿದಾರರ ಮಗನಾಗಿದ್ದು ಇವರು ದ್ವಿತೀಯ ದರ್ಜೆ ಸಹಾಯಕರಾಗಿ ಕೆಲಸ ಮಾಡಿರುತ್ತಾರೆ. 21.11.2013 ರಂದು ಬೆಳಿಗ್ಗೆ 9.30ಕ್ಕೆ ಕೆಲಸಕ್ಕೆ ಹೋಗಿ ವಾಪಾಸ್ ಬಂದಿರುವುದಿಲ್ಲ. ಗೌರವಾನ್ವಿತ ಪ್ರಧಾನ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಅಸಲು ದಾವ ನಂ. 256/2021 ರಲ್ಲಿ ಸಿವಿಲ್ ಡೆತ್ ಎಂದು ಆದೇಶವಾಗಿರುತ್ತದೆ.

ಈ ಕಾರಣ ಮೇಲ್ಕಂಡ ಪ್ರಕರಣದಲ್ಲಿನ ಅರ್ಜಿದಾರರು ಈ ನ್ಯಾಯಾಲಯದಲ್ಲಿ ಉತ್ತರಾಧಿಕಾರಿ ಕಾಯ್ದೆಯ ಕಲಂ 372 ರ ಪ್ರಕಾರ ಪ್ರಕರಣವನ್ನು ದಾಖಲಿಸಿದ್ದು, 4ನೇ ಅರ್ಜಿದಾರರಾದ ಪೂಜಾ ಡಿ.ಕೆ. ಬಿನ್ ಲೇಟ್ ದಂಡಿಗಪ್ಪ, ಇವರನ್ನು ಮೃತ ಡಿ. ಪ್ರವೀಣ್ ನವರ ಉತ್ತರಾಧಿಕಾರಿಯೆಂದು ಘೋಷಣೆ ಮಾಡಲು ಅರ್ಜಿಯನ್ನು ದಾಖಲಿಸಿರುವುದರಿಂದ ಈ ಅರ್ಜಿಗೆ ಯಾರಾದರು ತಕರಾರು ಸಲ್ಲಿಸುವವರು ಇದ್ದಲ್ಲಿ, ದಿನಾಂಕ : 07.12.2023ರ ಬೆಳಿಗ್ಗೆ 11 ಗಂಟೆಗೆ ಮೇಲ್ಕಂಡ ನ್ಯಾಯಾಲಯಕ್ಕೆ ಹಾಜರಾಗಿ ನೇರವಾಗಿಯಾಗಲೀ ಅಥವಾ ನಿಮ್ಮ ವಕೀಲರ ಮೂಲಕವಾಗಲೀ ತಕರಾರು ಸಲ್ಲಿಸುವುದು. ಇಲ್ಲವಾದಲ್ಲಿ ಅರ್ಜಿಯನ್ನು ಯಾರದೂ ತಕರಾರು ಇಲ್ಲವೆಂದು ಏಕಪಕ್ಷೀಯ ತೀರ್ಮಾನ ತೆಗೆದುಕೊಳ್ಳಲಾಗುವುದು ತಿಳಿಯಿರಿ. ನ್ಯಾಯಾಲಯದ ಮೊಹರು ಹಾಗೂ ಸಹಿಯೊಂದಿಗೆ ದಿನಾಂಕ : 25.10.2023 ರಂದು ಕೊಡಲ್ಪಟ್ಟಿದೆ.

ಅರ್ಜಿದಾರರ ಪರ ವಕೀಲರು
**(ರೇಣುಕ ಪ್ರಸಾದ್), (ಗುರು ಬಸವರಾಜ್ ಎನ್)**
ವಕೀಲರು
ಸ್ಥಳ : ದಾವಣಗೆರೆ

ನ್ಯಾಯಾಲಯದ ಆದೇಶದ ಮೇರೆಗೆ
ಮುಖ್ಯ ಆಡಳಿತಾಧಿಕಾರಿ
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ದಾವಣಗೆರೆ.



## ಸಹಕಾರ ಸಂಘಗಳ ಸಹಾಯಕ ನಿಬಂಧಕರು, ದಾವಣಗೆರೆ ಉಪವಿಭಾಗ, ದಾವಣಗೆರೆ ಇವರ ನ್ಯಾಯಾಲಯದಿಂದ ಕರ್ನಾಟಕ ರಾಜ್ಯ ಸಹಕಾರಿ ವಸತಿ ಮಹಾಮಂಡಲ ನಿ., ನಂ. 3. ಎಸ್. ಕರಿಯಪ್ಪ ರಸ್ತೆ, ಬಸವನಗುಡಿ, ಬೆಂಗಳೂರು - 04

## ಸ್ಥಿರ ಸ್ವತ್ತಿನ ಬಹಿರಂಗ ಹರಾಜು ನೋಟೀಸ್

ಈ ಕೆಳಗೆ ನಮೂದಿಸಿರುವ ಸದಸ್ಯರು ದಾವಣಗೆರೆ ಗೃಹ ನಿರ್ಮಾಣ ಸಹಕಾರ ಸಂಘ ನಿ., ದಾವಣಗೆರೆ ಸಂಘದ ಮುಖಾಂತರ ಕರ್ನಾಟಕ ರಾಜ್ಯ ಸಹಕಾರಿ ವಸತಿ ಮಹಾಮಂಡಲದಲ್ಲಿ ಸಾಲ ಪಡೆದು ಸಕಾಲದಲ್ಲಿ ಕಂತು ಪಾವತಿ ಮಾಡದೇ ಇರುವುದರಿಂದ ಸದರಿಯವರ ಮೇಲೆ ದಾವಾ ಹಾಕಿ ಡಿಕ್ರಿಯಾಗಿರುತ್ತದೆ. ಸದರಿ ಡಿಕ್ರಿ ಹಣದ ವಸೂಲಿಗಾಗಿ ಸಹಕಾರ ಸಂಘಗಳ ಸಹಾಯಕ ನಿಬಂಧಕರು, ದಾವಣಗೆರೆ ಉಪವಿಭಾಗ, ದಾವಣಗೆರೆ ಇವರು ಈ ಕೆಳಗಂಡ ದಿನದಲ್ಲಿ ಸಾಲಕ್ಕೆ ಆಧಾರ ಮಾಡಿರುವ ಸ್ಥಿರ ಸ್ವತ್ತನ್ನು ಬಹಿರಂಗ ಹರಾಜು ಮಾಡಲು ದಿನಾಂಕ ನಿಗದಿ ಮಾಡಿರುತ್ತಾರೆ. ಆದ್ದರಿಂದ ಸಾಲದ ಬಾಕಿ ಬಗ್ಗೆ ಸಾಲಕ್ಕೆ ಈಡು ಮಾಡಿರುವ ಸ್ವತ್ತುಗಳನ್ನು ಸಹಕಾರಿ ಕಾಯ್ದೆ ಅನುಸಾರ ಕೆಳಗೆ ನಮೂದಿಸಿರುವ ಷೆಡ್ಯೂಲ್ ಸ್ವತ್ತನ್ನು ಬಹಿರಂಗ ಹರಾಜು ನಡೆಸಲಾಗುತ್ತದೆ. ಸಾಲಕ್ಕೆ ಈಡು ಮಾಡಿರುವ ಸ್ವತ್ತು ಒಳ್ಳೆಯ ಆಯಕಟ್ಟಿನಲ್ಲಿದ್ದು, ಉತ್ತಮ ಆಸ್ತಿಯಾಗಿರುತ್ತದೆ. ಸಾರ್ವಜನಿಕರು ಛಡ ಸವಾಲಿನಲ್ಲಿ ಬಿಡ್ ಮಾಡಿ ಪಡೆಯಬಹುದು.

**ಸ್ವತ್ತಿನ ವಿವರ**

| ಕ್ರ. ಸಂ. | ಬಾಕಿದಾರರ ಹೆಸರು ವಿಳಾಸ ಶ್ರೀ/ಶ್ರೀಮತಿ | ಕೇಸ್ ನಂ. ಸಿ.ಇ.ಪಿ. ನಂ. | ಖಾತಾ/ ಸೈಟ್ ನಂ. | ಚೆಕ್ ಬಂದಿ | ವಸೂಲಿಯಾಗಬೇಕಾದ ಡಿಕ್ರಿ ಮೊಬಲಗು | ಹರಾಜು ದಿನಾಂಕ, ವಾರ, ಸಮಯ ಹಾಗೂ ಸ್ಥಳ |
|---|---|---|---|---|---|---|
| 1 | ಶ್ರೀಮತಿ ನಾಗಮ್ಮ ಕೋಂ ಅಂಜನಪ್ಪ | ದಾವಾ ಸಂಖ್ಯೆ : ಎ (ಹೆಚ್ & ಎಂ.) ಡಿ2/184/2014-15 ಸಿ.ಇ.ಪಿ. ನಂ. 53/2017-18 | ನಿವೇಶನ ಸಂಖ್ಯೆ 107, ಖಾತಾ ನಂ. 3027, ಡೋರ್ ನಂ. 685-6-107, ಶ್ರೀ ರಾಮ ಬಡಾವಣೆ, ನಿಟುವಳ್ಳಿ, ದಾವಣಗೆರೆ ಟವನ್, ದಾವಣಗೆರೆ ಜಿಲ್ಲೆ. | ಪೂ : ರಸ್ತೆ, ಪ : ನಿವೇಶನ ನಂ. 106 ರ ಸ್ವತ್ತು, ಉ : ರಸ್ತೆ, ದ : ನಿವೇಶನ ನಂ. 106 ರ ಸ್ವತ್ತು, ಪೂ.ಪ. : 20 ಅಡಿಗಳು, ಉ.ದ : 30 ಅಡಿಗಳು, ಒಟ್ಟು : 600 ಚ. ಅಡಿಗಳು. | ದಿನಾಂಕ 01.10.2023ಕ್ಕೆ ರೂ. 7,03,709/- + ಮುಂದುವರೆದ ಬಡ್ಡಿ + ಜಾಹೀರಾತು ವೆಚ್ಚ + ಇತರೆ ವೆಚ್ಚ. | ದಿನಾಂಕ : 23.11.2023 ಗುರುವಾರದಂದು ಬೆಳಿಗ್ಗೆ 11.30 ಗಂಟೆಗೆ, ನಿವೇಶನ ಸಂಖ್ಯೆ 107, ಖಾತಾ ನಂ. 3027, ಡೋರ್ ನಂ. 685-6-107, ಶ್ರೀರಾಮ ಬಡಾವಣೆ, ನಿಟುವಳ್ಳಿ, ದಾವಣಗೆರೆ ಟವನ್, ದಾವಣಗೆರೆ ಜಿಲ್ಲೆ, ಸ್ವತ್ತಿನ ಮುಂಭಾಗ |

ದಿನಾಂಕ : 15.11.2023
ಸ್ಥಳ : ದಾವಣಗೆರೆ

**ಸಹಕಾರ ಸಂಘಗಳ ಸಹಾಯಕ ನಿಬಂಧಕರು, ದಾವಣಗೆರೆ ಉಪ ವಿಭಾಗ, ದಾವಣಗೆರೆ ರವರ ಅಪ್ಪಣೆ ಮೇರೆಗೆ**
**ಸಹಿ/-**
**ಮಾರಾಟಾಧಿಕಾರಿಗಳು, ಕರ್ನಾಟಕ ರಾಜ್ಯ ಸಹಕಾರಿ ವಸತಿ ಮಹಾಮಂಡಲ ನಿ., ಬೆಂಗಳೂರು.**

**ಷರತ್ತುಗಳು :** 1. ಹರಾಜಿನಲ್ಲಿ ಬಿಡ್ ಮಾಡುವವರು ಹರಾಜು ಪ್ರಾರಂಭವಾಗುವ ಮೊದಲು ರೂ. 50,000/- ಗಳನ್ನು ಕರ್ನಾಟಕ ರಾಜ್ಯ ಸಹಕಾರಿ ವಸತಿ ಮಹಾಮಂಡಲ ನಿ., ಬೆಂಗಳೂರು ಇವರ ಹೆಸರಿಗೆ ಡಿ.ಡಿ. ಅಥವಾ ನಗದು ಮೂಲಕ ಠೇವಣಿ ಮಾಡಿ ಬಿಡ್ ಮಾಡತಕ್ಕದ್ದು. 2. ಹರಾಜಿನಲ್ಲಿ ಬಿಡ್ ನಿಂತ ತಕ್ಷಣ ಬಿಡ್ ಮೊಬಲಗಿನ ಶೇಕಡ 15ರಷ್ಟು ಹಣವನ್ನು ಪಾವತಿ ಮಾಡಿ ರಸೀದಿ ಪಡೆಯುವುದು. ಉಳಿದ ಹಣವನ್ನು ನೋಂದಣಿ ವೆಚ್ಚ ಸಹಿತ ಬಿಡ್ ದಿನಾಂಕದಿಂದ 45 ದಿವಸದೊಳಗೆ ಪಾವತಿ ಮಾಡತಕ್ಕದ್ದು. ತಪ್ಪಿದಲ್ಲಿ ಬಿಡ್‌ದಾರರು ಪಾವತಿ ಮಾಡಿದ ಮೊಬಲಗನ್ನು ವಾಪಸ್ಸು ಮಾಡಲಾಗುವುದಿಲ್ಲ. 3. ಹರಾಜಿಗಿಟ್ಟ ಸ್ಥಿರ ಸೊತ್ತಿನ, ವಿವರಣೆ ಅಂದಾಜು ವಿಸ್ತೀರ್ಣದ ವಿಷಯದಲ್ಲಿ ಮಾಡಬಹುದಾದ ಯಾವುದಾದರೂ ತಪ್ಪುಗಳಿಗೆ ವಸತಿ ಮಹಾಮಂಡಲ/ಮಾರಾಟಾಧಿಕಾರಿ/ಸರ್ಕಾರದವರು ಜವಾಬ್ದಾರರಾಗುವುದಿಲ್ಲ. 4. ಸವಾಲುದಾರರು ಹರಾಜನ್ನು ಪ್ರಾರಂಭಿಸುವುದಕ್ಕೆ ಮುನ್ನವೇ ಕಟ್ಟಡ/ಸ್ವತ್ತನ್ನು ಪರಿಶೀಲಿಸಿ ಹರಾಜಿನಲ್ಲಿ ಭಾಗವಹಿಸುವುದು. 5. ಹರಾಜಿಗೆ ಮುನ್ನ ಸಂಘಕ್ಕೆ ಬರಬೇಕಾದ ಹಣ ಮರುಪಾವತಿಯಾದಲ್ಲಿ ಸದರಿಯವರ ಸ್ವತ್ತನ್ನು ಹರಾಜು ಮಾಡಲಾಗುವುದಿಲ್ಲ. 6. ಬಿಡ್ ಮೊಬಲಗು ವಸತಿ ಮಹಾಮಂಡಲಕ್ಕೆ ಬಾಕಿ ಇರುವ ಒಟ್ಟು ಸಾಲ ಮೊತ್ತಕ್ಕಿಂತ ಕಡಿಮೆಯಾದಲ್ಲಿ ಸದರಿ ಹರಾಜನ್ನು ಒಪ್ಪುವುದು ಅಥವಾ ತಿರಸ್ಕರಿಸುವುದು ಕೆ.ಸಿ.ಎಸ್. ನಿಯಮದ ಪ್ರಕಾರ ಮಾರಾಟಾಧಿಕಾರಿಯವರ ವಿವೇಚನೆಗೆ ಒಳಪಟ್ಟಿರುತ್ತದೆ. 7. ಹರಾಜಿನಲ್ಲಿ ಯಾರೂ ಭಾಗವಹಿಸದಿದ್ದಲ್ಲಿ ಅಂತಹ ಆಸ್ತಿಯನ್ನು ವಸತಿ ಮಹಾಮಂಡಲದ ಹೆಸರಿಗೆ ಉಳಿಸಿಕೊಳ್ಳಲಾಗುವುದು. ಹಾಗೂ ಖಾತೆ ಬದಲಾವಣೆ ಮಾಡಲಾಗುವುದು. 8. ಹರಾಜು ಮಾಡಲಾಗುವ ಆಸ್ತಿಯು ಹೇಗಿದೆಯೋ ಹಾಗೆ ಹರಾಜು ಮಾಡಲಾಗುವುದು. 9. ಒಂದು ವೇಳೆ ಸದರಿ ಸ್ವತ್ತಿನ ಬಗ್ಗೆ ನ್ಯಾಯಾಲಯದಿಂದ ವ್ಯಾಜ್ಯವಾದಲ್ಲಿ/ತಡೆಯಾಜ್ಞೆ ಏನಾದರೂ ಬಂದಲ್ಲಿ, ಬಿಡ್‌ದಾರರು ಪಾವತಿಸಿದ ಬಿಡ್‌ನ ಶೇಕಡ 15ರಷ್ಟು ಮೊತ್ತಕ್ಕೆ ಬಡ್ಡಿ ನೀಡಲಾಗುವುದಿಲ್ಲ ಹಾಗೂ ನ್ಯಾಯಾಲಯದ ತೀರ್ಪಿಗೆ ಸದರಿ ಹರಾಜು ಒಳಪಟ್ಟಿರುತ್ತದೆ.

**ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ : 080 - 26604481 (ಕಛೇರಿ). ಮಾರಾಟಾಧಿಕಾರಿ : 98807 32449**

# ಸೃಜನಶೀಲ ಕಲಾವಿದ ಚಂದ್ರಶೇಖರ ಸಂಗಾ







ಗಾಳಿಯಲ್ಲಿ ಕೈ ಆಡಿಸಿದಂತೆ ಬಿಳಿ ಹಾಳೆಯ ಮೇಲೆ ಇವರು ಕೈ ಆಡಿಸಿದರೆಂದರೆ, ಕ್ಷಣಾರ್ಧದಲ್ಲೊಂದು ಅಂದದ ಚಿತ್ರ ರೂಪುಗೊಳ್ಳುತ್ತದೆ.

ಕಲ್ಲು, ಮಣ್ಣು, ಉದುರಿ ಬಿದ್ದ ಮರದ ಎಲೆಗಳು ಹೀಗೆ ಅನುಪಯುಕ್ತ ವಸ್ತುಗಳಿಂದ ಸುಂದರ ಕಲಾಕೃತಿಯೊಂದನ್ನು ರೂಪಿಸುವ ಜಾದುಗಾರ, ಕಟ್ಟಡದ ಖಾಲಿ ಗೋಡೆಗಳಿಗೆ ಜೀವ ತುಂಬುವ ಸೃಜನಶೀಲ ಕಲಾವಿದ ಇವರು.

ಹೌದು, ಹೆಸರು ಚಂದ್ರಶೇಖರ ಎಸ್. ಸಂಗಾ. ದಾವಣಗೆರೆಯಲ್ಲಿನ ಹಲವಾರು ಕಟ್ಟಡಗಳು ಇವರ ಹೆಸರು ಹೇಳುತ್ತವೆ. ದಾವಣಗೆರೆ ನಗರದ ಸೌಂದರ್ಯಕ್ಕೆ ಇವರ ಕೊಡುಗೆ ಅಪಾರವೆಂದರೆ ತಪ್ಪಾಗದು.

ಸಾಂಸ್ಕೃತಿಕ ಕ್ಷೇತ್ರದಲ್ಲಿ ಲಲಿತ ಕಲೆಗಳಲ್ಲೊಂದುದಾದ ಚಿತ್ರ ಕಲೆ ತನ್ನದೇ ಆದ ಅಸ್ತಿತ್ವ ಉಳಿಸಿಕೊಂಡು ಬಂದಿದೆ. ಭಾರತೀಯ ಸಂಸ್ಕೃತಿಯ ಪರಂಪರೆಯ ಪ್ರತಿಬಿಂಬವೂ ಹೌದು ಈ ಚಿತ್ರಕಲೆ.

ಬೆಳೆಯುವ ಸಿರಿ ಮೊಳಕೆಯಲ್ಲಿ ಎಂಬಂತೆ ವಿದ್ಯಾರ್ಥಿ ದೆಸೆಯಲ್ಲಿಯೇ ಇಂತಹ ಕಲಾವಂತಿಕೆಯನ್ನು ಮೈಗೂಡಿಸಿಕೊಂಡಿದ್ದ ಚಂದ್ರಶೇಖರ ಸಂಗಾ, ವಿದ್ಯಾರ್ಥಿ ದೆಸೆಯಲ್ಲಿಯೇ ಚಿತ್ರರಚನೆ, ರಂಗೋಲಿ ಹಾಕುವುದರಲ್ಲಿ ಸಿದ್ಧ ಹಸ್ತರಾಗಿ ಹಲವಾರು ಬಹುಮಾನಗಳನ್ನು ಮುಡಿಗೇರಿಸಿಕೊಂಡಿದ್ದರು. ನಗರದ ಹಲವಾರು ಕಟ್ಟಡಗಳಲ್ಲಿ ಇವರ ಕೈಚಳಕದ ಉಬ್ಬು ಚಿತ್ರಗಳು ಗಮನ ಸೆಳೆಯುತ್ತಿವೆ.

ದಾವಣಗೆರೆ ಬಕ್ಕೇಶ್ವರ ಕಲ್ಯಾಣ ಮಂಟಪದಲ್ಲಿನ ಶ್ರೀ ಬಕ್ಕೇಶ್ವರ ಸ್ವಾಮೀಜಿ ಅವರ ಕಲಾಕೃತಿ, ದೇವರಾಜ ಅರಸು ಬಡಾವಣೆಯಲ್ಲಿನ ಶಿವ ಪಾರ್ವತಿ ಕಲ್ಯಾಣ ಮಂಟಪದಲ್ಲಿ 30x10 ಅಡಿ ಅಳತೆಯಲ್ಲಿನ ಗಿರಿಜಾ ಕಲ್ಯಾಣ ದೃಶ್ಯ ಮನ ಸೆಳೆಯುತ್ತದೆ. ಇನ್ನು ಜಿಲ್ಲಾ ನ್ಯಾಯಾಲಯ ಭವನದಲ್ಲಿನ ನ್ಯಾಯ ದೇವತೆಯ ಶಿಲ್ಪ, ಬಾಪೂಜಿ ಇಂಜಿನಿಯರಿಂಗ್ ಕಾಲೇಜಿನ ಗಾಂಧೀ ಪ್ರತಿಮೆ, ಬಾಪೂಜಿ ಬ್ಯಾಂಕ್ ಸಮುದಾಯ ಭವನದ ಮದುವೆ ದಿಬ್ಬಣ ದೃಶ್ಯದ ಉಬ್ಬು ಶಿಲ್ಪಗಳು ಕಣ್ಣಿಗೆ ಮುದ ನೀಡುತ್ತವೆ. ಸರ್ಕಾರಿ ಕಚೇರಿಗಳು, ಶಿಕ್ಷಣ ಸಂಸ್ಥೆಗಳ ಕಟ್ಟಡಗಳ ಮೇಲೆ ಲೋಗೋ ಕಲಾಕೃತಿಗಳ ರಚನೆಕಾರರು ಇವರು.

ಇತ್ತೀಚೆಗೆ ಸಂಸದ ಜಿ.ಎಂ. ಸಿದ್ದೇಶ್ವರ ಅವರ ಕುಟುಂಬದವರ ವಂಶ ವೃಕ್ಷದ ಉಬ್ಬು ಶಿಲ್ಪಗಳನ್ನು ರಚಿಸಿ ಕುಟುಂಬದವರ ಮೆಚ್ಚುಗೆಗೆ ಪಾತ್ರರಾಗಿದ್ದಾರೆ.


**ಸಾಧನೆಯ ಮೆಟ್ಟಿಲುಗಳು:**

ಚಂದ್ರಶೇಖರ ಎಸ್.ಸಂಗಾ ಅವರು ಜನಿಸಿದ್ದು 1965ರ ಜುಲೈ 20ರಂದು. ಡಿಪ್ಲೊಮಾ ಇನ್ ಫೈನ್ ಆರ್ಟ್ಸ್ (ಪೇಂಟಿಂಗ್) ನಲ್ಲಿ ಲಲಿತ ಕಲಾ ಮಹಾವಿದ್ಯಾಲಯದಲ್ಲಿ 1989ರಲ್ಲಿ 5ನೇ ರ್‍ಯಾಂಕ್ ಪಡೆದು, ಅದೇ ಕಾಲೇಜಿನಲ್ಲಿ ಅತಿಥಿ ಉಪನ್ಯಾಸಕರಾಗಿಯೂ ಸೇವೆ ಸಲ್ಲಿಸಿದರು. ನಂತರ ಉಪನ್ಯಾಸಕ ಹುದ್ದೆ ಬಿಟ್ಟು ಕಲೆಯನ್ನೇ ವೃತ್ತಿಯಾಗಿಸಿಕೊಂಡರು.

1992ರಲ್ಲಿ ದಾವಣಗೆರೆಯ ಕಲಾಕುಂಚ ಸಾಂಸ್ಕೃತಿಕ ಸಂಸ್ಥೆ ಏರ್ಪಡಿಸಿದ್ದ ಏಕ ವ್ಯಕ್ತಿ ಕಲಾ ಪ್ರದರ್ಶನ ನಡೆಸಿದ್ದರು. ನಂತರ 1993ರಲ್ಲಿ ಕಲಾ ಗುರು ಆರ್ಟ್ ಗ್ಯಾಲರಿಯಲ್ಲಿ, 2007ರಲ್ಲಿ ಬಿಲ್ಡ್ ಮ್ಯಾಟ್ ಹಾಗೂ 2008ರಲ್ಲಿ ಜಿಲ್ಲಾ ಶಿಶು ಕಲ್ಯಾಣ ಮಂಡಳಿ ರಜತ ಮಹೋತ್ಸವದಲ್ಲಿ ಏಕ ವ್ಯಕ್ತಿ ಚಿತ್ರ ಕಲಾ ಪ್ರದರ್ಶನ ನಡೆಸಿದ್ದಾರೆ. ಏಳು ಬಾರಿ ವಿವಿಧೆಡೆ ಸಮೂಹ ಕಲಾ ಪ್ರದರ್ಶನ ನಡೆಸಿರುವ ಇವರು 'ಲಯ ಕಲಾ ಮನೆ' ಗದಗ ಸಹಯೋಗದೊಂದಿಗೆ 60ಕ್ಕೂ ಹೆಚ್ಚು ಸಮೂಹ ಕಲಾ ಪ್ರದರ್ಶನ ನಡೆಸಿದ್ದಾರೆ. ಹಲವಾರು ಕಲಾ ಶಿಬಿರಗಳಲ್ಲೂ ಭಾಗವಹಿಸಿದ್ದಾರೆ.

1992ರಲ್ಲಿ ಮೈಸೂರು ದಸರಾ ಕಲಾ ಪ್ರದರ್ಶನದಲ್ಲಿ ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡಿರುವ ಇವರಿಗೆ, ದಾವಣಗೆರೆ ಚುಟುಕು ಸಾಹಿತ್ಯ ಪರಿಷತ್ ಜಿಲ್ಲಾ ಘಟಕದಿಂದ 2012ರಲ್ಲಿ ಕಲಾ ಕೇಸರಿ ಪ್ರಶಸ್ತಿ, ಜಿಲ್ಲಾಡಳಿತದಿಂದ 2013ರಲ್ಲಿ ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ, ಭಾರತೀಯ ಕಲಾ ಸಾಂಸ್ಕೃತಿಕ ಅಕಾಡೆಮೆಯಿಂದ 2016ರಲ್ಲಿ ಭಾರತ ಸೇವಾರತ್ನ ರಾಷ್ಟ್ರ ಪ್ರಶಸ್ತಿ ನೀಡಿ ಗೌರವಿಸಲಾಗಿದೆ.

**- ಕೆ.ಎನ್. ಮಲ್ಲಿಕಾರ್ಜುನ ಮೂರ್ತಿ**



# ಆರೋಗ್ಯದಾತ ಧನ್ವಂತರಿ ದೇವರು



ದಾವಣಗೆರೆ, ನ. 15 - ಆಶ್ವಯುಜ ಕೃಷ್ಣಪಕ್ಷ ತ್ರಯೋದಶಿಯಂದು ಧನತ್ರಯೋದಶಿ ಅಥವಾ ಧನ್ವಂತರಿ ಜಯಂತಿ ಬಹು ಹಿಂದಿನಿಂದಲೂ ಆಚರಿಸಿಕೊಂಡು ಬಂದಿರುವ ಆಚರಣೆಯಾಗಿದೆ. ಶ್ರೀಮನ್ನಾರಾಯಣನು ದೇವೋತ್ತಮರ ರಕ್ಷಣೆಗಾಗಿ ಆರೋಗ್ಯವನ್ನು ಕರುಣಿಸುವ ಸಲುವಾಗಿ ಸಮುದ್ರ ಮಂಥನದ ಸಂದರ್ಭದಲ್ಲಿ ಅವತರಿಸಿದ ರೂಪವೇ ಧನ್ವಂತರಿ ದೇವರು. ಈ ದಿನ ಧನ್ವಂತರಿಯ ಹುಟ್ಟು ಹಬ್ಬವು ಹೌದು ಎಂದು ಶ್ರೀ ವೇದಬ್ರಹ್ಮ ಗೋಪಾಲ ಆಚಾರ್ ಮಣ್ಣೂರು ತಿಳಿಸಿದರು.

ನಗರದ ದೇವರಾಜ ಅರಸು ಬಡಾವಣೆ 'ಸಿ' ಬ್ಲಾಕ್‌ನಲ್ಲಿರುವ ಆದರ್ಶಯೋಗ ಪ್ರತಿಷ್ಠಾನ, ಶ್ರೀ ಮಹಾಮ್ಮಾಯಿ ವಿಶ್ವಯೋಗ ಮಂದಿರ ಹಾಗೂ ಯೋಗ ಚಿಕಿತ್ಸಾ ಕೇಂದ್ರದಲ್ಲಿ ಧನ್ವಂತರಿ ಜಯಂತಿ ಪ್ರಯುಕ್ತ ಹಮ್ಮಿಕೊಳ್ಳಲಾಗಿದ್ದ ವಿಶೇಷ ಪೂಜೆ ಮತ್ತು ಸತ್ಸಂಗ ಕಾರ್ಯಕ್ರಮದಲ್ಲಿ ಅವರು ಉಪನ್ಯಾಸ ನೀಡಿದರು.

ಶ್ರೀಸೂಕ್ತದಲ್ಲಿ ಭೂಮಿ, ಜಲ, ವಾಯು, ಅಗ್ನಿ ಮತ್ತು ಸೂರ್ಯ ಇವುಗಳಿಗೆ ಧನವೆಂದೇ ಹೇಳಲಾಗಿದೆ. ಯಾವ ಧನಕ್ಕೆ ನಿಜವಾದ ಅರ್ಥವಿದೆಯೋ ಅವಳೇ ನಿಜವಾದ ಲಕ್ಷ್ಮಿಯಾಗಿದ್ದಾಳೆ. ಭಾರತೀಯ ವೈದ್ಯ ಪದ್ಧತಿಯಲ್ಲಿ ಆಯುರ್ವೇದ ಚಿಕಿತ್ಸಾ ಪದ್ಧತಿ ಇಂದಿಗೂ ಯಾವುದೇ ಅಡ್ಡಪರಿಣಾಮಗಳಿಲ್ಲದೇ ಆರೋಗ್ಯವನ್ನು ಕೊಡುವ ಪದ್ಧತಿಯಾಗಿದೆ.

ಹೀಗಾಗಿ ನೆಮ್ಮಲ್ಲರ ಆರೋಗ್ಯದಾತನಾದ ಧನ್ವಂತರಿ ದೇವನನ್ನು ಆಯುರ್ವೇದ ಮಹಾಶಾಸ್ತ್ರದಲ್ಲಿ ಇಂದಿಗೂ ಪೂಜಿಸಿಕೊಂಡು ಬಂದಿರುವ ಪದ್ಧತಿಯಾಗಿದೆ. ಈ ಮಹಾದಿನದಂದು ಯಾರು ಧನ್ವಂತರಿಯನ್ನು ಶ್ರದ್ಧಾ ಭಕ್ತಿಯಿಂದ ಪೂಜಿಸುತ್ತಾರೋ ಅವರಿಗೆ ಸದಾ ಆರೋಗ್ಯ, ಐಶ್ವರ್ಯ, ಸಮೃದ್ಧಿ, ಶಾಂತಿ, ಸುಃಖವನ್ನು ಧನ್ವಂತರಿ ದೇವರು ಕರುಣಿಸುವನು. ಇದು ಈ ದಿನದ ಮಹತ್ವವಾಗಿದೆ ಎಂದು ಸಮುದ್ರ ಮಂಥನದ ಕಾಲದಲ್ಲಿ ದೇವರಿಗೂ ಮತ್ತು ರಾಕ್ಷಸ ಗಣಕ್ಕೆ ನಡೆದ ಘಟನೆಯನ್ನು ಕಥಾ ರೂಪಕವಾಗಿ ಮನಮುಟ್ಟುವಂತೆ ಗೋಪಾಲ ಆಚಾರ್ ಮಣ್ಣೂರು ವಿವರಿಸಿದರು.

ಯೋಗಾಚಾರ್ಯ ರಾಘವೇಂದ್ರ ಗುರೂಜಿ ಅಗ್ನಿ ಹೋತ್ರ ಹೋಮವನ್ನು ಮಂತ್ರ ಘೋಷದೊಂದಿಗೆ ಹೇಳಿಕೊಟ್ಟರು. ಪೂಜಾ ಕಾರ್ಯಕ್ರಮವನ್ನು ಸಿರಿಗೆರೆ ಕೆ.ಪಿ.ಟಿ.ಸಿ.ಎಲ್.ನ ಸಹಾಯಕ ಅಭಿಯಂತರ ಚೇತನ್ ಬಿ. ಮತ್ತು ಶ್ರೀಮತಿ ಶ್ವೇತಾ ಸಿ. ಒಡೆಯರ್ ಅವರು ನೆರವೇರಿಸಿದರು.

ಶ್ರೀಮತಿ ಗೌರಮ್ಮ ರಂಗೋಲಿ ಸೇವೆ, ಹಣಕಾಸು, ವ್ಯವಹಾರ ಸಲಹೆಗಾರ ಹೆಚ್. ಮಂಜುನಾಥ್ ಹೂವಿನ ಅಲಂಕಾರ ಸೇವೆ, ನಿವೃತ್ತ ತಹಶೀಲ್ದಾರ್ ವಿಶ್ವನಾಥಯ್ಯ ಪ್ರಸಾದ ಸೇವೆ ಅರ್ಪಿಸಿದರು. ಮುಖೇಶ್ ದೇವ್, ಪೃಥ್ವಿದೇವ್, ಎಂ.ಎಂ. ಪ್ರಶಾಂತ್ ಕಾರ್ಯಕ್ರಮದ ಯಶಸ್ಸಿಗೆ ಸಹಕರಿಸಿದರು.

ಸಗಟು ಔಷಧಿ ವ್ಯಾಪಾರಿ ಸುನೀಲ್‌ಕುಮಾರ್, ಸಂದೀಪ್ ವಡೋನಿ, ಭರತ್ ವಡೋನಿ, ಮೀಸಲು ಆರಕ್ಷಕ ಇಲಾಖೆಯ ಚಂದ್ರ, ಮಹಂತೇಶ್ ಇನ್ನಿತರರು ಭಾಗವಹಿಸಿದ್ದರು.

# ವಿಜಯೇಂದ್ರಗೆ ಅಧ್ಯಕ್ಷ ಸ್ಥಾನ; ಪಕ್ಷದ ಕಾರ್ಯಕರ್ತರಿಗೆ ಆನೆ ಬಲ



## ಹರಿಹರ : ಸಂಭ್ರಮಾಚರಣೆಯಲ್ಲಿ ಶಾಸಕ ಬಿ.ಪಿ.ಹರೀಶ್

ಹರಿಹರ, ನ.15- ಬಿಜೆಪಿ ನೂತನ ರಾಜ್ಯಾಧ್ಯಕ್ಷರಾಗಿ ಆಯ್ಕೆಯಾಗಿರುವ ಬಿ.ವೈ.ವಿಜಯೇಂದ್ರ ಅವರಿಂದ ಪಕ್ಷದ ಕಾರ್ಯಕರ್ತರಲ್ಲಿ ಆನೆಯ ಬಲ ಮತ್ತು ಹೊಸ ಚೈತನ್ಯ ತುಂಬಿದೆ. ಅವರ ಸಾರಥ್ಯದಲ್ಲಿ ಪಕ್ಷದ ಸಂಘಟನಾ ಶಕ್ತಿ ಇಮ್ಮಡಿಗೊಳ್ಳಲಿದೆ ಎಂಬ ವಿಶ್ವಾಸವನ್ನು ಶಾಸಕ ಬಿ.ಪಿ. ಹರೀಶ್ ವ್ಯಕ್ತಪಡಿಸಿದರು.

ನಗರದ ಬಿಜೆಪಿ ಕಛೇರಿ ಮುಂಭಾಗದಲ್ಲಿ ಗ್ರಾಮಾಂತರ ಮಂಡಲ ಮತ್ತು ನಗರ ಘಟಕದಿಂದ ಹಮ್ಮಿಕೊಳ್ಳಲಾಗಿದ್ದ ಸಂಭ್ರಮಾಚರಣೆಯಲ್ಲಿ ಪಾಲ್ಗೊಂಡು ಮಾತನಾಡಿ, ಪಕ್ಷವನ್ನು ಸಮರ್ಥವಾಗಿ ಮುನ್ನಡೆಸುವ, ಸಂಘಟಿಸುವ ಶಕ್ತಿ ಅವರಲ್ಲಿದ್ದು, ಅದನ್ನು ಅವರೀಗಾಗಲೇ ಸಾಬೀತುಪಡಿಸಿದ್ದಾರೆ. ಅದನ್ನು ಮನಗಂಡ ಪಕ್ಷದ ಹೈಕಮಾಂಡ್ ಅವರಿಗೆ ರಾಜ್ಯಾಧ್ಯಕ್ಷ ಸ್ಥಾನ ನೀಡಿರುವುದು ನಾಡಿನ ಎಲ್ಲ ವರ್ಗದವರಲ್ಲೂ ಹರ್ಷ ಮೂಡಿಸಿದೆ ಎಂದರು.

ಮುಂಬರುವ ಲೋಕಸಭೆ, ತಾಪಂ, ಜಿಪಂ ಚುನಾವಣೆಯಲ್ಲಿ ಅವರ ನೇತೃತ್ವದಲ್ಲಿ ಪಕ್ಷ ಅಭೂತಪೂರ್ವ ಗೆಲುವು ಸಾಧಿಸಲಿದೆ. ವಿಜಯೇಂದ್ರ ಅವರ ನೇತೃತ್ವದಲ್ಲಿ ಪಕ್ಷ ಸಂಘಟನೆಗೆ ಮುಂದಾಗೋಣ. ಆ ಮೂಲಕ ಪ್ರಧಾನಿ ನರೇಂದ್ರ ಮೋದಿ ಅವರ ಕೈ ಬಲಪಡಿಸೋಣ ಎಂದು ಹರೀಶ್ ಹೇಳಿದರು.

ಈ ವೇಳೆ ಗ್ರಾಮಾಂತರ ಘಟಕದ ಅಧ್ಯಕ್ಷ ಹಿಂಡಸಘಟ್ಟೆ ಲಿಂಗರಾಜ್ ಮಾತನಾಡಿ, ಬಿಜೆಪಿಯನ್ನು ಮತ್ತಷ್ಟು ಗಟ್ಟಿಗೊಳಿಸುವ ನಾಯಕತ್ವದ ಗುಣ ವಿಜಯೇಂದ್ರ ಅವರಲ್ಲಿದ್ದು, ಪಕ್ಷದ ಕಾರ್ಯಕರ್ತರಲ್ಲಿ ಹೊಸ ಹುಮ್ಮಸ್ಸು ಮೂಡಿದೆ. ಕಾರ್ಯಕರ್ತರು ಸಣ್ಣ-ಪುಟ್ಟ ಮನಸ್ತಾಪಗಳನ್ನು ಬದಿಗೊತ್ತಿ, ವಿಜಯೇಂದ್ರ ಅವರ ಸಾರಥ್ಯದಲ್ಲಿ ಲೋಕಸಭೆ ಚುನಾವಣೆಯಲ್ಲಿ ಮತ್ತೆ ರಾಜ್ಯದ 28 ಕ್ಷೇತ್ರಗಳನ್ನು ಗೆಲ್ಲುವ ಮೂಲಕ ದೇಶದ ಪ್ರಗತಿಗಾಗಿ ಹಗಲಿರುಳು ಶ್ರಮಿಸುವ ಹೆಮ್ಮೆಯ ಪ್ರಧಾನಿ ನರೇಂದ್ರ ಮೋದೀಜಿ ಕೈ ಬಲಪಡಿಸೋಣ ಎಂದರು.

ಈ ವೇಳೆ ನಗರ ಘಟಕ ಅಧ್ಯಕ್ಷ ಅಜಿತ್ ಸಾವಂತ್, ಮಾಜಿ ಅಧ್ಯಕ್ಷ ರಾಜು ರೋಖಡೆ, ಪರಶುರಾಮ್ ಕಾಟ್ವೆ, ದೂಡ ಮಾಜಿ ಸದಸ್ಯ ಬಾತಿ ಚಂದ್ರಶೇಖರ್, ಪ್ರಧಾನ ಕಾರ್ಯದರ್ಶಿ ತುಳಜಪ್ಪ ಭೂತೆ, ಮಂಜಾನಾಯ್ಕ ಹೆಚ್.ವೀರೇಶ್ ಆದಾಪುರ, ಮುಖಂಡರಾದ ಸುನೀಲ್ ಕುಮಾರ್, ರಾಚಪ್ಪ, ಸಂತೋಷ್ ಗುಡಿಮನಿ, ವಿನಾಯಕ ಆರಾಧ್ಯಮಠ, ಮಂಜು ಅಗಡಿ, ಸಂತೋಷ್ ಪೋಟೋ, ಪ್ರಶಾಂತ್, ಆನಂದ್, ರಾಜು ಕಿರೋಜಿ, ಅದ್ವೈತ ಶಾಸ್ತ್ರಿ, ಓಂ ನಾಗರಾಜ್, ಸುರೇಶ್ ತೆರದಹಳ್ಳಿ, ಪುಟ್ಟ ಶಾಂತನ್ ಇತರರಿದ್ದರು.

# ಅಕ್ಟೋಬರ್‌ನಲ್ಲಿ ರಫ್ತು ಶೇ.6.21ರಷ್ಟು ಹೆಚ್ಚಳ

ನವದೆಹಲಿ, ನ. 15 – ಕಳೆದ ಅಕ್ಟೋಬರ್‌ನಲ್ಲಿ ದೇಶದ ರಫ್ತು ಪ್ರಮಾಣ ಶೇ. 6.21ರಷ್ಟು ಹೆಚ್ಚಾಗಿ 33.57 ಶತಕೋಟಿ ಡಾಲರ್‌ಗಳಿಗೆ ತಲುಪಿದೆ. ಇದೇ ತಿಂಗಳು ವ್ಯಾಪಾರಿ ಕೊರತೆ 31.46 ಶತಕೋಟಿ ಡಾಲರ್‌ಗಳಿಗೆ ತಲುಪಿದೆ. ಈ ತಿಂಗಳಲ್ಲಿ ಆಮದು 65.03 ಶತಕೋಟಿ ಡಾಲರ್‌ಗಳಿಗೆ ತಲುಪಿದೆ. 2022 ರಲ್ಲಿ ಆಮದು ಪ್ರಮಾಣ 57.91 ಶತಕೋಟಿ ಡಾಲರ್ ಆಗಿತ್ತು.

# ಉತ್ತರಾಖಂಡದಲ್ಲಿ ಸುರಂಗದಲ್ಲಿ ಸಿಲುಕಿರುವ ಕಾರ್ಮಿಕರು

## ನಾಲ್ಕನೇ ದಿನವೂ ಸಾಧ್ಯವಾಗದ ರಕ್ಷಣೆ

ಉತ್ತರಕಾಶಿ, ನ. 15 – ಉತ್ತರಾಖಂಡದಲ್ಲಿ ನಿರ್ಮಾಣ ಹಂತದಲ್ಲಿದ್ದ ಸುರಂಗ ಮಾರ್ಗ ಕುಸಿದು, ಅವಶೇಷಗಳಡಿ ಸಿಲುಕಿರುವವರ ರಕ್ಷಣಾ ಕಾರ್ಯ ನಾಲ್ಕನೇ ದಿನವೂ ಮುಂದುವರೆದಿದೆ.

ಸುರಂಗದಲ್ಲಿ ಸಿಲುಕಿರುವವರನ್ನು ರಕ್ಷಿಸಲು ವಾಯುಪಡೆಯ ಸಾರಿಗೆ ವಿಮಾನಗಳಲ್ಲಿ ಉಪಕರಣಗಳನ್ನು ರವಾನಿಸಲಾಗುತ್ತಿದೆ.

ಚಾರ್ ಧಾಮ್ ಮಾರ್ಗದಲ್ಲಿರುವ ಸುರಂಗದಲ್ಲಿ ಕಾರ್ಮಿಕರು ಸಿಲುಕಿದ್ದಾರೆ. ಇವರ ರಕ್ಷಣೆಗಾಗಿ 'ಅಮೆರಿಕನ್ ಆಗರ್' ಯಂತ್ರವನ್ನು ತರಿಸಲಾಗಿದೆ. ಕಾರ್ಮಿಕರು ಸುರಕ್ಷಿತವಾಗಿದ್ದಾರಾದರೂ, ರಕ್ಷಣಾ ಕಾರ್ಯ ವಿಳಂಬವಾಗುತ್ತಿದೆ.

ಕಾರ್ಮಿಕರು ಸುರಂಗ ಮಾರ್ಗದ ಬಳಿ ಬಂದು, ರಕ್ಷಣೆ ವಿಳಂಬವಾಗಿರುವುದರ ವಿರುದ್ಧ ಘೋಷಣೆಗಳನ್ನೂ ಕೂಗಿದ್ದಾರೆ. ಬ್ರಹ್ಮಖಲ್ - ಯಮುನೋತ್ರಿ ರಾಷ್ಟ್ರೀಯ ಹೆದ್ದಾರಿ ಮಾರ್ಗದಲ್ಲಿ ಸುರಂಗ ನಿರ್ಮಿಸಲಾಗುತ್ತಿತ್ತು.

ಕಳೆದ ಮೂರು ದಿನಗಳಿಂದ ನಡೆಸಲಾಗುತ್ತಿದ್ದ ರಕ್ಷಣಾ ಕಾರ್ಯಾಚರಣೆ ಫಲ ನೀಡಿಲ್ಲ. ಈಗ 'ಅಮೆರಿಕನ್ ಆಗರ್' ಯಂತ್ರದ ಮೂಲಕ ಅವಶೇಷಗಳಲ್ಲಿ 800-900 ಮಿ.ಮೀ. ಗಾತ್ರದ ರಂಧ್ರ ಕೊರೆಯಲು ಉದ್ದೇಶಿಸಲಾಗಿದೆ. ನಂತರ ಕಾರ್ಮಿಕರು ಈ ರಂಧ್ರದ ಮೂಲಕ ಹೊರ ಬರಲು ಸಾಧ್ಯವಾಗಲಿದೆ.

ಮೊದಲು ರಂಧ್ರ ಕೊರೆಯಲು ಬಳಸಲಾಗಿದ್ದ ಯಂತ್ರಗಳ ಮೇಲೆ ಅವಶೇಷಗಳು ಬಿದ್ದಿದ್ದವು. ಇದರಿಂದ ಯಂತ್ರಗಳು ಹಾಳಾಗಿದ್ದವು. ನಂತರ ವಾಯುಪಡೆ ಸಿ-130ಜೆ ಹರ್ಕ್ಯುಲಸ್ ವಿಮಾನದ ಮೂಲಕ ಹೊಸ ಯಂತ್ರಗಳನ್ನು ತರಿಸಲಾಗುತ್ತಿದೆ.

ಚಾರ್ ಧಾಮ್ ಮಾರ್ಗದಲ್ಲಿ ಎಲ್ಲ ಋತುಗಳಲ್ಲೂ ಬಳಸಬಹುದಾದ ಹೆದ್ದಾರಿಯನ್ನು ನಿರ್ಮಿಸಲಾಗುತ್ತಿದೆ. ಹೆದ್ದಾರಿಯಲ್ಲಿ 270 ಮೀಟರ್ ಉದ್ದದ ಸುರಂಗ ಮಾರ್ಗದ ಪೈಕಿ 30 ಮೀಟರ್ ಭಾಗ ಭಾನುವಾರ ಕುಸಿದಿತ್ತು.

ಸುರಂಗದಲ್ಲಿ ಸಿಲುಕಿರುವ ಕಾರ್ಮಿಕರು ಸರಕ್ಷಿತವಾಗಿದ್ದಾರೆ. ಅವರಿಗೆ ಆಕ್ಸಿಜನ್, ವಿದ್ಯುತ್, ಔಷಧಿ, ಆಹಾರ ಹಾಗೂ ನೀರನ್ನು ಕೊಳವೆಗಳ ಮೂಲಕ ಪೂರೈಸಲಾಗುತ್ತಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

# 'ವಿದ್ಯುತ್ ಕದ್ದ' ಆರೋಪ

**(1ನೇ ಪುಟದಿಂದ)** ಜಾಲತಾಣದಲ್ಲಿ ಕಾಂಗ್ರೆಸ್ ವಿಡಿಯೋ ಒಂದನ್ನು ಪ್ರಕಟಿಸಿತ್ತು. ಇದಕ್ಕೆ ಪ್ರತಿಕ್ರಿಯೆ ನೀಡಿದ್ದ ಕುಮಾರಸ್ವಾಮಿ, ವಿದ್ಯುತ್ ಅಲಂಕಾರಕ್ಕಾಗಿ ಖಾಸಗಿ ವ್ಯಕ್ತಿಗೆ ಗುತ್ತಿಗೆ ನೀಡಲಾಗಿತ್ತು. ಹತ್ತಿರದ ವಿದ್ಯುತ್ ಕಂಬದಿಂದ ಆತ ಸಂಪರ್ಕ ಪಡೆದಿದ್ದಾನೆ. ಅಕ್ರಮ ವಿದ್ಯುತ್ ಸಂಪರ್ಕ ಆತನ ತಪ್ಪು ಎಂದಿದ್ದಾರೆ. ನನಗೆ ವಿಷಯ ತಿಳಿದ ತಕ್ಷಣ ಕಂಬದ ಸಂಪರ್ಕ ತಪ್ಪಿಸಿ ಮನೆಯ ಮೀಟರ್ ಬೋರ್ಡ್‌ಗೆ ಅಳವಡಿಸಿದ್ದೇನೆ ಎಂದಿದ್ದಾರೆ.

ಈ ಬಗ್ಗೆ ಜಾಲತಾಣಗಳಲ್ಲಿ ಹೇಳಿಕೆ ನೀಡಿರುವ ಕಾಂಗ್ರೆಸ್, ಮಾಜಿ ಮುಖ್ಯಮಂತ್ರಿಯೊಬ್ಬರು ವಿದ್ಯುತ್ ಕದಿಯುವ ಬಡತನಕ್ಕೆ ಸಿಲುಕಿರುವುದು ದುರಂತ ಎಂದು ಲೇವಡಿ ಮಾಡಿದೆ.

ಈ ಬಗ್ಗೆ ಹೇಳಿಕೆ ನೀಡಿರುವ ಕುಮಾರಸ್ವಾಮಿ, ಈ ಅಚಾತುರ್ಯಕ್ಕೆ ನನ್ನ ವಿಷಾದವಿದೆ. ಬೆಸ್ಕಾಂ ಅಧಿಕಾರಿಗಳು ಬಂದು ಪರೀಕ್ಷೆ ಮಾಡಿ ನೋಟಿಸ್ ನೀಡಲಿ. ದಂಡ ಕಟ್ಟುತ್ತೇನೆ. ಕಾಂಗ್ರೆಸ್ ಪಕ್ಷವು ವಿಷಯವನ್ನು ದೊಡ್ಡದು ಮಾಡಿ ಪ್ರಚಾರ ಗಿಟ್ಟಿಸುವ ಕೆಲಸ ಮಾಡುತ್ತಿದೆ ಎಂದಿದ್ದಾರೆ.

ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿಕೆ ನೀಡಿದ್ದು, ಬೆಸ್ಕಾಂ ಈ ಬಗ್ಗೆ ಕ್ರಮ ತೆಗೆದುಕೊಳ್ಳಲಿದೆ ಎಂದಿದ್ದಾರೆ. ಈ ನಡುವೆ, ಕುಮಾರಸ್ವಾಮಿ ಅವರು ವಿದ್ಯುತ್ ಕಳ್ಳ ಎಂದು ಲೇವಡಿ ಮಾಡುವ ಪೋಸ್ಟರ್‌ಗಳನ್ನು ಅವರ ನಿವಾಸದ ಬಳಿಯ ಗೋಡೆಗಳ ಮೇಲೆ ಅಂಟಿಸಲಾಗಿದೆ. ಪೊಲೀಸರು ಸ್ಥಳಕ್ಕೆ ತೆರಳಿ ಪೋಸ್ಟರ್‌ಗಳನ್ನು ತೆರವುಗೊಳಿಸಿದ್ದಾರೆ.


**ಕರ್ನಾಟಕ ಗೃಹ ಮಂಡಳಿಯಲ್ಲಿ ಸೈಟುಗಳು ಮಾರಾಟಕ್ಕಿವೆ**
50x80 North, 40x60 North, 120 ಅಡಿ ರೋಡಿಗಿದೆ, 40x60 East, 40x60 South, 40x60 West, 50x80 East,
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಸೈಟ್ ಮಾರಾಟಕ್ಕೆ (37 ಲಕ್ಷಕ್ಕೆ)**
ಕಿರಣ್ ಭೂಸನೂರ್ (ಏಜೆಂಟ್)
ಮೊ. 97315-63409
30x40 ಉತ್ತರ
ಕರ್ನಾಟಕ ಗೃಹ ಮಂಡಳಿಯಲ್ಲಿ (ಮನೆ ಕಟ್ಟಲು ತುಂಬಾ ಚೆನ್ನಾಗಿ ಇದೆ)
20x30 ಪೂರ್ವ (15 ಲಕ್ಷಕ್ಕೆ)

**ಡಾಲರ್ಸ್ ಕಾಲೋನಿಯಲ್ಲಿ ಸೈಟುಗಳು ಮಾರಾಟಕ್ಕಿವೆ**
70x62 Corner, 30x62 Corner, 40x62 West, 40x40 South, 30x50 East, 30x52 North,
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಸೈಟುಗಳು ಮಾರಾಟಕ್ಕಿವೆ**
ಹೊಸ ಕುಂದುವಾಡ ಹತ್ತಿರ ಸುಶಿ ಹೋಟೆಲ್ ಹಿಂಭಾಗ, ಹೊಸ ಬಡಾವಣೆಯಲ್ಲಿ 30x50 ಪಶ್ಚಿಮ-ದಕ್ಷಿಣ ಕಾರ್ನರ್, 30x50 ಪಶ್ಚಿಮ, 30x50 ಉತ್ತರ.
ಮಧ್ಯವರ್ತಿಗಳಿಗೆ ಅವಕಾಶವಿಲ್ಲ
97436 61236, 99010 41155

**ಸೈಟುಗಳು ಮಾರಾಟಕ್ಕಿವೆ**
ಶಿವ-ಪಾರ್ವತಿ ಬಡಾವಣೆಯಲ್ಲಿ 35x60 ಪೂರ್ವ-ಉತ್ತರ ಕಾರ್ನರ್, 30x50 ಪೂರ್ವ, 30x47 ಪೂರ್ವ, ವಿನಾಯಕ ಬಡಾವಣೆಯಲ್ಲಿ LIC ಕಾಲೋನಿಯಲ್ಲಿ 40x60 ಪೂರ್ವ, 30x50 ಪೂರ್ವ, 50x40 ಪಶ್ಚಿಮ.
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

**ಬೇಕಾಗಿದ್ದಾರೆ**
ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಲು ಪುರುಷ ಮತ್ತು ಮಹಿಳಾ ಅಭ್ಯರ್ಥಿಗಳು ಬೇಕಾಗಿದ್ದಾರೆ. ಸಂಬಳದೊಂದಿಗೆ, ಊಟ-ವಸತಿ ಸೌಲಭ್ಯವುಂಟು. ಸಂಪರ್ಕಿಸಿ :
98442-94446

**WANTED**
X-Ray Techninician (Part Time)
CONTACT :
SHILPA DIAGNOSTICS PVT LTD.,
MCC B BLOCK, NEAR SWIMMING POOL, DAVANGERE.
98440 65638

**ಸೈಟುಗಳು ಮಾರಾಟಕ್ಕಿವೆ**
ವಿನಾಯಕ ಬಡಾವಣೆಯಲ್ಲಿ, LIC ಕಾಲೋನಿಯಲ್ಲಿ, ಆಂಜನೇಯ ಬಡಾವಣೆಯಲ್ಲಿ, 50x45 South, 40x50 South, 55x40 West, 30x50 East, 30x40 South.
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಕಾರು ಮಾರಾಟಕ್ಕಿವೆ**
Maruthi Alto 800, 2013
Wagon-R VXI, 2017
Swift ZDI, 2014
Hyundai 120 ASTA,2019
ದೈವಿಕ್ ಐನಳ್ಳಿ, 99456 43223

**ಬೇಕಾಗಿದ್ದಾರೆ**
ದೇವರಾಜ ಅರಸು ಬಡಾವಣೆ 'ಸಿ' ಬ್ಲಾಕ್, 6ನೇ ಕ್ರಾಸ್, ಕೊಂಡಜ್ಜಿ ರಸ್ತೆಯಲ್ಲಿರುವ ನಂದಗೋಕುಲ ಆಂಗ್ಲ ಮಾಧ್ಯಮ ಶಾಲೆಗೆ ಜವಾನರು (ಮಹಿಳೆ) ಬೇಕಾಗಿದ್ದಾರೆ. ಪಿ.ಎಫ್. ಮತ್ತು ESI ಸೌಲಭ್ಯವಿದೆ. ಆಯ್ಕೆಯಾದ ಅಭ್ಯರ್ಥಿಯ ಒಂದು ಮಗುವಿಗೆ ವಿದ್ಯಾಭ್ಯಾಸ ಸೌಲಭ್ಯವಿರುತ್ತದೆ.
99640 17729

**ಸೈಟು ಮಾರಾಟಕ್ಕಿವೆ**
ಕೆ.ಬಿ. ಬಡಾವಣೆಯಲ್ಲಿ ನಾಯ್ಡು ಹೋಟೆಲ್ ಹತ್ತಿರ
19x85 South, Rate - 6000/-
ದಕ್ಷಿತ್ ಐನಳ್ಳಿ ಏಜೆಂಟ್
77955 06795

**ಬೇಕಾಗಿದ್ದಾರೆ**
ಸೆಲ್ಫ್ ಸರ್ವೀಸ್ ಹೋಟೆಲ್ ನಲ್ಲಿ ಚಾಟ್ಸ್ ಮತ್ತು ಸ್ನ್ಯಾಕ್ಸ್ ಸಪ್ಲೈ ಮಾಡಲು ಯುವಕರು ಬೇಕಾಗಿದ್ದಾರೆ.
ಕೆಲಸದ ಸಮಯ:4.00-10pm
95388 96927

**ಕೆಲಸಕ್ಕೆ ಬೇಕಾಗಿದ್ದಾರೆ**
Tally ಅನುಭವ ಇರುವ ಹುಡುಗಿಯರು ಮತ್ತು ಆಫೀಸ್ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ
ಕಿಸಾನ್ ವರ್ಲ್ಡ್
ವಾಣಿ ರೈಸ್ ಮಿಲ್ ಎದರು, ಹದಡಿ ರೋಡ್, ದಾವಣಗೆರೆ.
97433 83672

**ಜಮೀನು ಮಾರಾಟಕ್ಕಿದೆ**
ದಾವಣಗೆರೆ ಸಮೀಪ ರಾಷ್ಟ್ರೀಯ ಹೆದ್ದಾರಿ ಹತ್ತಿರ ಕೊಗ್ಗನೂರು ಬಳಿ 30 ಗುಂಟೆ ಜಮೀನು ಮಾರಾಟಕ್ಕಿದೆ. ಸಂಪರ್ಕಿಸಿ :
99000 12266

**ಶಿಕ್ಷಕರು ಬೇಕಾಗಿದ್ದಾರೆ**
ದಾವಣಗೆರೆಯ ಹಳೆಯ ಭಾಗದಲ್ಲಿರುವ ಪ್ರತಿಷ್ಠಿತ ಶಾಲೆಗೆ ಅರ್ಹತೆ ಇರುವ ಹಾಗೂ ನುರಿತ ಶಿಕ್ಷಕರು ಬೇಕಾಗಿದ್ದಾರೆ.
1) ಪ್ರಾಥಮಿಕ ಶಾಲಾ ಶಿಕ್ಷಕರು (ಕನ್ನಡ) - ಬಿ.ಎ,ಡಿ.ಇಡಿ
2) ಕ್ರಾಫ್ಟ್ ಶಿಕ್ಷಕರು - ಬಿಎಫ್‌ಎ/ಎಂಎಫ್‌ಎ
3)ದೈಹಿಕ ಶಿಕ್ಷಕರು - ಬಿಪಿ.ಇಡಿ. ಆಸಕ್ತರು ಸಂಪರ್ಕಿಸಿ :
98440 22959,99640 23607
99021 50005,08192 277799

**ಹುಡುಗರು ಬೇಕಾಗಿದ್ದಾರೆ**
ಜೆರಾಕ್ಸ್ ಅಂಗಡಿಯಲ್ಲಿ ಕೆಲಸ ಮಾಡಲು ನಾಲ್ವರು ಹುಡುಗರು ಬೇಕಾಗಿದ್ದಾರೆ. ರಾಂ & ಕೋ ಸರ್ಕಲ್ ಹತ್ತಿರ, ಕಂಪ್ಯೂಟರ್ ಜ್ಞಾನವುಳ್ಳವರಿಗೆ ಆದ್ಯತೆ.
70221 58935

**ಬೇಕಾಗಿದ್ದಾರೆ**
B.Sc Chemistry ಆಗಿರುವ ಹುಡುಗರು ಗೋಲ್ಡ್ ಶಾಪ್ ನಲ್ಲಿ ಕೆಲಸ ಮಾಡಲು ಬೇಕಾಗಿದ್ದಾರೆ.
063635 82545

**ಮನೆ ಮಾರಾಟಕ್ಕಿದೆ**
ದಾವಣಗೆರೆ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುವ ಶ್ರೀ ಸಿದ್ದವೀರಪ್ಪ ಬಡಾವಣೆ, 8ನೇ ಕ್ರಾಸ್‌ನಲ್ಲಿರುವ # 2001ರಲ್ಲಿ 30x46 ಅಳತೆಯಲ್ಲಿರುವ ಮನೆಗಳು ಮಾರಾಟಕ್ಕಿರುತ್ತವೆ. ಸಂಪರ್ಕಿಸಿ :
ಶ್ರೀ ಜಿ.ಹೆಚ್. ಮಂಜುನಾಥ್
88849 62111

**ಬೇಕಾಗಿದ್ದಾರೆ**
ಕೆಲಸಕ್ಕೆ ಸಪ್ಲೈಯರ್ ಕ್ಲೀನರ್ ಬೇಕಾಗಿದ್ದಾರೆ.
9986117995

**ಬೇಕಾಗಿದ್ದಾರೆ**
ಬಿಜೆಪಿ ಆಫೀಸ್‌ಗೆ ಉತ್ತಮವಾದ ಕಂಪ್ಯೂಟರ್ ಆಪರೇಟರ್, ಡಿಸೈನರ್ ಎಡಿಟಿಂಗ್, ಫೋಟೋಗ್ರಾಫ್ ತಕ್ಷಣ ಬೇಕಾಗಿದ್ದಾರೆ. ಪುರುಷರು/ಮಹಿಳೆಯರು.
63606 51617

**Career Opportunity**
Exclusively for retired, House wife and Senior Citizen Part time/full time Flexible Timing. No. investment. Age above 30 fixed salary. Huge incentives, PF, ESI, Recognistions and Reward.
77950 55805

**ಖಾಲಿ ನಿವೇಶನ ಬಾಡಿಗೆಗೆ**
ತರಳಬಾಳು ಬಡಾವಣೆ ವಿದ್ಯಾನಗರ, 2ನೇ ಬಸ್ ನಿಲ್ದಾಣದಿಂದ ವಾಣಿ ರೈಸ್‌ಮಿಲ್‌ಗೆ ಸಂಪರ್ಕ ಕಲ್ಪಿಸುವ 8ನೇ ಕ್ರಾಸ್ ರಸ್ತೆಯಲ್ಲಿ 60x90 ಅಳತೆಯ ಕಾರ್ನರ್ ನಿವೇಶನ (ಮಾಗನೂರು ಬಸಪ್ಪ ಶಾಲೆಯ ತಿರುವಿಗೆ ಹೊಂದಿಕೊಂಡಿರುವ ಪಾರ್ಕ್ ಎದುರು) ರೆಸ್ಟೋರೆಂಟ್, ಗೋಡೌನ್ ಅಥವಾ ಇತರೆ ವಹಿವಾಟಿಗೆ ನೆಲ ಬಾಡಿಗೆಗೆ ಲಭ್ಯವಿದೆ. ದಲ್ಲಾಳಿಗಳಿಗೆ ಅವಕಾಶವಿಲ್ಲ.
94482 44707

**ಬೇಕಾಗಿದ್ದಾರೆ**
ನಗರದ ಪ್ರತಿಷ್ಠಿತ ಕೋ-ಆಪ್ ಸೊಸೈಟಿಗೆ ಮಹಿಳಾ ಸಿಬ್ಬಂದಿ ಬೇಕಾಗಿದ್ದಾರೆ. ಮ್ಯಾನೇಜರ್ -1- BA, B.Com, ಅಕೌಂಟೆಂಟ್ - 1-PUC, ಸಹಾಯಕರು-2- SSLC, ಅಟೆಂಡರ್-1-9th.
ಸಂಪರ್ಕಿಸಿ : ರಾಂ ಅಂಡ್ ಕೋ ಸರ್ಕಲ್.
99020 06719

**ಬೇಕಾಗಿದ್ದಾರೆ**
ಅಂಗಡಿಯಲ್ಲಿ ಕೆಲಸಕ್ಕೆ ಹುಡುಗರು, ಹುಡುಗಿಯರು, ಟೈಲರಿಂಗ್‌ಗೆ ಮಹಿಳಾ ಸಹಾಯಕರು ಪಾರ್ಟ್ ಟೈಂ ಕೆಲಸಕ್ಕೆ ಬೇಕಾಗಿದ್ದಾರೆ.
88164 38237

**ಬೇಕಾಗಿದ್ದಾರೆ**
ಲಾಡ್ಜ್‌ನಲ್ಲಿ ಹಗಲು ಪಾಳೆಯಕ್ಕೆ ಸೂಪರ್‌ವೈಸರ್ ಮತ್ತು ರೂಂ ಬಾಯ್ ಕೆಲಸಕ್ಕೆ ಬೇಕಾಗಿದ್ದಾರೆ. ಸಂಪರ್ಕಿಸಿ :
63639-54459

**ಬೆಂಗಳೂರಿನಲ್ಲಿ ಹೌಸ್‌ಕೀಪಿಂಗ್ ಕೆಲಸಕ್ಕೆ ಬೇಕಾಗಿದ್ದಾರೆ**
ಬೆಂಗಳೂರಿನಲ್ಲಿ ಹೌಸ್ ಕೀಪಿಂಗ್ ನೆಲ, ಪಾತ್ರೆ, ಬಟ್ಟೆ ಕ್ಲೀನಿಂಗ್ ಹುಡುಗರು, 10 ಗಂಟೆ ಕೆಲಸ ಸಂಬಳ 10,500/- ಒವರ್ ಟೈಂ ಕೆಲಸಕ್ಕೆ ಹೆಚ್ಚಿಗೆ ಹಣ, ಊಟ, ವಸತಿ ಉಚಿತ, ವಯಸ್ಸು 18 ರಿಂದ 30,
ರಮೇಶ್, 97400 98047

**ರಕ್ತ ದಾನ ಶ್ರೇಷ್ಠ ದಾನ**

**ಲೈಂಗಿಕ ನಿಶ್ಯಕ್ತಿಗೆ ನಿರಾಶರಾಗಬೇಡಿ**

ಶೀಘ್ರ ಸ್ಖಲನ, ಹಸ್ತ ಮೈಥುನ, ಸ್ವಪ್ನದೋಷ, ನರಗಳ ದೌರ್ಬಲ್ಯತೆ, ತಾರುಣ್ಯ ನಾಶ, ಸಂತಾನ ದೋಷ, ಲೈಂಗಿಕ ಸಮಸ್ಯೆಗೆ ಭೇಟಿಯಾಗಿ.
ದಾವಣಗೆರೆ : 2 & 3 ರಂದು ಬಸವರಾಜ ಲಾಡ್ಜ್ ಪಿ.ಬಿ. ರಸ್ತೆ.
ಡಾ|| ಎಚ್.ಆಯ್. ದೊಡ್ಡಮನಿ (G.R.No.8969)
ಡಮ್ಮಣಗಿ ಕಾಂಪ್ಲೆಕ್ಸ್, 1ನೇ ಮಹಡಿ, ನಂ.26 ಹಳೇಬಸ್ ಸ್ಟ್ಯಾಂಡ್ ಎದುರಿಗೆ, ಹುಬ್ಬಳ್ಳಿ
M:9740523710

**ಹುಡುಗರು ಬೇಕಾಗಿದ್ದಾರೆ**
ಟಾಟಾ ಪವರ್ ಸೋಲಾರ್ ಮಾರ್ಕೆಟಿಂಗ್ ಮಾಡಲು ಪಿಯುಸಿ ಮುಗಿಸಿದ ಹುಡುಗರು ಬೇಕಾಗಿದ್ದಾರೆ.
M/S ಬಸವಶ್ರೀ ಸೋಲಾರ್ ಟೆಕ್ನಾಲಜೀಸ್
ನಂ. 43H, ಎಸ್.ಜೆ.ಜೆ.ಎಂ. ಕಾಂಪ್ಲೆಕ್ಸ್, ಜಯದೇವ ಸರ್ಕಲ್, ಹದಡಿ ರಸ್ತೆ, ದಾವಣಗೆರೆ.
99001 42052
ಸಮಯ : ಮಧ್ಯಾಹ್ನ 1 ರಿಂದ 5ರವರೆಗೆ

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7ಮತ್ತು 21ನೇ ತಾರೀಖು ಜನತಾ ಡೀಲಕ್ಸ್ ಲಾಡ್ಜ್, KSRTC ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ.
4 ಮತ್ತು 18 ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
ಅಸ್ತಮಾ, ಕೀಲು ನೋವು
ಡಾ|| ಎಸ್.ಎಂ. ಸೇಠಿ. ಫೋ. : 96322 95561
ಸಮಯ: ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ರವರೆಗೆ

**ಬೇಕಾಗಿದ್ದಾರೆ**
ಮಾರ್ಕೆಟಿಂಗ್ ಮಾಡಲು ಹುಡುಗರು ಬೇಕಾಗಿದ್ದಾರೆ.
10,000 ರಿಂದ 15,000 ಸಾವಿರ ಸಂಬಳ.
91106 21233

**ಕಲಸಕ್ಕೆ ಬೇಕಾಗಿದ್ದಾರೆ**
ಹೋಟೆಲ್‌ನಲ್ಲಿ ಕೆಲಸ ಮಾಡಲು ಸಪ್ಲೈಯರ್ : 12000/- ಸಂಬಳ. ಪಾತ್ರೆ ತೊಳೆಯಲು 9000/- ಸಂಬಳ. ಸಂಪರ್ಕಿಸಿ.
ವಿಷ್ಣು ಪ್ರೇಮ ಹೋಟೆಲ್
99022 49393

**ಬೇಕಾಗಿದ್ದಾರೆ**
ಕಂಪ್ಯೂಟರ್ ಕೆಲಸಕ್ಕೆ ಲೇಡೀಸ್ ಬೇಕಾಗಿದ್ದಾರೆ.
91108 98377

**ಪಾರ್ಟ್ ಟೈಂ ಜಾಬ್ಸ್**
ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರವಣಿಗೆ ಹಾಗೂ ಫಾರಂ ಫಿಲ್ಲಿಂಗ್, ಪ್ಯಾಕಿಂಗ್, ಟೆಲಿಕಾಲಿಂಗ್, ಡಾಟಾ ಎಂಟ್ರಿ ಹಾಗೂ ಮೊಬೈಲ್ ಮೂಲಕ ತಿಂಗಳಿಗೆ 15,000 ದಿಂದ 30,000 ಸಂಪಾದಿಸಿ + (ಕೋರಿಯರ್ ಸೌಲಭ್ಯವಿದೆ)
91487 33213

**SHOP FOR RENT**
10x15 size Corner Building Beside Nandini Milk Parlour, Shivali theatre road, Davangere
88924 06748
90367 09901

**Admission Open For ಬಿಎಸ್ಸಿ ನರ್ಸಿಂಗ್**
TMAE SOCIETY'S
SCS INSTITUTE OF NURSING SCIENCES
ಹರಪನಹಳ್ಳಿ-583131
ಕೆಲವೇ ಸೀಟುಗಳು ಮಾತ್ರ,
9448080626, 9902378278
College : 9448026786, 9380131323

ಶ್ರೀ ಗುರು ಶಾಂತವೀರೇಶ್ವರ ಸೇವಾ ಸಮಿತಿ (ರಿ.)
**ವೀರಶೈವ/ಲಿಂಗಾಯತ ವಧು-ವರರ ಅನ್ವೇಷಣಾ ಕೇಂದ್ರ**
(ಕಳೆದ 21ನೇ ವರ್ಷಗಳ ಸೇವೆಯಲ್ಲಿ)
www.lingayathweds.com
ದಾವಣಗೆರೆ, ಶಿವಮೊಗ್ಗ, ಸಾಗರ, ಬೆಂಗಳೂರು ಹಾಗೂ 10 ಶಾಖಾ ಕಛೇರಿ ಹೊಂದಿರುವ ನಮ್ಮಲ್ಲಿ ಎಲ್ಲಾ ತರಹದ ವೀರಶೈವ ವಧು-ವರರಿಗಾಗಿ ಸಂಪರ್ಕಿಸಿ.
ವಿಳಾಸ : ಸಿದ್ದವೀರಪ್ಪ ಬಡಾವಣೆ, ದಾವಣಗೆರೆ.
ಮೊ: 94481 59303, 80509 52637

**ಮನೆ ಮಾರಾಟಕ್ಕಿದೆ**
ಎಸ್.ಎಸ್. ಬಡಾವಣೆ ಬಿ ಬ್ಲಾಕ್ ಡೋರ್ ನಂ. 2048/18, 4ನೇ ಮೇನ್, 14ನೇ ಕ್ರಾಸ್ 30x40 ಅಳತೆಯ ಗ್ರೌಂಡ್ ಫ್ಲೋರ್ ಹಾಗೂ ಮೊದಲನೇ ಮಹಡಿ ಇರುವ ಮುನ್ಸಿಪಲ್ ಹಾಗೂ ಬೋರ್ ನೀರಿನ ಸೌಕರ್ಯವಿರುವ ಸುಸಜ್ಜಿತವಾದ ಮನೆ ಮಾರಾಟಕ್ಕಿದೆ. ಸಂಪರ್ಕಿಸಿ :
96114 81408

**ಕೆಲಸಕ್ಕೆ ಬೇಕಾಗಿದ್ದಾರೆ**
ಟೀ ಹಾಗು ಕಾಫಿ ಮಾಡುವವರು ಬೇಕಾಗಿದ್ದಾರೆ.
ಸ್ಥಳ: 1946 ಪ್ರಕಾಶ್ ಕಾಫಿ ವರ್ಕ್ಸ್ ಮಾಮಾಸ್ ಜಾಯಿಂಟ್ ರೋಡ್ ಮತ್ತು ಪ್ರಕಾಶ್ ಕಾಫಿ ವರ್ಕ್ಸ್ ವಿಜಯಲಕ್ಷ್ಮಿ ರಸ್ತೆ
99004 38052, 97401 53513

**ಸೈಟುಗಳು ಮಾರಾಟಕ್ಕಿವೆ**
ಹರಪನಹಳ್ಳಿಯಲ್ಲಿ ಕಡಿಮೆ ಬೆಲೆಗೆ ಸೈಟುಗಳು ಮಾರಾಟಕ್ಕಿವೆ
94838 62779

**ಲೋನ್ ಕೊಡಲಾಗುವುದು**
ಹೋಮ್ ಲೋನ್, ಮನೆ ಖರೀದಿ, ಸೈಟ್ ಖರೀದಿ, ಕಮರ್ಷಿಯಲ್ ಪ್ರಾಪರ್ಟಿ ಲೋನ್ ಲೋನ್ take over, ಮನೆ ಕಟ್ಟಲು, ಕೊಡಲಾಗುವುದು, ಲೋನ್ ಅಮೌಂಟ್ 3 ಲಕ್ಷದಿಂದ 10 ಕೋಟಿ ವರೆಗೂ ಕೊಡಲಾಗುವುದು
ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ.
74835 24662
(ಷರತ್ತುಗಳು ಅನ್ವಯ)

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

# ನಗರದಲ್ಲಿಂದು ಎಸ್.ಕೆ. ಪಾಂಡುರಾಜ್ ಅವರಿಗೆ ಅಭಿನಂದನಾ ಸಮಾರಂಭ



ಧಾರವಾಡದಲ್ಲಿ ಕಳೆದ ವಾರ ನಡೆದ ಓಪನ್ ನ್ಯಾಷನಲ್ ಮಾಸ್ಟರ್ಸ್ ಗೇಮ್ಸ್ 2023ರಲ್ಲಿ ವೇಯ್ಟ್ ಲಿಫ್ಟಿಂಗ್‌ನಲ್ಲಿ ಮಹಾನಗರ ಪಾಲಿಕೆಯ ವ್ಯವಸ್ಥಾಪಕ ಎಸ್.ಕೆ. ಪಾಂಡುರಾಜ್ ಅವರು ಭಾಗವಹಿಸಿ ಪ್ರಥಮ ಸ್ಥಾನ ಗಳಿಸಿದ್ದು, ಅವರನ್ನು ಮಹಾನಗರ ಪಾಲಿಕೆ ನೌಕರರ ಸಂಘದಿಂದ ಇಂದು ಸಂಜೆ 5.30ಕ್ಕೆ ನಗರ ಪಾಲಿಕೆಯ ಸಭಾಂಗಣದಲ್ಲಿ ಅಭಿನಂದನಾ ಸಮಾರಂಭವನ್ನು ಹಮ್ಮಿಕೊಳ್ಳಲಾಗಿದೆ.

ಮಹಾನಗರ ಪಾಲಿಕೆ ನೌಕರರ ಸಂಘದ ಅಧ್ಯಕ್ಷ ಕೆ. ಎಸ್. ಗೋವಿಂದ ರಾಜ್ ಅಧ್ಯಕ್ಷತೆ ವಹಿಸಲಿದ್ದು, ಮಹಾಪೌರರಾದ ವಿನಾಯಕ ಪೈಲ್ವಾನ್, ಉಪ ಮಹಾಪೌರರಾದ ಶ್ರೀಮತಿ ಯಶೋಧ, ಆಯುಕ್ತರಾದ ಶ್ರೀಮತಿ ರೇಣುಕಾ, ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಇ.ಎಂ. ಮಂಜುನಾಥ ಅವರುಗಳು ಮುಖ್ಯ ಅತಿಥಿಗಳಾಗಿ ಭಾಗವಹಿಸುವರು.

# ಜಗಳೂರು ಕೇಂದ್ರಕ್ಕೆ ನ್ಯಾ. ಸದಾಶಿವ ಆಯೋಗ ವರದಿ ಸಲ್ಲಿಸಲು ಒತ್ತಾಯ



ಜಗಳೂರು, ನ.15- ಪರಿಶಿಷ್ಟ ಜಾತಿ ಒಳಮೀಸಲು ಹಂಚಿಕೆ ವಿಚಾರಕ್ಕೆ ಸಂಬಂಧಿಸಿದಂತೆ ನ್ಯಾ. ಎ.ಜೆ.ಸದಾಶಿವ ಆಯೋಗ ಸಲ್ಲಿಸಿರುವ ವರದಿಯನ್ನು ಬೆಳಗಾವಿಯಲ್ಲಿ ನಡೆಯಲಿರುವ ಚಳಿಗಾಲದ ಅಧಿವೇಶನದಲ್ಲಿ ಷೆಡ್ಯೂಲ್ 9ರಲ್ಲಿ ಸೇರಿಸಿ, ತಕ್ಷಣ ಕೇಂದ್ರ ಸರ್ಕಾರಕ್ಕೆ ಸಲ್ಲಿಸಬೇಕು ಎಂದು ದಲಿತ ಮುಖಂಡ ಶಂಭುಲಿಂಗಪ್ಪ ಆಗ್ರಹಿಸಿದರು.

ಪಟ್ಟಣದ ಪತ್ರಿಕಾ ಭವನದಲ್ಲಿ ಬುಧವಾರ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ಪರಿಶಿಷ್ಟರ ಮೀಸಲಾತಿ ಸೌಲಭ್ಯಗಳನ್ನು ಬಲಿಷ್ಟರು ಮಾತ್ರ ಪಡೆದುಕೊಳ್ಳುತ್ತಿದ್ದಾರೆ. ಮಾದಿಗ ಮತ್ತು ಛಲವಾದಿ ಸಮುದಾಯಗಳು ಸೌಲಭ್ಯಗಳಿಗೆ ಪರಿಪೂರ್ಣವಾಗಿ ಹಂಚಿಕೆಯಾಗಿಲ್ಲ. ಈ ಹಿಂದೆ ಮುಖ್ಯಮಂತ್ರಿಯಾಗಿದ್ದ ಬಸವರಾಜ್ ಬೊಮ್ಮಾಯಿ ಸರ್ಕಾರ ಒಳ ಮೀಸಲಾತಿ ಸೌಲಭ್ಯ ನೀಡಲು ಮಾಧುಸ್ವಾಮಿ ನೇತೃತ್ವದಲ್ಲಿ ಸಂಪುಟ ಉಪಸಮಿತಿ ಸಭೆ ರಚನೆ ಮಾಡಲಾಗಿತ್ತು. ಆದರೆ ಕೇಂದ್ರಕ್ಕೆ ಆ ವರದಿ ಸಲ್ಲಿಕೆಯಾಗಿದೆಯೋ, ಇಲ್ಲವೋ ಎಂಬುದು ಗೊತ್ತಿಲ್ಲ.

ಧರ್ಮಸಿಂಗ್ ನೇತೃತ್ವದ ಸರ್ಕಾರ ನ್ಯಾ. ಎ.ಜೆ.ಸದಾಶಿವ ನೇತೃತ್ವದ ಆಯೋಗವನ್ನು ರಚನೆ ಮಾಡಿತ್ತು. ಸುಮಾರು 15 ವರ್ಷ ಕಳೆದರೂ ಪರಿಶಿಷ್ಟ ಜಾತಿಗಳ ಸಾಮಾಜಿಕ, ಶೈಕ್ಷಣಿಕ ಮತ್ತು ಉದ್ಯೋಗದ ಸ್ಥಿತಿಗಳು ಈಗಲೂ ಹಾಗೇ ಇವೆ. ಎಡಗೈ ಸಮುದಾಯಕ್ಕೆ ಶೇ.6 ರಷ್ಟು ಮತ್ತು ಬಲಗೈ ಸಮುದಾಯಕ್ಕೆ ಶೇ.5, ಸ್ಪೃಶ್ಯ ಸಮುದಾಯಕ್ಕೆ ಶೇ.3 ಹಾಗೂ ಇತರೆ ಸಮುದಾಯಗಳಿಗೆ ಶೇ.1ರಷ್ಟು ಮೀಸಲು ನೀಡಲು ನ್ಯಾ.ಸದಾಶಿವ ವರದಿಯಲ್ಲಿ ಶಿಫಾರಸ್ಸು ಮಾಡಿತ್ತು. ಆದರೆ ಅದಕ್ಕೆ ಕೇಂದ್ರದಲ್ಲಿ ಅನುಮೋದನೆ ದೊರೆಯಬೇಕು.

ತಕ್ಷಣವೇ ಷೆಡ್ಯೂಲ್ 9ರಲ್ಲಿ ಸೇರಿಸಿ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಕೇಂದ್ರ ಸರ್ಕಾರದ ಶಿಫಾರಸ್ಸಿಗೆ ಕಳುಹಿಸಬೇಕು. ನ್ಯಾ. ಸದಾಶಿವ ಆಯೋಗದ ವರದಿಯನ್ನು ಯಥಾವತ್ತಾಗಿ ಜಾರಿಗೆ ಬರುವಂತೆ ಒತ್ತಡ ಹೇರಬೇಕು ಎಂದರು ಆಗ್ರಹಿಸಿದರು.

ಇದೇ ದಿನಾಂಕ 18 ರಂದು ಶಾಸಕ ಬಿ.ದೇವೇಂದ್ರಪ್ಪ ಅವರಿಗೆ ಎಲ್ಲಾ ದಲಿತ ಮುಖಂಡರು ಸೇರಿ ನ್ಯಾ. ಎ.ಜೆ.ಸದಾಶಿವ ಆಯೋಗದ ವರದಿ ಜಾರಿಗೆ ಆಗ್ರಹಿಸಿ ಮುಖ್ಯಮಂತ್ರಿಗಳ ಮೇಲೆ ಒತ್ತಡ ಹೇರಲು ಮನವಿ ನೀಡುತ್ತಿದ್ದೇವೆ. ಈ ಅಧಿವೇಶನದಲ್ಲಿ ವರದಿ ಜಾರಿಯಾಗದೇ ಇದ್ದರೆ ಶಾಸಕರ ಮನೆಗೆ ಮುತ್ತಿಗೆ ಹಾಕುತ್ತೇವೆ ಎಂದು ಡಿಎಸ್‌ಎಸ್ ಮುಖಂಡ ಮಲೆಮಾಚಿಕೆರೆ ಸತೀಶ್ ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಸಿ.ತಿಪ್ಪೇಸ್ವಾಮಿ, ಹಟ್ಟಿ ತಿಪ್ಪೇಸ್ವಾಮಿ, ಕಾಂಗ್ರೆಸ್ ಮುಖಂಡ ಬಿ.ಮಹೇಶ್ವರಪ್ಪ, ಗ್ಯಾಸ್ ಓಬಣ್ಣ, ರೇಣುಕೇಶ್ ಮುಂತಾದವರು ಇದ್ದರು.

# ವಿಜಯೇಂದ್ರ ಪದಗ್ರಹಣ: ಪೂಜೆ, ಸಂಭ್ರಮ



ದಾವಣಗೆರೆ, ನ.15- ಭಾರತೀಯ ಜನತಾ ಪಕ್ಷದ ನೂತನ ರಾಜ್ಯಾಧ್ಯಕ್ಷರಾಗಿ ನೇಮಕಗೊಂಡಿರುವ ಬಿ.ವೈ. ವಿಜಯೇಂದ್ರ ಅವರ ಪದಗ್ರಹಣ ಸಮಾರಂಭದ ಹಿನ್ನೆಲೆಯಲ್ಲಿ ಬಿಜೆಪಿಯಿಂದ ನಗರದ ಹರಳೆಣ್ಣೆ ಕೊಟ್ರಬಸಪ್ಪ ವೃತ್ತದಲ್ಲಿರುವ ಶ್ರೀ ವರ ಸಿದ್ದಿವಿನಾಯಕ ದೇವಸ್ಥಾನದಲ್ಲಿ ವಿಶೇಷ ಪೂಜೆ ಸಲ್ಲಿಸಿ ಸಂಭ್ರಮಾಚರಣೆ ಮಾಡಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ಬಿಜೆಪಿ ಮಾಜಿ ಜಿಲ್ಲಾಧ್ಯಕ್ಷ ಯಶವಂತರಾವ್ ಜಾಧವ್, ವಿಜಯೇಂದ್ರ ಅವರು ರಾಜ್ಯಾಧ್ಯಕ್ಷರಾಗಿ ಪದಗ್ರಹಣ ಮಾಡುತ್ತಿರುವ ಹಿನ್ನೆಲೆಯಲ್ಲಿ ವಿದ್ಯಾಗಣಪತಿ ಆಶೀರ್ವಾದದೊಂದಿಗೆ ರಾಜ್ಯದಲ್ಲಿ 28ಕ್ಕೆ 28 ಸ್ಥಾನ ಗೆಲ್ಲುವ ಶಕ್ತಿ ನೀಡಲಿ ಎಂದು ಗಣಪತಿಗೆ ಪೂಜೆ ಸಲ್ಲಿಸಲಾಗುತ್ತಿದೆ ಎಂದರು.

ಜಿಲ್ಲಾ ಉಪಾಧ್ಯಕ್ಷ ಶ್ರೀನಿವಾಸ ದಾಸಕರಿಯಪ್ಪ ಮಾತನಾಡಿ, ವಿಜಯೇಂದ್ರ ಅವರು ಎಲ್ಲರನ್ನೂ ಜೊತೆಗೆ ಕೊಂಡೊಯ್ಯುತ್ತಾರೆ ಎಂಬ ವಿಶ್ವಾಸ ಹಾಗೂ ನಂಬಿಕೆ ಇದೆ ಎಂದು ಹೇಳಿದರು.

ದೂಡಾ ಮಾಜಿ ಅಧ್ಯಕ್ಷ ರಾಜನಹಳ್ಳಿ ಶಿವಕುಮಾರ್ ಮಾತನಾಡಿ, ಪಕ್ಷವನ್ನು ತಳಮಟ್ಟದಿಂದ ಸಂಘಟಿಸುವ ಸಾಮರ್ಥ್ಯ ವಿಜಯೇಂದ್ರ ಅವರಿಗಿದೆ. ಅವರೊಂದಿಗೆ ನಾವೆಲ್ಲರೂ ಕೈ ಜೋಡಿಸಿ ಪಕ್ಷದ ಗೆಲುವಿಗೆ ಶ್ರಮಿಸುತ್ತೇವೆ ಎಂದರು.

ನಗರ ಪಾಲಿಕೆ ಮಾಜಿ ಸದಸ್ಯ ಶಿವನಗೌಡ ಟಿ. ಪಾಟೀಲ್, ಉತ್ತರ ಯುವ ಮೋರ್ಚಾ ಉಪಾಧ್ಯಕ್ಷರಾದ ಹರೀಶ್ ಶಾಮನೂರ, ಟಿಂಕರ್ ಮಂಜಣ್ಣ, ಬಿ.ರಮೇಶ್ ನಾಯ್ಕ, ದಕ್ಷಿಣ ಮಂಡಲದ ಅಧ್ಯಕ್ಷ ಆನಂದ್ ರಾವ್ ಸಿಂಧೆ, ಪ್ರಧಾನ ಕಾರ್ಯದರ್ಶಿ ರಾಜು ನೀಲಗುಂದ, ಗುರು ಸೋಗಿ, ಪಾಲಿಕೆ ಸದಸ್ಯ ಸೋಗಿ ಶಾಂತಕುಮಾರ್, ಜೊಳ್ಳಿ ಗುರು, ಅಜ್ಜಂಪುರ ಶೆಟ್ರು ವಿಜಯಕುಮಾರ್, ಅಜ್ಜಂಪುರ ಮುತ್ತಣ್ಣ, ಮಹಿಳಾ ಮೋರ್ಚಾದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಪುಷ್ಪಾ ವಾಲಿ, ನೀತಾ ನಂದೀಶ್, ದಕ್ಷಿಣ ಯುವ ಮೋರ್ಚಾ ಅಧ್ಯಕ್ಷ ರಾಕೇಶ್, ಜಿಲ್ಲಾ ಯುವ ಮೋರ್ಚಾ ಪ್ರಧಾನ ಕಾರ್ಯದರ್ಶಿ ಯಲ್ಲೇಶ್, ಶಶಿಧರ್, ಅತಿಥ್ ಅಂಬರಕರ್, ಗುರು ಕೆ.ವಿ.ಜಯಪ್ರಕಾಶ್ ಮಾಗಿ, ಶ್ರೀಕಾಂತ್ ನೀಲಗುಂದ, ಪಣಿ ಹೊಸಳ್ಳಿಮಠ, ಎಸ್. ಎಲ್. ನಾಗರಾಜ್, ವಿನಯ್ ಎಬಿವಿಪಿ ಸೇರಿದಂತೆ ಅನೇಕ ಕಾರ್ಯಕರ್ತರು ಸಂಭ್ರಮಾಚರಣೆಯಲ್ಲಿ ಭಾಗವಹಿಸಿದ್ದರು.

# ನಗರದಲ್ಲಿ ಇಂದು ಉಮಾಪತಿ ಜಗದ್ಗುರುಗಳ ಪುಣ್ಯಾರಾಧನೆ



ಶ್ರೀ ಶ್ರೀಶೈಲ ಪೀಠದ ಹಿರಿಯ ಜಗದ್ಗುರು ಲಿಂ. ಶ್ರೀ ಉಮಾಪತಿ ಪಂಡಿತಾರಾಧ್ಯ ಶಿವಾಚಾರ್ಯ ಮಹಾಸ್ವಾಮಿಗಳವರ ಪುಣ್ಯಾರಾಧನೆ ಕಾರ್ಯಕ್ರಮ ಕಾರ್ಯಕ್ರಮವು ಪಿ.ಬಿ.ರಸ್ತೆಯಲ್ಲಿರುವ ಶ್ರೀ ಶ್ರೀಶೈಲ ಮಠದಲ್ಲಿ ಇಂದು ಜರುಗಲಿದೆ. ಈ ಕಾರ್ಯಕ್ರಮಕ್ಕೆ ಶ್ರೀಶೈಲ ಜಗದ್ಗುರುಗಳು ಆಗಮಿಸುವರು. ಭಕ್ತಾದಿಗಳು ಭಾಗವಹಿಸಿ ಗುರುದರ್ಶನ ಪಡೆದು ಪ್ರಸಾದ ಸ್ವೀಕರಿಸಬೇಕೆಂದು ಶ್ರೀಶೈಲ ಮಠದ ವ್ಯವಸ್ಥಾಪಕರಾದ ಬನ್ನಯ್ಯ ಸ್ವಾಮಿ ಕೋರಿದ್ದಾರೆ.

# ಮೂಲ ಮತ್ತು ಹಳೆ ಬಿಜೆಪಿ ಕಾರ್ಯಕರ್ತರ ಸಭೆ



ದಾವಣಗೆರೆ, ನ.15- ಬಿಜೆಪಿಯ ಮೂಲ ಮತ್ತು ಹಳೆಯ ಕಾರ್ಯಕರ್ತರ ಸಭೆಯು ಜಿಲ್ಲಾ ಬಿಜೆಪಿ ಕಚೇರಿಯಲ್ಲಿ ಇಂದು ನಡೆಯಿತು.

ಸಭೆಯ ನೇತೃತ್ವವನ್ನು ಕೃಷ್ಣಮೂರ್ತಿ ಪವಾರ್ ವಹಿಸಿದ್ದರು. ಅಧ್ಯಕ್ಷತೆಯನ್ನು ಜಿ.ಪಂ. ಮಾಜಿ ಸದಸ್ಯ ಜಗಳೂರಿನ ಎಸ್.ಕೆ. ಮಂಜುನಾಥ್ ವಹಿಸಿದ್ದರು.ಗೋಪಾಲ್‌ರಾವ್ ಸಾವಂತ್ ಸ್ವಾಗತಿಸಿದರು. ಆನೆಕಲ್ ಚಂದ್ರ ನಾಯ್ಕ್ ಪ್ರಾಸ್ತಾವಿಕ ನುಡಿಗಳನ್ನಾಡಿದರು.

ಸಿ.ಹೆಚ್. ಲಿಂಗರಾಜು, ಕೃಷ್ಣಮೂರ್ತಿ ಪವಾರ್, ಜಗಳೂರಿನ ಶಿವಕುಮಾರ ಸ್ವಾಮಿ ಮಾತನಾಡಿ, ಲೋಕಸಭಾ ಸದಸ್ಯರು ಮತ್ತು ಶಾಸಕರ ವಿರುದ್ಧ ಅಸಮಾಧಾನವನ್ನು ಹೊರಹಾಕಿದರು. ಕಾರ್ಯಕರ್ತರ ಬಲಿದಾನದಿಂದ ಅಧಿಕಾರಕ್ಕೆ ಬಂದವರು ಅವರ ಕುಟುಂಬದವರ ಕಣ್ಣೀರು ಒರೆಸುವಂತಹ ಕೆಲಸ ಮಾಡಲಿಲ್ಲ ಎಂದು ಕಿಡಿ ಕಾರಿದರು.

ಮಾಜಿ ಉಪಮಹಾಪೌರ ಪಿ.ಎಸ್. ಜಯ್ಯಣ್ಣ, ಕಡ್ಲೇಬಾಳು ಹೆಚ್.ಎಸ್. ಬಸವರಾಜು, ಗುಬ್ಬಿ ಬಸವರಾಜ್, ಹರಪನಹಳ್ಳಿಯ ಜಗದೀಶ್, ಚನ್ನಬಸಪ್ಪ ಆನೆಕೊಂಡ, ಎಸ್.ಕೆ. ಮಂಜುನಾಥ್, ಹಿರೇಅರಕೆರೆಯ ಹೆಚ್.ಎಂ. ನಾಗರಾಜ, ತುಪ್ಪದಹಳ್ಳಿ ಕೆ.ಬಿ. ಶಿವಕುಮಾರ್, ಹರಿಹರದ ಶಂಕರ್ ಸಾ ಲದ್ವಾ, ನರಗನಹಳ್ಳಿಯ ಎಂ.ಬಿ. ಬಸವಂತಪ್ಪ, ಸಾಸ್ವೆಹಳ್ಳಿಯ ಆರ್. ತಿಪ್ಪೇಶ್, ನಾಗರಾಜ್ ಇ.ಹೆಚ್, ಸರೋಜಮ್ಮ ದೀಕ್ಷಿತ್, ಕೆ.ಟಿ. ಕಲ್ಲೇಶ್, ಕಿರೀಟ್ ಕಲಾಲ್, ಬಾಳೇಕಾಯಿ ಉಮಾಪತಿ, ಆರ್. ಗೋವಿಂದರಾಜ್, ಎಸ್. ದೇವರಾಜ್ ಪಾಳೇಗಾರ್, ನಿಂಗರಾಜ್ ಹಾವನೂರ್, ಕೆ. ಎನ್. ವೆಂಕಟೇಶ್ ಮತ್ತಿತರರು ಮಾತನಾಡಿದರು.

# ಭದ್ರಾ ಮೇಲ್ದಂಡೆ ಯೋಜನೆ ಅನುದಾನ ಶೀಘ್ರ ಬಿಡುಗಡೆಗೆ ಸಂಸದರು ಒತ್ತಡ ತರಲಿ



ಜಗಳೂರು, ನ. 15 - ಭದ್ರಾ ಮೇಲ್ದಂಡೆ ಯೋಜನೆ ಅನುದಾನ ಬಿಡುಗಡೆಗೆ ಸಂಸದ ಜಿ.ಎಂ. ಸಿದ್ದೇಶ್ವರ ಅವರು ಕೇಂದ್ರ ಸರ್ಕಾರಕ್ಕೆ ಒತ್ತಡ ತರಲಿ ಎಂದು ಕೆಪಿಸಿಸಿ ಸದಸ್ಯ ಕಲ್ಲೇಶ್ ರಾಜ್ ಪಟೇಲ್ ಒತ್ತಾಯಿಸಿದರು.

ಪಟ್ಟಣದಲ್ಲಿ ಸುದ್ದಿಗೋಷ್ಠಿ ಯನ್ನುದ್ದೇಶಿಸಿ ಮಾತನಾಡಿದರು. ಬಹುದಿನ ಕನಸಿನ ಭದ್ರಾ ಮೇಲ್ದಂಡೆ ಯೋಜನೆಯನ್ನು ರಾಷ್ಟ್ರೀಯ ಯೋಜನೆಯನ್ನಾಗಿಸಿ ಕೇಂದ್ರ ಆಡಳಿತ ಸರ್ಕಾರ ಕಳೆದ ಬಜೆಟ್‌ನಲ್ಲಿ ರೂ. 5300 ಕೋಟಿ ಅನುದಾನ ಘೋಷಿಸಿ ಅನುದಾನ ಬಿಡುಗಡೆಯ ಭರವಸೆ ನೀಡಿತ್ತು. ಇದರ ಕಡತ ಪ್ರಧಾನಮಂತ್ರಿ ಕಛೇರಿಯಲ್ಲಿದೆ. ಸಚಿವ ಸಂಪುಟದಲ್ಲಿ ಇದುವರೆಗೂ ಚರ್ಚೆಯಾಗಿಲ್ಲ.ತಾಲ್ಲೂಕಿನಲ್ಲಿ ಭದ್ರಾ ಮೇಲ್ದಂಡೆ ಕಾಮಗಾರಿ ಆರಂಭವಾಗಿದೆ. ಕೆಲವೆಡೆ ಭೂ-ಸ್ವಾಧೀನ ಮಾಡಿಕೊಳ್ಳಬೇಕಿದೆ. ಅಧಿಕೃತವಾಗಿ ಘೋಷಿಸಿದರೆ ಶೀಘ್ರ ಕಾಮಗಾರಿ ಪೂರ್ಣಗೊಳ್ಳುತ್ತದೆ.ಆದರೆ ಸಂಸದರು ಪ್ರಯತ್ನಮಾಡುತ್ತಿಲ್ಲ.

**ಯೋಜನೆ ಜಾರಿಯಿಂದ ಲೋಕಸಭಾ ಕ್ಷೇತ್ರ ವ್ಯಾಪ್ತಿ:** 18423 ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಸಿಗಲಿದೆ. 9 ಕೆರೆಗಳು ಭರ್ತಿಯಾಗಲಿವೆ. ಕೂಡಲೇ ಸಂಸದ ಜಿ.ಎಂ. ಸಿದ್ದೇಶ್ವರ, ಚಿತ್ರದುರ್ಗ ಸಂಸದ ಹಾಗೂ ಕೇಂದ್ರ ಸಚಿವ ನಾರಾಯಣಸ್ವಾಮಿ, ಉಡುಪಿ-ಚಿಕ್ಕಮಗಳೂರು ಸಂಸದೆ ಶೋಭಾ ಕರಂದ್ಲಾಜೆ, ಸಂಪುಟದಲ್ಲಿ ಅನುಮೋದನೆಗೊಳಿಸಿ ಹಣ ಬಿಡುಗಡೆಗೆ ಒತ್ತಡ ತರಬೇಕಿದೆ. ಸಂಸದ ಸಿದ್ದೇಶ್ವರ ಅವರು ಜನತೆಗೆ ಸ್ಪಂದಿಸದೇ ನಿರ್ಲಕ್ಷ್ಯ ವಹಿಸಿ ಜಿಲ್ಲೆಯ ರೈತರಿಗೆ ಅನ್ಯಾಯಮಾಡುತ್ತಿರುವುದು ಖಂಡನೀಯ ಎಂದು ಟೀಕಿಸಿದರು.

# ಇಂದು ಕುರಿ, ಮೇಕೆ ಸಾಕಾಣಿಕೆ ತರಬೇತಿ

ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ ವತಿಯಿಂದ ಪಶು ಆಸ್ಪತ್ರೆ ಆವರಣದಲ್ಲಿರುವ ಪಶುಪಾಲನಾ ಮತ್ತು ಪಶುವೈದ್ಯಕೀಯ ತರಬೇತಿ ಕೇಂದ್ರದಲ್ಲಿ ಇಂದು ಆಧುನಿಕ ಹೈನುಗಾರಿಕೆ ತರಬೇತಿ ಹಾಗೂ ನಾಳೆ ದಿನಾಂಕ 17 ಮತ್ತು 18 ರಂದು ಕುರಿ ಮತ್ತು ಮೇಕೆ ಸಾಕಾಣಿಕೆ ತರಬೇತಿಯನ್ನು ಆಯೋಜಿಸಲಾಗಿದೆ. ವಿವರಕ್ಕೆ ಪಶುಪಾಲನಾ ಮತ್ತು ಪಶುವೈದ್ಯಕೀಯ ತರಬೇತಿ ಕೇಂದ್ರ (ದೂರವಾಣಿ 08192-233787) ವನ್ನು ಸಂಪರ್ಕಿಸಬಹುದೆಂದು ಮುಖ್ಯ ಪಶು ವೈದ್ಯಾಧಿಕಾರಿ ಚಂದ್ರಶೇಖರ್ ಸುಂಕದ್ ತಿಳಿಸಿದ್ದಾರೆ.

**80x120 ಅಡಿ ಅಳತೆಯ 3 ಅಂತಸ್ತಿನ ಕಟ್ಟಡ ಬಾಡಿಗೆಗೆ ಇದೆ**



ದಾವಣಗೆರೆ ನಗರ ನಿಜಲಿಂಗಪ್ಪ ಬಡಾವಣೆಯ ರಿಂಗ್ ರೋಡ್ ಸರ್ಕಲ್ ಹತ್ತಿರ, ಶ್ರೀ ಬಕ್ಕೇಶ್ವರ ಕಲ್ಯಾಣ ಮಂಟಪದ ಎದುರು, ಡೋರ್ ನಂ. 429, 430ರಲ್ಲಿ 80x120 ಅಡಿ ಅಳತೆಯ 135 ಚದುರಡಿಯ 1ನೇ ಮಹಡಿ, 2ನೇ ಮಹಡಿ, 3ನೇ ಮಹಡಿಯಿರುವ ಬಿಲ್ಡಿಂಗ್ ಖಾಲಿಯಿದ್ದು, ಬಾಡಿಗೆಗೆ ಇದೆ. ಕುಡಿಯುವ ನೀರು, ಶೌಚಾಲಯ, ಪಾರ್ಕಿಂಗ್, ಲಿಫ್ಟ್ ಸೌಲಭ್ಯ ಹೊಂದಿದೆ. ಸಂಪೂರ್ಣ ಕಟ್ಟಡವು ಬ್ಯಾಂಕ್, ಶಾಲೆ, ಕಾಲೇಜು, ಸರ್ಕಾರಿ ಕಛೇರಿ, ಖಾಸಗಿ ಕಛೇರಿ, ವಾಣಿಜ್ಯ ಉದ್ಯಮಗಳಿಗೆ ಬಾಡಿಗೆಗೆ ದೊರೆಯುತ್ತದೆ.

**ಸಂಪರ್ಕಿಸಿ. 82961 18778**

# ನಗರದಲ್ಲಿ ಇಂದು ವಿದ್ಯುತ್ ಇಲ್ಲ

ರೆಹಮಾನ್ ರಸ್ತೆ, ಮಂಡಕ್ಕಿ ಭಟ್ಟಿ 1ನೇ ಕ್ರಾಸ್‌ನಿಂದ 10ನೇ ಕ್ರಾಸ್‌ವರೆಗೆ, ರಿಂಗ್ ರಸ್ತೆ, ಸಿದ್ದರಾಮೇಶ್ವರ ಬಡಾವಣೆ, ಕಾರ್ಲ್‌ಮಾರ್ಕ್ಸ್ ನಗರ, ದೇವರಾಜ್ ಕ್ವಾರ್ಟರ್ಸ್ (ಬೇತೂರ್‌ರಸ್ತೆ) ಸುತ್ತಮುತ್ತ ಹಾಗೂ ಇತರೆ ಪ್ರದೇಶಗಳು.

ಮಂಡಿಪೇಟೆ, ಅಶೋಕ ಟಾಕೀಸ್, ಬಿನ್ನಿ ಕಂಪನಿ ರಸ್ತೆ, ಮಹಾವೀರ , ಕೆ.ಆರ್. ರಸ್ತೆ, , ಗಡಿಯಾರ ಕಂಬ, ಬಿ.ಟಿ. ಗಲ್ಲಿ, ಬೆಳ್ಳೂಡಿ ಗಲ್ಲಿ, ಇಸ್ಲಾಂಪೇಟೆ, ಹೆರಿಗೆ ಆಸ್ಪತ್ರೆ, ಪೋಸ್ಟ್ ಆಫೀಸ್, ರೈಲ್ವೇ ಸ್ಟೇಷನ್, ವಿಜಯಲಕ್ಷ್ಮಿ ರಸ್ತೆ ಸ್ವಲ್ಪ ಭಾಗ, ವಸಂತ ಟಾಕೀಸ್ ರಸ್ತೆ ಸ್ವಲ್ಪ, ಶ್ರೀರಾಮ ಬಡಾವಣೆ, ಡಿ.ಸಿ.ಎಂ. ಟೌನ್‌ಶಿಪ್, ಶಕ್ತಿ ನಗರ, ಅಂಬಿಕಾ ನಗರ, ಕೊಟ್ಟೂರೇಶ್ವರ ಬಡಾವಣೆ, ಜಯನಗರ, ಶೇಖರಪ್ಪ ಗೋಡೌನ್, ಬನಶಂಕರಿ ದೇವಸ್ಥಾನ, ರೆಡ್ಡಿ ಬಿಲ್ಡಿಂಗ್, ಪಿ.ಬಿ. ರಸ್ತೆ, ಬಿಲಾಲ್ ಕಾಂಪೌಂಡ್, ಟ್ರಾಫಿಕ್ ಪೊಲೀಸ್ ಠಾಣೆ, ತಾಲ್ಲೂಕು ಆಫೀಸ್, ಫೈರ್ ಆಫೀಸ್, ಎ.ಪಿ.ಎಂ.ಸಿ, ದಿಬ್ಬಳ್ಳಿ ಕಾಂಪೌಂಡ್, ಭಗತ್‌ಸಿಂಗ್ ನಗರ, ಗಣೇಶ ಲೇಔಟ್, ಗೀತಾಂಜಲಿ ಟಾಕೀಸ್, ಈರುಳ್ಳಿ ಮಾರ್ಕೆಟ್, ಕೆಎಸ್‌ಆರ್‌ಟಿಸಿ ಭಾಗ ಹಾಗೂ ಇತರೆ ಪ್ರದೇಶಗಳಲ್ಲಿ ಇಂದು ಬೆಳಿಗ್ಗೆ 10 ರಿಂದ ಸಂಜೆ 4 ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

# ರಾಷ್ಟ್ರೀಯ ಕ್ರೀಡಾಪಟು ಬಂಧನ

ಪಣಜಿ, ನ. 15 – ಮನೆಕಳ್ಳತನ ಹಾಗೂ ದ್ವಿಚಕ್ರ ವಾಹನದ ಕಳ್ಳತನದಲ್ಲಿ ಭಾಗಿಯಾದ ಆರೋಪದ ಮೇಲೆ ರಾಷ್ಟ್ರೀಯ ಸ್ನೂಕರ್ ಕ್ರೀಡಾಪಟು ಸೇರಿದಂತೆ ಇಬ್ಬರನ್ನು ಗೋವಾ ಪೊಲೀ ಸರು ಬಂಧಿಸಿದ್ದಾರೆ. ಇತ್ತೀಚೆಗೆ ನಡೆದ ರಾಷ್ಟ್ರೀಯ ಪಂದ್ಯಾವ ಳಿಯಲ್ಲಿ ಪಾಲ್ಗೊಂಡಿದ್ದ ಸ್ನೂಕರ್ ಆಟಗಾರ ಸುಲೇಮಾನ್ ಶೇಖ್ ಹಾಗೂ ಆತನ ಸಹಚರ ಶಬ್ಬೀರ್ ಸಾಹೆಬ್ ಶಲವಾಡಿ ಎಂಬುವವರನ್ನು ಬಂಧಿಸಲಾಗಿದೆ. ಇವರ ವಿರುದ್ಧ ಸರಣಿ ಮನೆಕಳ್ಳತನ ಹಾಗೂ ದ್ವಿಚಕ್ರ ವಾಹನಗಳ ಕಳುವಿನ ಆರೋಪವಿದೆ ಎಂದು ಉತ್ತರ ಗೋವಾದ ಎಸ್ಪಿ ನಿಧಿನ್ ವಲ್ಸನ್ ತಿಳಿಸಿದ್ದಾರೆ.

# ಮುರುಘಾ ಶ್ರೀಗಳ ಬಿಡುಗಡೆ ನಿರೀಕ್ಷೆ ನಗರದಲ್ಲಿ ಸಂಭ್ರಮಾಚರಣೆ



ದಾವಣಗೆರೆ, ನ. 15 - ಫೋಕ್ಸೋ ಪ್ರಕರಣದಲ್ಲಿ ಬಂಧಿತರಾಗಿರುವ ಶ್ರೀ ಶಿವಮೂರ್ತಿ ಮುರುಘಾ ಶರಣರು ನಾಳೆ ಬಿಡುಗಡೆಯಾಗುವ ನಿರೀಕ್ಷೆ ಇದ್ದು, ಈ ಹಿನ್ನೆಲೆಯಲ್ಲಿ ನಗರದ ಜಯದೇವ ವೃತ್ತದಲ್ಲಿ ಶೋಷಿತ ವರ್ಗಗಳ ಒಕ್ಕೂಟದ ಅಧ್ಯಕ್ಷ ಬಾಡದ ಆನಂದ ರಾಜ್ ಅವರ ನೇತೃತ್ವದಲ್ಲಿ ಅಭಿಮಾನಿಗಳು, ಬಸವಣ್ಣನವರ ಭಾವಚಿತ್ರಕ್ಕೆ ಹಾಲಿನ ಅಭಿಷೇಕ ಮಾಡಿ, ಪಟಾಕಿ ಸಿಡಿಸಿ, ಸಿಹಿ ಹಂಚಿ ಸಂಭ್ರಮಪಟ್ಟರು.

ಈ ವೇಳೆ ಮಾತನಾಡಿದ ಬಾಡದ ಆನಂದರಾಜ್, ಶೋಷಿತರ ಗಟ್ಟಿ ಧ್ವನಿಯಾಗಿದ್ದ ಮುರುಘಾ ಶ್ರೀಗಳನ್ನು ಷಡ್ಯಂತ್ರದಿಂದ ಜೈಲಿಗೆ ಕಳುಹಿಸಲಾಗಿತ್ತು. ನಾಳೆ ಬಿಡುಗಡೆ ನಿರೀಕ್ಷೆ ಎಲ್ಲರಿಗೂ ಸಂತೋಷ ತಂದಿದೆ ಎಂದರು.

ಈ ಸಂದರ್ಭದಲ್ಲಿ ಕನ್ನಡ ಚಳುವಳಿಯ ಟಿ.ಶಿವಕುಮಾರ್, ಪಾಲಿಕೆ ಮಾಜಿ ಸದಸ್ಯ ಶಿವನಗೌಡ ಪಾಟೀಲ್, ಟಿಂಕರ್ ಮಂಜಣ್ಣ, ಅಂಗವಿಕಲರ ಸಂಘದ ಅಧ್ಯಕ್ಷ ಧನ್ಯಕುಮಾರ್, ಒಕ್ಕಲಿಗರ ಸಂಘದ ಕಾರ್ಯದರ್ಶಿ ಹನುಮೇಗೌಡ, ಕೊರಚ ಸಮಾಜದ ಮಾಜಿ ಜಿಲ್ಲಾಧ್ಯಕ್ಷ ಜಿ.ಕೃಷ್ಣಪ್ಪ, ಕರವೇ ಸೋಮಶೇಖರ್, ಮಧುರ ಭಕ್ತಿ ಭವನ ಕೊಟ್ರೇಶ್ ಇನ್ನೂ ಮುಂತಾದವರಿದ್ದರು.

# ನಗರ ಪಾಲಿಕೆ ಹೊರಗುತ್ತಿಗೆ ನೌಕರರ ಪ್ರತಿಭಟನೆ



ದಾವಣಗೆರೆ, ನ. 15- ಮಹಾನಗರ ಪಾಲಿಕೆ ಹೊರ ಗುತ್ತಿಗೆ ಘನತ್ಯಾಜ್ಯ ವಿಲೇವಾರಿ ವಾಹನ ಚಾಲಕರು ಸೇರಿದಂತೆ ಹೊರ ಗುತ್ತಿಗೆ ನೌಕರರನ್ನು ನೇರ ಪಾವತಿಗೊಳಪಡಿಸುವಂತೆ ಆಗ್ರಹಿಸಿ ಕರ್ನಾಟಕ ರಾಜ್ಯ ಪಾಲಿಕೆ, ನಗರಸಭೆ, ಪುರಸಭೆ, ಪಟ್ಟಣ ಪಂಚಾಯತಿ ಹೊರ ಗುತ್ತಿಗೆ ನೌಕರರ ಸಂಘ, ಮಹಾನಗರ ಪಾಲಿಕೆಯ ಹೊರ ಗುತ್ತಿಗೆ ಘನ ತ್ಯಾಜ್ಯ ವಿಲೇವಾರಿ ವಾಹನ ಚಾಲಕರ ಸಂಘದ ಪದಾಧಿಕಾರಿಗಳು ನಗರದಲ್ಲಿ ಇಂದು ಪ್ರತಿಭಟನೆ ನಡೆಸಿದರು.

ಮಹಾನಗರ ಪಾಲಿಕೆ ಆವರಣದಿಂದ ಸಂಘದ ಪದಾಧಿಕಾರಿಗಳ ಮುಖಂಡತ್ವದಲ್ಲಿ ಪ್ರತಿಭಟನಾಕಾರರು ತಮ್ಮ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ, ಘೋಷಣೆ ಕೂಗುತ್ತಾ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್, ಶಾಸಕ ಶಾಮನೂರು ಶಿವಶಂಕರಪ್ಪ ಗೃಹ ಕಚೇರಿಗೆ ತೆರಳಿ ಮನವಿ ಸಲ್ಲಿಸಿದರು.

ಇದೇ ಸಂದರ್ಭದಲ್ಲಿ ಸಂಘದ ರಾಜ್ಯ ಗೌರವಾಧ್ಯಕ್ಷ ಎಂ. ವೀರೇಶ್ ಮಾತನಾಡಿದರು.

ಮನವಿ ಸ್ವೀಕರಿಸಿದ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಮಾತನಾಡಿ, ಬೇಡಿಕೆಗಳ ಬಗ್ಗೆ ಸಿಎಂ ಸಿದ್ದರಾಮಯ್ಯ ಅವರ ಬಳಿ ಚರ್ಚಿಸಿ, ಸರ್ಕಾರ ಸಹ ಸಕಾರಾತ್ಮಕವಾಗಿ ಸ್ಪಂದಿಸಲಿದ್ದು, ನೌಕರರ ಬೇಡಿಕೆಗಳ ಈಡೇರಿಕೆಗೆ ಪ್ರಾಮಾಣಿಕವಾಗಿ ಪ್ರಯತ್ನಿಸಲಾಗುವುದು ಎಂದು ಭರವಸೆ ನೀಡಿದರು.

ಸಂಘದ ಪದಾಧಿಕಾರಿಗಳಾದ ಎನ್. ನೀಲಗಿರಿಯಪ್ಪ, ಎಲ್.ಎಂ.ಹೆಚ್ ಸಾಗರ್, ಎಂ.ಆರ್. ದುಗ್ಗೇಶ್, ಸುರೇಶ್ ಬಿರಾದಾರ್, ಪಿ. ಮಂಜಪ್ಪ, ಹೆಚ್.ಎಂ. ಪ್ರಭಾಕರ್, ಆರ್. ಮಂಜಪ್ಪ, ಪಿ. ಪ್ರಕಾಶ್, ಡಿ.ಮೈಲಾರಿ, ಹೆಚ್. ಎಂ.ಕೊಟ್ರೇಶ್, ಟಿ. ಸಂತೋಷ್, ಟಿ.ಹೆಚ್. ಚಿದಾನಂದ್, ಹೆಚ್. ನವೀನ್, ಹೆಚ್. ಅಜ್ಜಪ್ಪ, ಚಂದ್ರಪ್ಪ ಜಿ.ಹೆಚ್., ರಜನಿಕಾಂತ್, ದ್ಯಾಮಪ್ಪ, ಡಿ. ಮಂಜಪ್ಪ, ಬಿ.ಎಲ್. ಹನುಮಂತಪ್ಪ, ಗಿರೀಶ್ ಗೌಡ, ರಾಧಾಕೃಷ್ಣ, ಕೆಟಿಜೆ ನಗರ ರವಿ ಮತ್ತಿತರರಿದ್ದರು.



# ಸಹಾರಾದ ಸುಬ್ರತಾ ರಾಯ್ ನಿಧನ

## ಸೆಬಿ ಬಳಿ ಇರುವ 25 ಸಾವಿರ ಕೋಟಿ ರೂ.ಗಳ ಭವಿಷ್ಯದ ಚರ್ಚೆ



ನವದೆಹಲಿ, ನ. 15 – ಸಹಾರಾ ಸಮೂಹದ ಮುಖ್ಯಸ್ಥ ಸುಬ್ರತಾ ರಾಯ್ ಅವರು ಮಂಗಳವಾರ ರಾತ್ರಿ ನಿಧನರಾಗಿದ್ದಾರೆ. ಅವರ ನಿಧನದ ನಂತರ, ಮಾರುಕಟ್ಟೆ ನಿಯಂತ್ರಕ ಸೆಬಿ ಬಳಿ ಇರುವ 25 ಸಾವಿರ ಕೋಟಿ ರೂ.ಗಳ ಭವಿಷ್ಯ ಏನೆಂಬ ಚರ್ಚೆ ಮತ್ತೆ ಮುನ್ನೆಲೆಗೆ ಬಂದಿದೆ.

75 ವರ್ಷದ ರಾಯ್ ಸುದೀರ್ಘ ಕಾಲದ ಅಸ್ವಸ್ಥತೆಯಿಂದ ನಿಧನರಾಗಿದ್ದಾರೆ. ಅವರಿಗೆ ಸೇರಿದ ಸಹಾರಾ ಸಮೂಹದ ವಿರುದ್ಧ ಹಲವಾರು ಪ್ರಕರಣಗಳು ದಾಖಲಾಗಿದ್ದವು. ಈ ಬಗ್ಗೆ ರಾಯ್ ಕಾನೂನು ಹೋರಾಟ ನಡೆಸಿದ್ದರು.

ಸಹಾರಾ ಸಮೂಹದ ಉದ್ಯಮಗಳಾದ ಸಾಹಾರಾ ಇಂಡಿಯಾ ರಿಯಲ್ ಎಸ್ಟೇಟ್ ಕಾರ್ಪೊರೇಷನ್ ಹಾಗೂ ಸಹಾರಾ ಹೌಸಿಂಗ್ ಇನ್ವೆಸ್ಟ್‌ಮೆಂಟ್ ಕಾರ್ಪೊರೇಷನ್‌ಗಳು 3 ಕೋಟಿ ಹೂಡಿಕೆದಾರರಿಗೆ ಹಣ ಮರಳಿಸಬೇಕು ಎಂದು ಸೆಬಿ 2011ರಲ್ಲಿ ಆದೇಶ ಹೊರಡಿಸಿತ್ತು.

ನಿಯಮ ಹಾಗೂ ನಿಯಂತ್ರಣಗಳನ್ನು ಉಲ್ಲಂಘಿಸಿ ಈ ಹಣ ಪಡೆಯಲಾಗಿದೆ ಎಂದು ಸೆಬಿ ಆದೇಶ ನೀಡಿದ ನಂತರ, ಹೂಡಿಕೆದಾರರಿಗೆ ಹಣ ಮರಳಿಸುವ ನಿರ್ಧಾರ ತೆಗೆದುಕೊಳ್ಳಲಾಗಿತ್ತು.

ಮನವಿಗಳು ಹಾಗೂ ಪ್ರತಿ ಮನವಿಗಳ ಸುದೀರ್ಘ ಪ್ರಕ್ರಿಯೆ ನಂತರ, ಹಣ ಮರಳಿಸಲು ಸೆಬಿ ಆದೇಶಿಸಿದ್ದನ್ನು ಸುಪ್ರೀಂ ಕೋರ್ಟ್ ಆಗಸ್ಟ್ 31, 2012ರಲ್ಲಿ ಎತ್ತಿ ಹಿಡಿದಿತ್ತು. ಎರಡೂ ಉದ್ಯಮಗಳು ಶೇ.15ರ ಬಡ್ಡಿಯೊಂದಿಗೆ ಹಣ ಮರಳಿಸಬೇಕು ಎಂದು ತಿಳಿಸಲಾಗಿತ್ತು.

ಹೂಡಿಕೆದಾರರಿಗೆ ಸೇರಿದ 24 ಸಾವಿರ ಕೋಟಿ ರೂ. ಹಣವನ್ನು ಸೆಬಿ ಬಳಿ ದಾಖಲಿಸುವಂತೆ ಸಹಾರಾಗೆ ತಿಳಿಸಲಾಗಿತ್ತು. ಆದರೆ, ಶೇ.95ರಷ್ಟು ಹಣವನ್ನು ಈಗಾಗಲೇ ಹೂಡಿಕೆದಾರರಿಗೆ ಮರಳಿಸಿರುವುದಾಗಿ ಸಮೂಹ ತಿಳಿಸಿತ್ತು.

ಮಾರುಕಟ್ಟೆ ನಿಯಂತ್ರಕ ಸೆಬಿ ಇತ್ತೀಚೆಗೆ ದಾಖಲಿಸಿರುವ ವರದಿಯ ಪ್ರಕಾರ, ಕಳೆದ 11 ವರ್ಷಗಳಲ್ಲಿ ಸಹಾರಾದ ಎರಡು ಸಂಸ್ಥೆಗಳಲ್ಲಿ ಹೂಡಿಕೆ ಮಾಡಿರುವವರಿಗೆ 138.07 ಕೋಟಿ ರೂ. ಹಣ ಮಾತ್ರ ವಾಪಸ್ ದೊರೆತಿದೆ. ಈ ನಡುವೆ, ವಾಪಸ್ ಹಣ ನೀಡುವ ಸಲುವಾಗಿ ಸೆಬಿ ಖಾತೆಗಳಲ್ಲಿ ಇರುವ ಮೊತ್ತ ಬಡ್ಡಿ ಸಮೇತ 25,163 ಕೋಟಿ ರೂ.ಗಳಿಗೆ ತಲುಪಿದೆ.

ಎರಡೂ ಕಂಪನಿಗಳ ಷೇರುದಾರರಲ್ಲಿ ಬಹುತೇಕರು ಹಣ ವಾಪಸ್ ಪಡೆಯಲು ಮುಂದೆ ಬಂದಿಲ್ಲ. 2022-23ರಲ್ಲಿ ಸೆಬಿ ಕೇವಲ 7 ಲಕ್ಷ ರೂ. ಹಣವನ್ನು ಮರಳಿಸಿತ್ತು. ಇದೇ ಅವಧಿಯಲ್ಲಿ ಮರಳಿಸಬೇಕಾದ ಖಾತೆಗಳಲ್ಲಿರುವ ಹಣದ ಪ್ರಮಾಣ 1,087 ಕೋಟಿ ರೂ. ಹೆಚ್ಚಾಗಿತ್ತು.

ಮಾರ್ಚ್ 31, 2023ರವರೆಗೆ ಹಣ ವಾಪಸ್ ಕೇಳಿ 19,650 ಅರ್ಜಿಗಳು ಬಂದಿವೆ. ಈ ಪೈಕಿ 17,526 ಖಾತೆಗಳಿಗೆ ಸಂಬಂಧಿಸಿದ 138.07 ಕೋಟಿ ರೂ. ಹಣ ಮರಳಿಸಲಾಗಿದೆ. ಇದರಲ್ಲಿ 67.98 ಕೋಟಿ ರೂ.ಗಳ ಬಡ್ಡಿ ಸೇರಿದೆ ಎಂದು ಸೆಬಿ ತಿಳಿಸಿದೆ.

ಸಹಾರಾ ಸಮೂಹದಲ್ಲಿ ಉಳಿದ ಅರ್ಜಿಗಳಿಗೆ ಸಂಬಂಧಿಸಿದಂತೆ ಯಾವುದೇ ದಾಖಲೆಗಳು ಸಿಕ್ಕಿರಲಿಲ್ಲ. ಹೀಗಾಗಿ ಉಳಿದ ಅರ್ಜಿಗಳನ್ನು ತಿರಸ್ಕರಿಸಲಾಗಿದೆ.

## ಗ್ರಾಮಾಂತರದಲ್ಲಿ ಇಂದು ವಿದ್ಯುತ್ ಸರಬರಾಜು ವ್ಯತ್ಯಯ

ಶ್ಯಾಗಲೆ ವಿದ್ಯುತ್ ಉಪ ಕೇಂದ್ರದಲ್ಲಿ ತುರ್ತು ನಿರ್ವಹಣಾ ಕಾಮಗಾರಿಯನ್ನು ಹಮ್ಮಿಕೊಂಡಿರುವುದರಿಂದ ಶ್ಯಾಗಲೆ, ಕಂದಗಲ್ಲು, ಕೋಡಿಹಳ್ಳಿ, ಗೋಣಿವಾಡ ಗ್ರಾಮಗಳು ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಇಂದು ಬೆಳಿಗ್ಗೆ 10 ರಿಂದ ಸಂಜೆ 5 ವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

# ಪತ್ರಕರ್ತರ 38ನೇ ರಾಜ್ಯ ಸಮ್ಮೇಳನ ಲಾಂಛನ ಅನಾವರಣ ಮಾಡಿದ ಮುಖ್ಯಮಂತ್ರಿ



ಬೆಂಗಳೂರು, ನ. 15- ಬರುವ ಜನವರಿ ಮಾಹೆಯಲ್ಲಿ ದಾವಣಗೆರೆಯಲ್ಲಿ ನಡೆಸಲುದ್ದೇಶಿಸಿರುವ ಪತ್ರಕರ್ತರ 38ನೇ ರಾಜ್ಯ ಸಮ್ಮೇಳನದ ಲಾಂಛನವನ್ನು ಮುಖ್ಯಮಂತ್ರಿ ಸಿದ್ಧರಾಮಯ್ಯ ಅವರು ಅನಾವರಣ ಮಾಡಿದರು.

ಮುಖ್ಯಮಂತ್ರಿಗಳ ಗೃಹ ಕಛೇರಿ 'ಕಾವೇರಿ' ಯಲ್ಲಿ ಮೊನ್ನೆ ಏರ್ಪಾಡಾಗಿದ್ದ ಸರಳ ಸಮಾರಂಭದಲ್ಲಿ ದಾವಣಗೆರೆ ಜಿಲ್ಲೆಗೆ ಕೀರ್ತಿ ತರುವಂತಿರುವ ಪ್ರೇಕ್ಷಣೀಯ ಸ್ಥಳಗಳನ್ನೊಳಗೊಂಡಿರುವ ಲಾಂಛನವನ್ನು ಮುಖ್ಯಮಂತ್ರಿಗಳು ಅನಾವರಣ ಮಾಡಿದಾಗ ಪತ್ರಕರ್ತರು ಚಪ್ಪಾಳೆ ತಟ್ಟುವುದರ ಮೂಲಕ ಸಂಭ್ರಮಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ, ಸಮ್ಮೇಳನವು ರಾಜ್ಯದ ಸಮಸ್ತ ಪತ್ರಕರ್ತರ ಶ್ರೇಯೋಭಿವೃದ್ಧಿಗೆ ಪೂರಕವಾಗಿರುವ ನಿಟ್ಟಿನಲ್ಲಿ ಯಶಸ್ವಿಯಾಗಲಿ ಎಂದು ಶುಭ ಹಾರೈಸಿದರು.

ಸಮ್ಮೇಳನದಲ್ಲಿ ಭಾಗವಹಿಸಿ ಅದರ ಉದ್ಘಾಟನೆಯನ್ನು ನೆರವೇರಿಸುವಂತೆ ಗಣಿ, ಭೂ ವಿಜ್ಞಾನ ಮತ್ತು ತೋಟಗಾರಿಕೆ ಖಾತೆ ಸಚಿವರೂ ಆಗಿರುವ ರಾಜ್ಯ ಪತ್ರಕರ್ತರ ಸಮ್ಮೇಳನದ ಸ್ವಾಗತ ಸಮಿತಿ ಅಧ್ಯಕ್ಷ ಶಾಮನೂರು ಮಲ್ಲಿಕಾರ್ಜುನ್ ಅವರು ಮಾಡಿಕೊಂಡ ಮನವಿಯನ್ನು ಪ್ರಸ್ತಾಪಿಸಿದ ಮುಖ್ಯಮಂತ್ರಿಗಳು, ಸಮ್ಮೇಳನಕ್ಕೆ ಸರ್ಕಾರದಿಂದ ಸಹಕಾರ ನೀಡುವುದಲ್ಲದೇ, ಈ ಸಮ್ಮೇಳನದಲ್ಲಿ ತಾವು ಭಾಗವಹಿಸುವ ಬಗ್ಗೆ ಶೀಘ್ರ ದಿನಾಂಕ ನಿಗದಿಪಡಿಸುವುದಾಗಿ ಆಶ್ವಾಸನೆಯನ್ನು ನೀಡಿದರು.

ಚನ್ನಗಿರಿ ಶಾಸಕ ಬಸವರಾಜು ವಿ. ಶಿವಗಂಗಾ ಮಾತನಾಡಿ, ತಾವು ಸಮ್ಮೇಳನಕ್ಕೆ ಅಗತ್ಯ ಸಹಕಾರ ನೀಡುವುದಾಗಿ ಭರವಸೆ ನೀಡಿದರಲ್ಲದೇ, ನಾವೆಲ್ಲರೂ ಸೇರಿ ಸಮ್ಮೇಳನವನ್ನು ಯಶಸ್ವಿಗೊಳಿಸೋಣ ಎಂದರು.

ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯಾಧ್ಯಕ್ಷ ಶಿವಾನಂದ ತಗಡೂರ ಮಾತನಾಡಿ, 2 ದಿನಗಳ ಈ ಸಮ್ಮೇಳನವು ರಾಜ್ಯದ ಮಧ್ಯಬಿಂದು ದಾವಣಗೆರೆಯಲ್ಲಿ ನಡೆಯುತ್ತಿರುವುದರಿಂದ ರಾಜ್ಯದ ಮೂಲೆ-ಮೂಲೆಗಳಿಂದ ಸುಮಾರು 6000ಕ್ಕೂ ಹೆಚ್ಚು ಪತ್ರಕರ್ತರು ಪಾಲ್ಗೊಳ್ಳುವ ನಿರೀಕ್ಷೆ ಇದೆ ಎಂದು ತಿಳಿಸಿದರು.




ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ದಾವಣಗೆರೆ ಜಿಲ್ಲಾಧ್ಯಕ್ಷ ಇ.ಎಂ. ಮಂಜುನಾಥ ಮಾತನಾಡಿ, ಈ ಸಮ್ಮೇಳನವು 31 ವರ್ಷಗಳ ಹಿಂದೆ ಚಿತ್ರದುರ್ಗ ಜಿಲ್ಲೆಯ ವ್ಯಾಪ್ತಿಯಲ್ಲಿ ತಾಲ್ಲೂಕು ಆಗಿದ್ದ ದಾವಣಗೆರೆಯಲ್ಲಿ ನಡೆದಿತ್ತು. ಈಗ, ದಾವಣಗೆರೆ ಜಿಲ್ಲೆ ರಚನೆಯಾದ 25 ವರ್ಷಗಳ ನಂತರ ಇದೇ ಪ್ರಪ್ರಥಮ ಸಮ್ಮೇಳನ ಎಂದು ಹೇಳಿದರು.

ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಜಿ.ಸಿ. ಲೋಕೇಶ್, ದಾವಣಗೆರೆ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಎ. ಫಕೃದ್ದೀನ್, ಖಜಾಂಚಿ ಎನ್.ವಿ. ಬದರೀನಾಥ್, ರಾಜ್ಯ ಸಮಿತಿ ಸದಸ್ಯ ಕೆ. ಚಂದ್ರಣ್ಣ, ರಾಷ್ಟ್ರೀಯ ಮಂಡಳಿ ಸದಸ್ಯ ಎಸ್. ಕೆ. ಒಡೆಯರ್ ಅವರುಗಳು ಮುಖ್ಯಮಂತ್ರಿಗಳಿಗೆ ಗೌರವ ಸಲ್ಲಿಸಿದರು.

ಸಂಘದ ರಾಜ್ಯ ಸಮಿತಿ ಸದಸ್ಯ ದೇವರಾಜ್, ಸಂಘದ ದಾವಣಗೆರೆ ಜಿಲ್ಲಾ ಉಪಾಧ್ಯಕ್ಷರುಗಳಾದ ಹೆಚ್.ಎನ್. ಪ್ರಕಾಶ್, ಆರ್.ಎಸ್. ತಿಪ್ಪೇಸ್ವಾಮಿ, ಕಾರ್ಯದರ್ಶಿಗಳಾದ ಜಿ.ಎನ್. ನಿಂಗೋಜಿರಾವ್, ಜಿ.ಎಸ್. ವೀರೇಶ್, ನಿರ್ದೇಶಕರುಗಳಾದ ಎನ್. ಕೃಷ್ಣೋಜಿರಾವ್, ಹೆಚ್. ಚಂದ್ರಶೇಖರ್, ಸಿ. ವೇದಮೂರ್ತಿ, ಎಂ. ಗುರುಮೂರ್ತಿ, ಪತ್ರಕರ್ತರಾದ ಮಂಜುನಾಥ ಪಿ. ಕಾಡಜ್ಜಿ, ಕೆ. ಜೈಮುನಿ ಮತ್ತಿತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

# ಮಯೂರ್ ಗ್ಲೋಬಲ್ ಶಾಲೆಯ ಧನ್ವಿಗೆ 'ಸೋಮೇಶ್ವರ ಗಾನಸಿರಿ' ಪ್ರಥಮ ಪ್ರಶಸ್ತಿ





ದಾವಣಗೆರೆ, ನ. 15 - ನಗರದ ಸೋಮೇಶ್ವರ ವಿದ್ಯಾಲಯದಿಂದ ಹಮ್ಮಿಕೊಂಡಿದ್ದ 'ಸೋಮೇ ಶ್ವರ ಗಾನಸಿರಿ' ಸಂಗೀತ ಕಾರ್ಯಕ್ರಮದಲ್ಲಿ ಸ್ಥಳೀಯ ಮಯೂರ್ ಗ್ಲೋಬಲ್ ಶಾಲೆಯ ವಿದ್ಯಾರ್ಥಿನಿ ಕು.ಧನ್ವಿ ಹಿರೇಮಠ ಪ್ರಥಮ ಬಹು ಮಾನದೊಂದಿಗೆ ಶ್ರೀ ಸೋಮೇಶ್ವರ ಗಾನಸಿರಿ-2023 ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡಳು.

ನಿಟುವಳ್ಳಿಯಲ್ಲಿರುವ ನೇತ್ರಾವತಿ ಕನ್ವೆನ್ಷನ್ ಹಾಲ್‌ನಲ್ಲಿ ಇಂದು ನಡೆದ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಸೋಮೇಶ್ವರ ವಿದ್ಯಾಲಯದ ಗೌರವ ಕಾರ್ಯದರ್ಶಿ ಕೆ.ಎಂ.ಸುರೇಶ್ ಧನ್ವಿ ಹಿರೇಮಠ ಅವರಿಗೆ ಪ್ರಶಸ್ತಿ ನೀಡಿ ಗೌರವಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಕೆ.ಎಂ.ಸುರೇಶ್, ಕಳೆದ 17 ವರ್ಷಗಳಿಂದ ನಮ್ಮ ಸಂಸ್ಥೆ ಈ ವಿನೂತನ ಸಂಗೀತ ಕಾರ್ಯಕ್ರಮವನ್ನು ಯಶಸ್ವಿ ಯಾಗಿ ನಡೆಸಿಕೊಂಡು ಬರುತ್ತಿದೆ. ಮಕ್ಕಳಲ್ಲಿನ ಪ್ರತಿಭೆಯನ್ನು ಗುರುತಿಸಿ ಪ್ರೋತ್ಸಾಹಿಸುವ ವಿನೂತನ ಕಾರ್ಯಕ್ರಮ, ಶಾಲೆಗಳಲ್ಲಿರುವ ಪ್ರತಿಭೆಗಳನ್ನು ಹೊರಜಗತ್ತಿಗೆ ಪರಿಚಯಿಸುವ ಕಾರ್ಯಕ್ರಮವಾಗಿದೆ ಎಂದರು.

ಮುಖ್ಯ ಅತಿಥಿಯಾಗಿ ಆಗಮಿಸಿದ್ದ ಪೋಷಕರಾದ ಶ್ರೀಮತಿ ಜಯಶೀಲಾ ಉದ್ಘಾಟನೆ ಮಾಡಿದರು. ಹಿರಿಯ ವಿದ್ಯಾರ್ಥಿಗಳ ವಿಭಾಗದಲ್ಲಿ 5 ಸಾವಿರ ನಗದು, ಸೋಮೇಶ್ವರ ಗಾನಸಿರಿ ಪ್ರಶಸ್ತಿ, ಫಲಕ ಒಳಗೊಂಡ ಪ್ರಥಮ ಬಹುಮಾನಕ್ಕೆ ಮಯೂರ್ ಗ್ಲೋಬಲ್ ಶಾಲೆಯ ಕು. ದಾನವಿ ಆಯ್ಕೆಯಾದರು. ಇನ್ನು 3 ಸಾವಿರ ನಗದು ಪ್ರಶಸ್ತಿ ಫಲಕ ಒಳಗೊಂಡ ದ್ವಿತೀಯ ಬಹುಮಾನ ಕು. ಗೌತಮಿ ಹೆಚ್. ಆರ್. ಪಡೆದರೆ ತೃತೀಯ ಬಹುಮಾನಕ್ಕೆ ಸಮಿತ್ ಎಸ್. ಮುತಾಲಿಕ್, ಧ್ಯಾನ್ ಆಯ್ಕೆಯಾದರು. ಕಿರಿಯರ ವಿಭಾಗದಲ್ಲಿ ಪ್ರಥಮ ಸ್ಥಾನ ಖುಷಿ ಟಿ. ಪಿ, ದ್ವಿತೀಯ ಸ್ಥಾನ ಕು. ಗಾನವಿ ಹಾಗೂ ತೃತೀಯ ಸ್ಥಾನಕ್ಕೆ ಕು ಅನ್ವಯಿ, ಕು. ಚಿನ್ಮಯಿ ಎ. ಎನ್ ಆಯ್ಕೆಯಾದರು.

ಈ ಕಾರ್ಯಕ್ರಮದಲ್ಲಿ ತೀರ್ಪುಗಾರರಾಗಿ ಕರ್ನಾಟಕ ಸಂಗೀತ ವಿದುಷಿ ಶ್ರೀಮತಿ ರಜನಿ ರಘುನಾಥ್ ಕುಲಕರ್ಣಿ, ವೀಣಾ ವಿದ್ವಾಂಸರಾದ ಶ್ರೀಮತಿ ಗೀತಾ ಮಾಲತೇಶ್ ಆಗಮಿಸಿದ್ದರು. ಈ ವೇಳೆ ಪ್ರಾಂಶುಪಾಲರಾದ ಶ್ರೀಮತಿ ಪ್ರಭಾವತಿ, ಆಡಳಿತಾಧಿಕಾರಿ ಹರೀಶ್ ಬಾಬು ಮತ್ತಿತರರಿದ್ದರು.

## ಬಸ್ ಕಮರಿಗೆ ಉರುಳಿ 38 ಸಾವು

ದೊಡಾ (ಜಮ್ಮು ಮತ್ತು ಕಾಶ್ಮೀರ), ನ. 15 – ಜಮ್ಮು ಮತ್ತು ಕಾಶ್ಮೀರದ ದೋಡಾ ಜಿಲ್ಲೆಯಲ್ಲಿ ಬಸ್ ಒಂದು ಕಮರಿಗೆ ಉರುಳಿ 38 ಜನ ಸಾವನ್ನಪ್ಪಿದ್ದಾರೆ ಹಾಗೂ 20 ಜನ ಗಾಯಗೊಂಡಿದ್ದಾರೆ. 58 ಪ್ರಯಾಣಿಕರಿದ್ದ ಬಸ್, ತ್ರುಂಗಲ್ - ಅಸ್ಸಾರ್ ಬಳಿ ರಸ್ತೆಯಿಂದ ಜಾರಿ 300 ಅಡಿ ಆಳದ ಕಮರಿಗೆ ಬಿದ್ದಿದೆ. ಸಾವಿನ ಸಂಖ್ಯೆ ಇನ್ನಷ್ಟು ಹೆಚ್ಚಾಗುವ ಕಳವಳ ಇದೆ.

## ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ಶಿಲ್ಪಿ ಶಿವಶಂಕರ್‌ಗೆ ಸನ್ಮಾನ



ದಾವಣಗೆರೆ, ನ. 15- ಕರ್ನಾಟಕ ಸರ್ಕಾರದಿಂದ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿಗೆ ಭಾಜನರಾಗಿರುವ ಶಿಲ್ಪಿ ಶಿವಶಂಕರ್ ಅವರನ್ನು ದಾವಣಗೆರೆ-ಚಿತ್ರದುರ್ಗ ಜಿಲ್ಲಾ ಬ್ಯಾಂಕ್ ನಿವೃತ್ತರ ಒಕ್ಕೂಟದಿಂದ ಸನ್ಮಾನಿಸಿ, ಗೌರವಿಸಲಾಯಿತು.

ಒಕ್ಕೂಟದ ಅಧ್ಯಕ್ಷ ಎಸ್.ಟಿ. ಶಾಂತಗಂಗಾಧರ, ಕಾರ್ಯದರ್ಶಿ ಶಿವಕುಮಾರ್, ರವೀಂದ್ರ, ಸೂಗೂರಪ್ಪ, ಸತ್ಯಭಾಮ, ಮಹೇಶ್ವರಪ್ಪ, ಆರ್.ಜಿ. ಕುಲಕರ್ಣಿ, ಪರಮೇಶ್ವರಪ್ಪ ಕೊಪ್ಪದ, ಗುರುರಾಜ್ ಭಾಗವತ್, ಆರ್.ಜಿ. ಶೆಟ್ಟರ್, ಮಂಜುನಾಥ್ ರಾವ್, ಮಧುಕರ್, ಮಹದೇವಪ್ಪ, ಸ್ವಾಮಿ, ಹೆಗ್ಗಡೆ ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

# 'ಶಾಮನೂರು ಡೈಮಂಡ್, ಶಿವಗಂಗಾ ಕಪ್' ಕ್ರಿಕೆಟ್ ಟೂರ್ನಿ



**ನಗರದಲ್ಲಿ 30ರಿಂದ ಕ್ರಿಕೆಟ್ ಹಬ್ಬ**

ದಾವಣಗೆರೆ, ನ.15- ದಾವಣಗೆರೆ ಇಲೆವೆನ್ಸ್ ಕ್ರಿಕೆಟ್ ಕ್ಲಬ್ ಹಾಗೂ ಜಿಲ್ಲಾ ಕ್ರೀಡಾಪಟುಗಳ ಸಾಂಸ್ಕೃತಿಕ ಸಂಘದಿಂದ ದಿ. ಶ್ರೀಮತಿ ಪಾರ್ವತಮ್ಮ ಶಾಮನೂರು ಶಿವಶಂಕರಪ್ಪ ಅವರ ಸವಿನೆನಪಿನ ಅಂಗವಾಗಿ ರಾಷ್ಟ್ರಮಟ್ಟದ ಹೊನಲು ಬೆಳಕಿನ 'ಶಾಮನೂರು ಡೈಮಂಡ್ ಹಾಗೂ ಶಿವಗಂಗಾ ಕಪ್' ರಾಷ್ಟ್ರಮಟ್ಟದ ಲೀಗ್ ಕಂ ನಾಕೌಟ್ ಕ್ರಿಕೆಟ್ ಟೂರ್ನಿಯನ್ನು ಹಮ್ಮಿಕೊಳ್ಳಲಾಗಿದೆ ಎಂದು ಕ್ರೀಡಾಪಟುಗಳ ಸಂಘದ ಅಧ್ಯಕ್ಷ ದಿನೇಶ್ ಕೆ.ಶೆಟ್ಟಿ ತಿಳಿಸಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಇದೇ ದಿನಾಂಕ 30ರಿಂದ ಡಿಸೆಂಬರ್ 3ರವರೆಗೆ ನಾಲ್ಕು ದಿನಗಳ ಕಾಲ ನಗರದ ಜಿಲ್ಲಾ ಕ್ರೀಡಾಂಗಣದಲ್ಲಿ ಟೂರ್ನಿಗಳು ನಡೆಯಲಿದ್ದು, ಮಹಾರಾಷ್ಟ್ರ ಹಾಗೂ ಕರ್ನಾಟಕ ರಾಜ್ಯದ ಬೆಂಗಳೂರು, ಮೈಸೂರು, ಮಂಗಳೂರು, ಉಡುಪಿ , ತುಮಕೂರು, ಹುಬ್ಬಳ್ಳಿ, ಶಿವಮೊಗ್ಗ ಸೇರಿದಂತೆ 32 ತಂಡಗಳು ಭಾಗವಹಿಸಲಿವೆ ಎಂದು ಹೇಳಿದರು.

ಭಾಗವಹಿಸುವ 460 ಆಟಗಾರರಿಗೆ ಟಿ. ಶರ್ಟ್, ಊಟ ಹಾಗೂ ವಸತಿ ಸೌಲಭ್ಯ ಕಲ್ಪಿಸಲಾಗುವುದು. ಟೂರ್ನಿಯಲ್ಲಿ ವಿಜೇತರಿಗೆ 5,05,555 ರೂ. ಪ್ರಥಮ ಬಹುಮಾನ ಹಾಗೂ ಶಾಮನೂರು ಡೈಮಂಡ್ ಕಪ್, ದ್ವಿತೀಯ ಸ್ಥಾನಕ್ಕೆ 3,05,555 ರೂ. ಹಾಗೂ ಶಿವಗಂಗಾ ಕಪ್, ತೃತೀಯ ಬಹುಮಾನ 1,55,555 ರೂ. ಹಾಗೂ ಆಕರ್ಷಕ ಟ್ರೋಫಿ ನೀಡಲಾಗುವುದು. ವೈಯಕ್ತಿಕ ಉತ್ತಮ ಆಲ್‌ರೌಂಡರ್‌ಗೆ ಹೀರೋ ಹೊಂಡಾ ಬೈಕ್ ನೀಡಲಾಗುವುದು ಎಂದರು.

ಪಂದ್ಯ ವೀಕ್ಷಣೆಗೆ ಕ್ರೀಡಾಭಿಮಾನಿಗಳಿಗೆ ಕುಳಿತು ನೋಡಲು ಗ್ಯಾಲರಿ ವ್ಯವಸ್ಥೆ ಮಾಡಲಾಗುತ್ತದೆ. ಟೂರ್ನಿಯಲ್ಲಿ ಮೂರನೇ ತೀರ್ಪುಗಾರರ ವ್ಯವಸ್ಥೆ ಮಾಡಲಾಗಿದ್ದು, ಪಂದ್ಯಗಳನ್ನು ಯೂ ಟ್ಯೂಬ್‌ನಲ್ಲಿ ನೇರ ಪ್ರಸಾರ ಮಾಡಲಾಗುತ್ತದೆ ಎಂದರು.

ಟೂರ್ನಿಯಲ್ಲಿ ಪೊಲೀಸ್ ತಂಡ, ಪತ್ರಕರ್ತರ ತಂಡ, ವರ್ತಕರ ತಂಡ, ಜಿಲ್ಲಾಧಿಕಾರಿಗಳ ತಂಡ ಹಾಗೂ ಪಾಲಿಕೆ ಸದಸ್ಯರ ತಂಡ, ವಕೀಲರ ತಂಡ ಸೇರಿ 6 ತಂಡಗಳುಳ್ಳ ಅಫಿಷಿಯಲ್ ಕಪ್ ಪಂದ್ಯಾವಳಿ ಆಡಿಸಲಾಗುವುದು ಎಂದು ಹೇಳಿದರು.


## ಹೃತ್ಪೂರ್ವಕ ಕೃತಜ್ಞತೆಗಳು







ದೊಡ್ಡಬಾತಿ ಗ್ರಾಮದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದಿಂದ
ದೊಡ್ಡಬಾತಿ ಮತ್ತು ಹಳೇಬಾತಿ ಗ್ರಾಮದ ರೈತರಿಗೆ ಸಾಲ ಮಂಜೂರು ಮಾಡಲು ಸಹಕರಿಸಿದ
ಕಾಂಗ್ರೆಸ್ ಮುಖಂಡರಾದ ಶ್ರೀ ಜೆ. ಆರ್. ಷಣ್ಮುಖಪ್ಪ ಅವರಿಗೆ
ಹಾಗೂ ದೊಡ್ಡಬಾತಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ

ಬಿ.ಎಂ. ಉಜ್ಜೇಶ್, ಅಧ್ಯಕ್ಷರು
ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ, ದೊಡ್ಡಬಾತಿ

ರೇವಮ್ಮ ರೇವಣಸಿದ್ದಪ್ಪ, ಉಪಾಧ್ಯಕ್ಷರು
ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ, ದೊಡ್ಡಬಾತಿ.

❖ ಬಿ.ಜಿ. ವಿಶ್ವಾಂಬರ ನಿರ್ದೇಶಕರು ❖ ಬಿ.ಎಂ. ಶೇಖರಪ್ಪ ನಿರ್ದೇಶಕರು
❖ ಭಾನುವಳ್ಳಿ ಸಿದ್ದಪ್ಪ ನಿರ್ದೇಶಕರು ❖ ಹಲಬಣ್ಣರ ಸಿದ್ದಪ್ಪ ನಿರ್ದೇಶಕರು
❖ ಕೆ.ಬಿ. ಬಸವರಾಜ್ ನಿರ್ದೇಶಕರು ❖ ಪಿ.ಎ. ನಾಗರಾಜ್ ನಿರ್ದೇಶಕರು
❖ ಹೆಚ್. ಆರ್. ಶಿವಕುಮಾರ್ ನಿರ್ದೇಶಕರು ❖ ಎ.ವಿ. ನಾಗರಾಜ್ ನಿರ್ದೇಶಕರು
❖ ಮರುಳಸಿದ್ದಪ್ಪ ಎಂ. ನಿರ್ದೇಶಕರು ❖ ಗಾಯತ್ರಮ್ಮ ಶಾಂತಪ್ಪ ನಿರ್ದೇಶಕರು

ಇವರುಗಳಿಗೆ ಹೃತ್ಪೂರ್ವಕ ಕೃತಜ್ಞತೆಗಳು.

**ದೊಡ್ಡಬಾತಿ, ಹಳೇಬಾತಿ ಗ್ರಾಮಸ್ಥರು**



## VISION INTERNATIONAL SCHOOL KARUR DAVANAGERE



**ಬಸ್ ಚಾಲಕರು ಬೇಕಾಗಿದ್ದಾರೆ**

ಹೆವಿ ಲೈಸೆನ್ಸ್‌ವುಳ್ಳ ಅನುಭವಿ ಬಸ್ ಚಾಲಕರು ದಾವಣಗೆರೆ ಮತ್ತು ಹರಿಹರದಿಂದ ವಿಷನ್ ಶಾಲೆಗೆ ಕರೆತರಲು ಜವಾಬ್ದಾರಿಯುತವಾದ 3 ವರ್ಷ ಅನುಭವವುಳ್ಳ ವಾಹನ ಚಾಲಕರು ಬೇಕಾಗಿದ್ದಾರೆ. ಆಕರ್ಷಕ ಸಂಬಳ ನೀಡಲಾಗುವುದು. ಆಸಕ್ತ ಚಾಲಕರು ದಿನಾಂಕ: 18–11–2023 ರಿಂದ 25–11–2023ರ ಒಳಗಾಗಿ ಬೆಳಿಗ್ಗೆ 10.30 ಗಂಟೆಗೆ ತಮ್ಮ ಇತ್ತೀಚಿನ ಭಾವಚಿತ್ರ, ಆಧಾರ ಕಾರ್ಡ್, ಹೆವಿ ಲೈಸೆನ್ಸ್ ಪ್ರತಿಗಳೊಂದಿಗೆ ಈ ಕೆಳಕಂಡ ವಿಳಾಸಕ್ಕೆ ನೇರ ಸಂದರ್ಶನಕ್ಕೆ ಹಾಜರಾಗಿ.

Venue: VISION INTERNATIONAL SCHOOL
Near D.C. Office, Karur Industrial Area, Davanagere
M: 72042 46866, 99643 27490



## ಪ್ರಥಮ ವರ್ಷದ ಪುಣ್ಯಸ್ಮರಣೆ



**ಶರಣ ದಿ. ಎಸ್.ಎಂ. ಶಿವಾನಂದಯ್ಯನವರು**
ನಿವೃತ್ತ ಮುಖ್ಯೋಪಾಧ್ಯಾಯರು
ನಿಧನ : 15.11.2022

ನೀವು ಹಾಕಿಕೊಟ್ಟ ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಿದ್ದೇವೆ.
ನಿಮ್ಮ ಆಶೀರ್ವಾದವೇ ನಮಗೆ ಶ್ರೀರಕ್ಷೆ.

ಶ್ರೀಮತಿ ರತ್ನಮ್ಮ ಮತ್ತು ಮಕ್ಕಳು, ಅಳಿಯಂದಿರು, ಹಾಗೂ ಮೊಮ್ಮಕ್ಕಳು ಸಹೋದರ ಹಾಗೂ ಸಹೋದರಿಯರು
ತರಳಬಾಳು ಬಡಾವಣೆ, ವಿದ್ಯಾನಗರ, ದಾವಣಗೆರೆ.